TIGHT BINDING BOOK

UNIVERSAL LIBRARY
OU_200429
UNIVERSAL LIBRARY

ಕಂ.ಸಂ.ನಂ. ೨

# ಹರಿದ ಸೆರಗು

( ಕತೆಗಳ ಸಂಕಲನ )

★

ಶ್ರೀ. ಎ. ಕಿ. ಶೀಗೇಹಳ್ಳಿ



ಶರಾವತಿ ಪ್ರಕಟನೆ ಮಂದಿರ
ಶಿರಸಿ (ಉ. ಕ.)

ಮಾರಾಟಗಾರರು :

**ಸಮಾಜ ಪುಸ್ತಕಾಲಯ, ಧಾರವಾಡ**

ಮೊದಲ ಮುದ್ರಣ

**ಎಪ್ರಿಲ್–೧೯೪೯**

( ಹಕ್ಕುಗಳೆಲ್ಲ ಲೇಖಕರವು )

**ಬೆಲೆ: ೧—೮—೦**

ಮುದ್ರಕರು:
**ಎಚ್. ಬಿ. ನವಲೂರ**
ಸಿಂದಮಾತಾ ಮುದ್ರಣಾಲಯ
ಗಾಂಧೀಚೌಕ, ಧಾರವಾಡ

ಪ್ರಕಾಶಕರು:
ವ್ಹಿ. ಟಿ. ಶೀಗೇಹಳ್ಳಿ
( ಶಿ. ಪ್ರಾ. ಮಂ. ಶಿರಸಿ ಪರವಾಗಿ)

# ಸಂಪಾದಕರ ಮಾತು

ನಮ್ಮ ಹೆಣಗಾಟದಲ್ಲಿಯ ಎರಡನೆಯ ಪೊಟ್ಟಲಿದು. ಕೆಲವೊಂದು ಅನಿವಾರ್ಯ ತೊಂದರೆಯ ಮೂಲಕ ಸಕಾಲಕ್ಕೆ ಇದನ್ನು ಹೊರಡಿಸುವದಾಗಲಿಲ್ಲ ಶ್ರೀ. ಪ. ಸು. ಭಟ್ಟರ 'ಸುಖಲೋಕ'ವು ಎರಡನೆಯ ಕುಸುಮವಾಗಿ ಅರಳಬೇಕಾಗಿತ್ತು; ಆದರೆ ಹಲವು ಕಾರಣಗಳಿಂದಾಗಿ ಅದು ಅರಳದೆ ಶ್ರೀ. ವಿ. ತಿ. ಶೀಗೆಹಳ್ಳಿ ಅವರ 'ಹರಿದ ಸೆರಗು' ಎರಡನೆಯ ಕುಸುಮವಾಗಿ ಅರಳಿದೆ. ಅದಕ್ಕಾಗಿ ಸಹೃದಯರಾದ ಓದುಗರು ನಮ್ಮನ್ನು ಕ್ಷಮಿಸುರೆಂದು ನಂಬಿರುತ್ತೇವೆ.

ತಮ್ಮ ಕೃತಿಯನ್ನು ನಮ್ಮ ಮಾಲೆಯಲ್ಲಿ ಅರಳಿಸಲು ಅತ್ಯಾದರದಿಂದ ಕೊಟ್ಟು ನೆರವು ನೀಡಿದ ಶ್ರೀ. ವಿ. ತಿ. ಶೀಗೆಹಳ್ಳಿಯವರಿಗೂ, ಮುಖಚಿತ್ರ ಒದಗಿಸಿಕೊಟ್ಟ ಪುಣೆಯ, 'ಕುಲ್ಕರ್ಣಿ ಗ್ರಂಥಾಗಾರ'ದ ಶ್ರೀ. ಕುಲಕರ್ಣಿ ಪಂಡಿತರಾಯರಿಗೂ, ಮುದ್ರಿಸಿಕೊಟ್ಟ ಮುಂಬಯಿ ಶ್ರೀ ಲಕ್ಷ್ಮೀನಾರಾಯಣ ಮುದ್ರಣಾಲಯದವರಿಗೂ, ಪುಸ್ತಕವನ್ನು ಅಂದವಾಗಿ, ಸ್ವಲ್ಪೇ ದಿನಗಳಲ್ಲಿ ಮುದ್ರಿಸಿಕೊಟ್ಟ ಧಾರವಾಡ ಹಿಂದಮಾತಾ ಮುದ್ರಣಾಲಯದವರಿಗೂ ನಾವು ಕೃತಜ್ಞರಾಗಿದ್ದೇವೆ.

# ಕತೆಗೆ ಮುನ್ನ....

## ‘ ಹರಿದ ಸೆರಗು ’

ಇದು ನನ್ನ ಮೊದಲ ಕಥಾಸಂಗ್ರಹ; ಮೊದಲ ಪ್ರಯತ್ನ. ಮೊದಲ ಪ್ರಯತ್ನದಲ್ಲಿ ಪೂರ್ಣ ಯಶಸ್ವಿಯಾಗುವದಂತೂ ದುಸ್ಸಾಧ್ಯವಷ್ಟೇ? ಅಂತು, ನನ್ನ ಕತೆಗಳು ಎಷ್ಟರಮಟ್ಟಿಗೆ ಉನ್ನತ ಸ್ಥಿತಿಯೆಡೆಗೆ ಸಾಗಿರುವವೆಂಬುದನ್ನು ಪ್ರಿಯ ಓದುಗರೇ ಅರಿಯರು, ತಪ್ಪು ಒಪ್ಪುಗಳ ಕುರಿತು ನನಗೆ ತಿಳಿಸಿ ನನ್ನ ಈ ಬಗೆಯ ಉನ್ನತಿಗೆ ಸಹಾಯಕರಾದರೆ ನಾನು ಅವರಿಗೆ ಋಣಿ

ಇಂದು ಈ ಜಿಲ್ಲೆಯಲ್ಲಿನ ಜನಜೀವನ ಯಾವ ಮುಖದಿಂದ ನೋಡಿದರೂ ಹೇಗಿರಬೇಕಾಗಿತ್ತೋ ಹಾಗೆ ಯಾವ ಅಂಶದಿಂದಲೂ ಇಲ್ಲದಾಗಿದೆ. ಈ ಪರಿಣಾಮವಾಗಿ ಜಿಲ್ಲೆಯ ಹಲವರ ಜೀವನ ಸಹಜಸುಂದರ ಸೆರಗಿನಂತಿರದೇ ಹರಿದ ಸೆರಗು ಆಗಿರುತ್ತದೆ. ಹಾಗಾಗಿ, ಎಲ್ಲವೂ ನಿಶ್ಚಯವಿಲ್ಲದೆ ಕಕ್ಕಾಬಿಕ್ಕಿಯಾಗಿ ಎತ್ತಲೋ, ಗೊತ್ತುಗುರಿಯಿಲ್ಲದೆ ಸಾಗುತ್ತಿವೆ!

ತರತರದ ಚಾಣಗಳ ಉಪಯೋಗದಿಂದ ಒಂದು ಮೂರ್ತಿ ಕೆತ್ತಲ್ಪಟ್ಟು ಸಿದ್ಧವಾಗುತ್ತದೆ. ಅಂತೆ, ನನ್ನ ಈ ಬಗೆಗೆ—ಪ್ರಯತ್ನಕ್ಕೆ ಗುರುಗಳಾದ ಗ. ಕೃ. ಹೆಗಡೆಯವರೂ, ಗೆಳೆಯರಾದ ಶಂಕರ ಪಾಠಕ, ಪ. ಸು. ಭಟ್ಟ ಇವರೆಲ್ಲ ಕಾರಣರಾಗಿದ್ದಾರೆ. ಅಲ್ಲವೆ, ದಿನದಿನದ ಒಡನಾಟದಲ್ಲಿ ಸೇರಿ ಕತೆಗಳ ಅನುಭವಕ್ಕೂ, ಬರೆಯುವದಕ್ಕೂ ಕಾರಣರಾದವರು ಸೀತಣ್ಣ, ಮಾಚ, ದತ್ತಣ್ಣ, ಬುಳ್ಳಿ, ಲಕ್ಷಣ್ಣ, ರಾಧಾ ಮುಂತಾದ ಜೋಡಿಯ ಗೆಳೆಯರು ಇವರಿಗೆಲ್ಲ ನನ್ನ ನಲುಮೆಯ ವಂದನೆಗಳು.

ನನ್ನ ಕರೆಗೆ ಓ ಕೊಟ್ಟು, ಪ್ರೇಮಾದರದಿಂದ ಮುನ್ನುಡಿ ಬರೆದು ಕೊಟ್ಟ ಹಿರಿಯರಾದ ಶ್ರೀ. ರಾ. ವೇ. ವಾಲಗಳ್ಳಿಯವರಿಗೂ ನನ್ನ ವಂದನೆಗಳು.

ನನ್ನ ಕಥಾಸಂಗ್ರಹವನ್ನು ಪ್ರಕಟಿಸಿದ ಪ್ರಕಟನೆ ಮಂದಿರದ ಬಳಗದವರಿಗೆ ನನ್ನ ಕೃತಜ್ಞತೆಗಳು.

ಶಿರಸಿ
ವಿಜಯದಶಮಿ
( ೧೯೪೯ )

ವಿ. ತಿ. ಶೀಗೇಹಳ್ಳಿ

# ಮುನ್ನುಡಿ

‘ ಹರಿವ ಸೆರಗು ’ ಇದು ನನ್ನ ತರುಣ ಗೆಳೆಯರ ಕತಾಸಂಗ್ರಹ. ಈ ಸಂಗ್ರಹಕ್ಕೆ ನನ್ನ ಮುನ್ನುಡಿಯೊಂದನ್ನು ಬರೆದು ಕೊಡಬೇಕೆಂದು ಅವರು ಬಯಸಿದರು. ಅದನ್ನು ಒಪ್ಪಿ ಈ ಕೆಲಸ ಮಾಡುತ್ತಿದ್ದೇನೆ. ಪುಸ್ತಕಗಳಿಗೆ ಮುನ್ನುಡಿ ಬೇಕೆ ಬೇಡವೆ ಅದರಿಂದ ಹಿತವೇನು—ಇವೆಲ್ಲ ಇನ್ನೂ ನನಗೆ ಸಮಸ್ಯೆಯಾಗಿಯೇ ನಿಂತಿವೆ. ಒಟ್ಟಿನಲ್ಲಿ ನನ್ನ ಗೆಳೆಯರು ನನ್ನ ಮುನ್ನುಡಿ ಬಯಸಿ, ಜಾರಿದ್ದಾರೆ. ಕಾರಣವಿಷ್ಟೆ,—ಅವರು ಈ ಕೆಲಸದಲ್ಲಿ ಹೊಸಬರು; ನಾನೂ ಈ ಕೆಲಸದಲ್ಲಿ ಹೊಸಬ. ನಾವಿಬ್ಬರೂ ತೆಕ್ಕೆಬಿದ್ದು ಈ ಆಗದ ಕೆಲಸದಲ್ಲಿ ಧುಮುಕಿದ್ದೇವೆ. ಇದೊಂದು ಹುಚ್ಚುತನ. ಈ ಹುಚ್ಚುತನವನ್ನು, ನಮ್ಮ ಜನ ನೋಡಲಿ,ನೋಡಿ ನಕ್ಕರೆ ನಗಲಿ, ಮರುಗಿದರೆ ಮರುಗಲಿ, ಇಲ್ಲವೆ ಉಪೇಕ್ಷೆ ಮಾಡಿದರೆ ಮಾಡಲಿ, ಎಂದೇ ನನ್ನ ಆಶೆ, ನನ್ನ ಗೆಳೆಯರದ್ದೂ ಅದೇ ರೀತಿ ಇರಬಹುದು ಎಂದು ನಂಬಿದ್ದೇನೆ; ಅದಕ್ಕೇ ಮುಂದರಿದ್ದೇವೆ.

‘ ಹರಿದ ಸೆರಗು ’ ಈ ಕತಾಸಂಗ್ರಹದಲ್ಲಿ ಹತ್ತು ಕತೆಗಳಿವೆ. ತಮ್ಮ ಸುತ್ತಮುತ್ತಲಿರುವ ಜನಜೀವನದ ಸಿಹಿ-ಕಹಿಯನ್ನು ಚೆನ್ನಾಗಿ ರುಚಿ ನೋಡಿ ಜೀವನ ಚಿತ್ರಗಳನ್ನು ಚಿತ್ರಿಸಿದ್ದಾರೆ. ನಮ್ಮ ಸಮಾಜದಲ್ಲಿಯ ಬಡತನ-ದಾರಿದ್ರ್ಯ—ದುಃಖ ಇವುಗಳನ್ನು ಕಂಡು ಮರುಗಿದ್ದಾರೆ. ಅದಕ್ಕಾಗಿ, ‘ ಅನ್ನ ದೇವರಿಗಾಗಿ, ’ ‘ ಹರಸಿವಳು ’ ಎಂಬ ಕತೆ ಕಟ್ಟಿದ್ದಾರೆ. ನಮ್ಮ ಸಮಾಜದ ದಾಂಪತ್ಯ ಜೀವನ, ನಾಟಕೀಯವಾಗುತ್ತಿರುವದನ್ನು ಕಂಡು ನೊಂದಿದ್ದಾರೆ. ಅದಕ್ಕಾಗಿ ‘ ನೊಂದ ಹೃದಯ ’ ‘ ಕುಸುಮ ಕಂಟಕ ’ ನಿರ್ಮಾಣವಾಗಿದೆ. ನಮ್ಮ ಉತ್ತರಕನ್ನಡದ ಒಂದು ಸಮಾಜದ ಹೃದಯದ ಸತ್ಯ-ವಿಶ್ವಾಸ-ಪ್ರೇಮ ಇವುಗಳನ್ನು ಕಂಡು ಒಂದು ರೀತಿಯ ಸಮಾಧಾನ ತಾಳಿದ್ದಾರೆ. ಅದಕ್ಕಾಗಿ ‘ಋಣವಿಮೋಚನೆ’, ‘ಹಳ್ಳಿಯ ನೆನಹು’ ಅವರ ಲೆಕ್ಕಣಿಕೆಯಲ್ಲಿ ಮೂಡಿದೆ ಇನ್ನು ನಮ್ಮ ಸಮಾಜದ ಲೈಂಗಿಕ ಶಿಥಿಲತೆ,ವ್ಯಭಿಚಾರ ಇವುಗಳನ್ನು ನೋಡಿ, ಅವರ ಹೃದಯ ಕೆರಳಿ, ‘ ಅವರೇಕೆ, ಇನ್ನೂ ಬರಲಿಲ್ಲ ? ’, ‘ಹರಿದ ಸೆರಗು’

ಎಂಬ ರುದ್ರಮಯ ಕತೆ ಹೆಣೆದಿದ್ದಾರೆ. ಇನ್ನುಳಿದಿರುವದು, ' ದೇವರು ಕ್ಷಮಿಸಿರುವ ' ಇದು ಅವರ ಹೊಸ ಹಾದಿಯೆಂದು ಹೇಳಬಹುದು. ಉದ್ದೇಶ ಕಾಣದಾಗಿದೆ. ' ಕುರುಡಃ ಕಣ್ಣು ' ಹಾಗೆಯೇ ! ಹೊಸ ಹಾದಿ-ಹೊಸ ಸೃಷ್ಟಿ-ಹೊಸ ರೀತಿ. ಎಲ್ಲದರಲ್ಲಿಯೂ ನಮ್ಮ ಸಮಾಜದ ಎದುರಿಗೆ ಭೂತಾಕಾರವಾಗಿ ನಿಂತಿರುವ, ಬಡತನ-ದಾರಿದ್ರ್ಯ-ದುಃಖ, ಈ ಸಮಸ್ಯೆ ಹಾಸುಹೊಕ್ಕಾಗಿದೆ. ಇದು ನಮ್ಮ ತಲೆ-ತಲಾಂತರದಿಂದಲೂ, ನಮ್ಮ ಹೃದಯ ಬುದ್ಧಿ-ಮನಸ್ಸುಗಳನ್ನು ಕುಟುಕುತ್ತಿರುವ ಸಮಸ್ಯೆ. ಈ ಕತೆಗಳೆಲ್ಲ ಅಂತಹ ಸಮಸ್ಯೆಗಳನ್ನು ಬಿಡಿಸಲು ಹೋಗಲಾಡಿಸಲು ಶಕ್ಯವಾದರೆ ? ನಮ್ಮ ಜನ-ಅರಿತುಕೊಳ್ಳಬಹುದಾದರೆ ? ಅವೆಲ್ಲ 'ರೆ' ರಾಜ್ಯದ ಮಾತು. ಲೇಖಕರು ನೊಂದು-ಬೆಂದು-' ಅಯ್ಯೋ, ದೇವರೇ, ಈ ಅನ್ನದೇವರಿಗಾಗಿ ಏತಕ್ಕೆ ಕಾಯಿಸುತ್ತಿರುವೆ ? ನಮ್ಮನ್ನು ಕ್ಷಮಿಸಿ, ಹರಿಸು ! ಆ ಒಳ್ಳೇಗಳಿಗೆ ಏಕೆ ಇನ್ನೂ ಬರಲಿಲ್ಲ ? " ಎಂದು ಮೊರೆಯಿಟ್ಟಿದ್ದಾರೆ. ಇದು ಅವರು ನಮ್ಮ ನಾಡಿಗೆ ಅರ್ಪಿಸಿದ ಅಲ್ಪಸೇವೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಸಾಹಿತಿಗಳಿಲ್ಲ; ಸಾಹಿತ್ಯವಿಲ್ಲ, ಎನ್ನುವ ಕೂಗು ಬಹುದಿನಗಳಿಂದ ಇದ್ದಿತ್ತು, ಆದರೆ ಇತ್ತೀಚೆಗೆ ನಮ್ಮ ಹಲವು ತರುಣ ಗೆಳೆಯರ ಸಾಹಸ-ಪರಿಶ್ರಮ-ಧೃಡತೆ ಇವುಗಳಿಂದ ಆ ಕೂಗು ಕೇಳಿಸದಂತಾಗಿದೆ. ಅವರೆಲ್ಲ ಉತ್ತರಕನ್ನಡ ಜಿಲ್ಲೆಯ ಸಾಹಿತ್ಯ ಭಂಡಾಗಾರವನ್ನು ಉತ್ತಮ ಕೃತಿರತ್ನಗಳಿಂದ ತುಂಬಲು ಮುಂದರಿದಿದ್ದಾರೆ, ತುಂಬುತ್ತಲೂ ಇದ್ದಾರೆ, ಮುಂದೆ ತುಂಬುವ ಭರವಸೆಯೂ ಇದೆ. ಆದರೆ ಒಂದು ಮಾತು, ಇಲ್ಲಿ ಹೇಳದೆ ವಿಧಿಯಿಲ್ಲದಾಗಿದೆ ಈ ಗೆಳೆಯರೆಲ್ಲ ನಮ್ಮ ಜಿಲ್ಲೆಯ ಒಂದು ಪಂಥದವರು. ಆ ಪಂಥದವರಾಡುವ ಭಾಷೆಯನ್ನೇ ಮುಖ್ಯವಾಗಿಟ್ಟುಕೊಂಡು ನಮ್ಮ ಸಮಾಜದ ನಗ್ನ ಚಿತ್ರವನ್ನು ಬರೆದಿದ್ದಾರೆ. ಆಗ ' ಆ ಚಿತ್ರ ಇಂಥದೇ ಪಂಥದವರ ಚಿತ್ರ ಇದು ' ಎಂದು ಕೈ ಬೊಟ್ಟುಮಾಡಿ ತೋರಿಸಲು ಬರಲಾರದು, ತೋರಿಸಲೂ ಬಾರದು. ಯಾರು ಏನೇ ಬರೆದರೂ, ಬಡತನ-ದಾರಿದ್ರ್ಯ-ದುಃಖ-ವ್ಯಭಿಚಾರ ಲೈಂಗಿಕ ಶಿಥಿಲತೆ ಇವೇ ಅಲ್ಲಿವೆ, ಅವುಗಳಲ್ಲಿ ಕಂಡುಬರುವ ಮುಖ್ಯ ವಿಷಯ ! ಈಗ ನಮ್ಮ ತಲೆತಿನ್ನುತ್ತಿರುವದೇ ಅದೇ ವಿಷಯವಾಗಿದೆ. ಹೀಗಿರುವಾಗ ಸಾಹಿತಿಯು, ಈ ಸಮಸ್ಯೆಯನ್ನೇ ಎತ್ತಿ

ಹಿಡಿಗು ಜೀವನ ಚಿತ್ರಗಳನ್ನು ತನ್ನ [illegible] ರುವ ಪ್ರಚಲಿತ ಭಾಷೆಯಲ್ಲಿ ಚಿತ್ರಿಸಲೆತ್ನಿಸಿದರೆ, ' ಇದು ಆ [illegible]ಜದವರ ತಪ್ಪು. ಇಂಥ ಪಂಥದವರ ದೌರ್ಬಲ್ಯ, ' ಎನ್ನಲ[illegible] ? ಆ ರೀತಿ ಹೇಳುವದು ವಿವೇಕಕ್ಕೆ ಒಪ್ಪಬಹುದೆ ? ಇತ್ತೀಚಿಗೆ ನಮ್ಮ ಗೆಳೆಯರೋರ್ವರು ಬರೆದ ಕತಾಸಂಗ್ರಹವನ್ನು ' ರಾಷ್ಟ್ರಬಂಧು 'ವಿನಲ್ಲಿ ವಿಮರ್ಶಿಸುತ್ತ ಒಬ್ಬರು, " ಅವರ ಜೀವನ ಚಿತ್ರ, ಅವರ ಸಮಾಜದ ತಪ್ಪನ್ನು ಎತ್ತಿ ತೋರಿಸುವಂತಿದೆ " ಎಂದು ಬರೆದಿದ್ದಾರೆ. ಆದಕ್ಕಾಗಿ, ಈ ' ಹರಿದ ಸೆರಗು ' ಕಥಾಸಂಗ್ರಹ ಪ್ರಕಟವಾದ ಮೇಲೆ ಇಂತಹ ಕಹಿ ಅನುಭವ ಬರದಿರುವದು ಮೇಲು ಎಂದು ಸೂಚಿಸಿದ್ದೇನೆ. ' ಹರಿದ ಸೆರಗು ' ಲೇಖಕರು ಕೂಡಾ, ಒಂದು ಪಂಥವರಾಡುವ ಭಾಷೆಯನ್ನೇ ಬಳಸಿದ್ದಾರೆ. ಅದು ವಿಮರ್ಶಕರ ದೃಷ್ಟಿಯಲ್ಲಿ ಅಪಾರ್ಥವಾಗಿ ಕಾಣದಿರಲಿ.

' ಹರಿದ ಸೆರಗು' ಈ ಕತೆ ನಮ್ಮ ಸಮಾಜದ ವ್ಯಭಿಚಾರಿ ವೃತ್ತಿಯು ಅದರಿಂದ ಉದ್ಭರಿಸಬಹುದಾದ ಪಾಶವಿವೃತ್ತಿಯ ನಗ್ನ ಸತ್ಯವನ್ನು ಸಾರುತ್ತಿದೆ. ಇಂದು ಸಾಹಿತ್ಯದಲ್ಲಿ ನಮ್ಮ ತರುಣ ಬರೆಹಗಾರರು, ಇಂತಹ ವಿಷಯವನ್ನೇ ಆರಿಸಿಕೊಂಡು, ಅದರಿಂದಾಗುವ ಗುರಂತ ಚಿತ್ರವನ್ನು ನಮ್ಮ ಮುಂದಿಡಲು ಯತ್ನಿಸುತ್ತಲಿದ್ದಾರೆ. ಇಂತಹ ಪ್ರಯತ್ನ ನೋಡಿದಾಗ ಕೆಲವರು " ವಯಸ್ಸಿಗೆ-ಅನುಭವಕ್ಕೆ-ಬುದ್ಧಿಗೆ ನಿಲುಕದ ಸಾಹಸಕ್ಕೆ ಕೈ ಇಕ್ಕಿದ್ದಾನೆ ಈ ಬರೆಹಗಾರ " ಎಂದೂ " ಇಂತಹ ಹೊಲಸು ಸಮಾಜದ ಎದುರಿಗೆ ಇಡುವದು ಎಂತಹ ನಾಚಿಕೆಗೇಡಿತನ ? " ಎಂದೂ ಆಡಿಕೊಳ್ಳುವದುಂಟು. ನಿಜ ವಿಷಯವೇನೋ ಹೊಲಸು ವಯಸ್ಸಿಗೆ-ಅನುಭವಕ್ಕೆ-ಬುದ್ಧಿಗೆ-ನಿಲುಕಲಾರದ ಸಮಸ್ಯೆ ಇಂತಹ ಸಾಹಸ ಮಾಡಬಾರದಿತ್ತು, ಎಂದು ಹೇಳಿ ನಾವು ನಮ್ಮ ಮಹಾನುಭಾವತನವನ್ನು ತೋರಿಸಿಕೊಳ್ಳಬಹುದು. ಆದರೇನು ? ಅಂತಹ ಪಾಷಂಡವೃತ್ತಿ ವಂಶಪರಂಪರಾಗತ ಬೇರು ಬಿಟ್ಟಿರುವ ಪಾಶವೀವೃತ್ತಿ, ಇಲ್ಲದಾಗುವ ಬಗೆ ಹೇಗೆ? ತಿಳಿದೂ ತಿಳಿದೂ ತಿಳಿಯದವರಂತೆ, ನೋಡಿಯೂ, ನೋಡದವರಂತೆ, ಕೇಳಿಯೂ ಕೇಳದವರಂತೆ ಇರುವದು ಮಾನವನ ಸತ್ಯಹೃದಯಕ್ಕೆ ಒಪ್ಪೀತೆ? ಅದು ಸಾಧ್ಯವೆ? ಅದಕ್ಕೆ ವಿಮೋಚನೆ ಇಲ್ಲವೆ ?

ನಮ್ಮ ಗೆಳೆಯರ ಕತೆಗಳ ವಿಷಯ ಹೇಳಿದೆ. ಇಂತಹ ಕತೆಗಳು ಬೇಕೆ, ಇಂತಹ ಕತೆಗಳಿಂದೇನು ಪ್ರಯೋಜನ ಎಂಬ ವಿಚಾರಕ್ಕೆ ಎರಡು ಮಾತುಗಳನ್ನು ಹೇಳಿದ್ದಾಯ್ತು. ಇನ್ನು ಕತೆಗಳಲ್ಲಿ ಬರುವ ಭಾಷೆ ಕತೆ ಹೇಳುವ ರೀತಿಯಲ್ಲಿಲ್ಲ.—ಎಂದು ಹೇಳಬಹುದು. "ದೇವರು ಕ್ಷಮಿಸಿರುವ" ಈ ಕತೆಯಲ್ಲಿ ಮಾತ್ರ ಶೈಲಿ ಚನ್ನಾಗಿದೆ. ಓದುಗನ ಭಾವನೆಯನ್ನು ಪ್ರಚೋದಿಸಿ–ಕುತೂಹಲಗೊಳಿಸಿ-ಮರುಕಗೊಳಿಸಿ ಪಶ್ಚಾತ್ತಾಪಗೊಳಿಸಿ ಜೀವನದ ಸತ್ಯ ದೃಷ್ಟಿಯಲ್ಲಿ ನಮ್ಮನ್ನು ಒಯ್ದು ಬಿಡುವದು. ಕತೆ ಆರಿಸಿಕೊಳ್ಳುವ ರೀತಿಯಲ್ಲಿ ನಮ್ಮ ಗೆಳೆಯರು ಯಶಸ್ವಿಯಾಗಿದ್ದಾರೆ. ಅದೇ ರೀತಿ ಹೇಳುವ ರೀತಿ ಅನುಭವವಿದ್ದರೂ ಆ ರೀತಿಯ ಹಾದಿ ಈ ಪ್ರಯತ್ನದಲ್ಲಿ ಅವರು ತುಳಿಯಲಿಲ್ಲ ಮುಂದಿನ ಪ್ರಯತ್ನದಲ್ಲಿ ಅವರು ಸಫಲರಾಗಲಿ ಎಂದು ಆಶಿಸುತ್ತೇನೆ.

ಇಂದು ಸಮಾಜದ, ಇಂತಹ ನಗ್ನ-ರುದ್ರ-ಸತ್ಯ-ಕಠೋರ ಚಿತ್ರಗಳು ಬೇಕಾದಷ್ಟು ನಮ್ಮ ಸಾಹಿತ್ಯದಲ್ಲಿ ಬಂದಿವೆ. ಕತೆ ಕಟ್ಟುವವರು ಕತೆ ಕಟ್ಟುತ್ತಾರೆ. ಕವನವನ್ನು ರಚಿಸುವವರು ಹಾಡನ್ನು ಕಟ್ಟಿ ಹಾಡುತ್ತಾರೆ. ನಾಟಕಕಾರ ನಾಟಕ ಬರೆದು ತೃಪ್ತಿ ಬಡುತ್ತಾನೆ — ಕಾದಂಬರಿಕಾರ ದೊಡ್ಡ ಹೊತ್ತಿಗೆಯನ್ನೇ ಬರೆದು ನಮ್ಮ ಮುಂದಿಡುತ್ತಾನೆ. ಇಂತಹವುಗಳನ್ನೆಲ್ಲಾ ನಾವು ಅಂದರೆ ನಮ್ಮಂತಹ ತಿಳಿದ ಹತ್ತು ಜನ ಓದಬಹುದು. ಓದಿ ತೃಪ್ತಿಪಡಬಹುದು. 'ಅಯ್ಯೋ' ಎಂದು ನಿಟ್ಟುಸಿರನ್ನು ಬಿಡಬಹುದು. ಅದಕ್ಕೂ ಹೆಚ್ಚಾದರೆ, ವಿಮರ್ಶಕರು "ಅಹಾ, ಎಂತಹ ರುದ್ರಮಯ ಸತ್ಯದಾರುಣ ಚಿತ್ರವಿದು" ಎಂದು ಹೊಗಳಬಹುದು. ಆದರೆ ಇದರಿಂದೆಲ್ಲಾ ನಮ್ಮ ಸಮಾಜಕ್ಕೆ ಅಂಟಿಕೊಂಡಿರುವ ರೋಗ ವಾಸಿಯಾಗುವ ಬಗೆ ಹೇಗೆ? ವಾಸಿಯಾಗಬಹುದೆ? ಅಥವಾ ಹಾಗೆಯೇ ಸಾಗುತ್ತಿರುವದೇ? ಹೋಗಲಿ ನಮ್ಮ ಸಮಾಜದ, ಅನ್ಯಾಯ-ಬಡತನ-ದಾರಿದ್ರ್ಯ-ದುಃಖ ನಿವಾರಣೆಯಾಗಿ ನಮ್ಮ ಸುತ್ತಮುತ್ತಲಿರುವ ನಾಲ್ಕು ಜನ ಸುಖದಿಂದ ಬಾಳುವಂತಾದರೆ ಆ ರೀತಿ ಬಾಳುವದಕ್ಕೆ ಇಂತಹ ಕತೆಗಳು ಸಹಾಯಕವಾದರೆ ಆಗ ಕತೆ ಬರೆದ ಜೀವ ತೃಪ್ತಿಪಡಬಹುದು. ಸಮಾಧಾನ ಹೊಂದಬಹುದು. ಸಾರ್ಥಕವಾಯಿತೆಂದುಕೊಳ್ಳಬಹುದು.

'ಮುನ್ನುಡಿ' ಮುನ್ನುಡಿಯಂತಾಯಿತೆ ಇಲ್ಲವೆ ಹರಟೆಯಾಗಿಬಿಟ್ಟಿತೆ, ಎಂಬ ಭಯ ಇದ್ದೇಯಿದೆ. ಮುನ್ನುಡಿಯೇನೋ ಸ್ವಲ್ಪ ದೀರ್ಘವಾಯಿತು! ಹಾಗಾಗಲು ಒಂದು ಕಾರಣವೂ ಇದೆ. ಆ ಕಾರಣ ನಾನು ಮುನ್ನುಡಿ ಬರೆಯುತ್ತಿದ್ದೇನಲ್ಲ ಎಂಬ ಬಿಂಕ! ಅಷ್ಟೂ ಸ್ವಾರ್ಥವಿಲ್ಲವೆ ನನಗೆ? ಹೇಗೂ ಇರಲಿ ನನ್ನ ತರುಣ ಗೆಳೆಯ ವಿ.ತಿ. ಯವರ ಆಜ್ಞಾನುಸಾರವಾಗಿ ಈ ಕೆಲಸ ಪೂರ್ತಿಮಾಡಿದ್ದೇನೆ ನನಗೆ ನಿರ್ವಹಿಸಿದ ಕೆಲಸ ಸರಿಯಾಗಿದ್ದರೆ, ಆ ಶ್ರೇಯಸ್ಸಿನ ಭಾರ ನನ್ನದು: ಅದು ಸರಿಯಾಗದಿದ್ದರೆ ಆ ಸೋಲು ನನ್ನ ಗೆಳೆಯರದು!

ಕೊನೆಯಮಾತು. ನನ್ನ ತರುಣ ಗೆಳೆಯರು, ಇಂತಹ ನೂರಾರು ಕೃತಿಗಳನ್ನು ಬೆಳಕಿಗೆ ತರಲಿ–ಆ ದಾರಿಯಲ್ಲಿ ಅವರು ಜಯಶೀಲರಾಗಲಿ–ನಮ್ಮ ಜಿಲ್ಲೆಯ ಸಾಹಿತ್ಯಮಣಿಯಾಗಲಿ ಎಂದು ಹರಸುತ್ತೇನೆ. ಇಲ್ಲಿ 'ಹರಸು' ಶಬ್ದವೇ ಚೆನ್ನ ಕಾರಣ ವಯಸ್ಸಿನ ದೃಷ್ಟಿಯಲ್ಲಿ ನಾನೇ ಗೆಳೆಯ ವಿ. ತಿ. ಯವರಿಗಿಂತ ಹಿರಿಯ, ಅಲ್ಲದೆ ಮುನ್ನುಡಿಕಾರ ಹರಸಲೇಬೇಕು!

"ನವಚೇತನ"
ಸಿರ್ಸಿ
ತಾ. ೧೩–೩–೪೯

**ರಾ. ವೆ. ವಾಲಗಳ್ಳಿ**

# ಶರಾವತಿ ಪ್ರಕಟನೆ ಮಂದಿರ, ಶಿರಸಿ

★

## — ಪ್ರಕಟನೆಗಳು —

| | | | |
|---|---|---|---|
| ೧. | ಚೆಂದುಟಿಯ ಮುತ್ತು | ವೀ. ಚ. ಹಿತ್ತಲಮನಿ | ೨—೦—೦ |
| ೨. | ಹರಿದ ಸೆರಗು | ವಿ. ತಿ. ಶೀಗೇಹಳ್ಳಿ | ೧—೮—೦ |
| ೩. | ನನ್ನ ಸ್ವಾಮಿ | ವೀ. ಚ. ಹಿತ್ತಲಮನಿ | ೧—೮—೦ |
| ೪. | ಪ್ರಾಣಾಂಜಲಿ | ವೀ. ಚ. ಹಿತ್ತಲಮನಿ | (ಅಚ್ಚಿನಲ್ಲಿದೆ) |

## ಬಿಡಿಮುತ್ತು

| | | | |
|---|---|---|---|
| ೧. | ಹಕ್ಕಿನ ಹೋರಾಟ | ಪ. ಸು. ಭಟ್ಟ | ೧—೦—೦ |

ಗೊತ್ತು ಗುರಿಯಿಲ್ಲದೆ ಸಾಗುತ್ತಿರುವಾಗ

ಕರ್ತವ್ಯದರಿವ ಮಾಡಿಕೊಟ್ಟ

**ಗುರು–ಹಿರಿಯರಿಗೆ**

ಹಾಗೂ

**ತಂದೆ - ತಾಯಿಗಳಿಗೆ**

ಕಿರಿಯನ ಅಕ್ಕರೆಯ

ಕಾಣಿಕೆ

# ಹರಿದ ಸೆರಗು


| | | | |
|---|---|---|---|
| ೧. | ಅನ್ನದೇವರಿಗಾಗಿ | .... | ೯ |
| ೨. | ಋಣವಿಮೋಚನೆ | .... | ೧೭ |
| ೩. | ಕುಸುಮ ಕಂಟಕ | .... | ೨೬ |
| ೪. | ಅವರೇಕೆ ಇನ್ನೂ ಬರಲಿಲ್ಲ? | .... | ೩೭ |
| ೫. | ಹಳ್ಳಿಯ ಹೊನ್ನು | ... | ೪೬ |
| ೬. | ನೊಂದ ಹೃದಯ | .... | ೫೮ |
| ೭. | ದೇವರು ಕ್ಷಮಿಸಿರುವ | ... | ೬೪ |
| ೮. | ಹರಿಸಿದಳು ! | ... | ೭೬ |
| ೯. | ಹರಿದ ಸೆರಗು | ... | ೮೪ |

# ಅನ್ನದೇವರಿಗಾಗಿ

But have you ever sung of a hungry woman
Selling her body for a loaf of bread ...?

ಮಿತ್ರ ಪದೇ ಪದೇ ಗೊಣಗುತ್ತಿದ್ದ; ಅನುವಾದ ಮಾಡಲು ಭಾವಾವೇಶವನ್ನು ತುಂಬಿಕೊಳ್ಳಲು ಅಲ್ಲಿ ಶಾಂತವಾತಾವರಣವಿದ್ದದರಿಂದ ನಾನು ಆತನ ಖೋಲಿಗೆ ಲೇಖನ ಬರೆಯಬೇಕೆಂಬ ಹಂಬಲದಿಂದ ಹೋಗಿದ್ದೆ. ಅಲ್ಲದೆ, ಖುರ್ಚಿ, ಮೇಜು, ಸಾಕಾಗದಿದ್ದರೆ—ಸೋಫಾ, ಟಿ ಮುಂತಾದ ಸೌಕರ್ಯವಿತ್ತು.

" ಅಮ್ಮಾವ್ರು ಕರೀತಾರೆ "

ಮನೆಯಿಂದ ಕರೆ ಬಂದಿತು. ' ಮತ್ತೇನು ಬಂತಪ್ಪ ಗ್ರಹಚಾರ ' ಎಂದುಕೊಂಡು, ಮನೆಯವರ ಕರೆಗೆ ಓ ಕೊಟ್ಟು ಹೊರಟೆ. ಮನೆಗೆ ಹೋಗಿ ಕರೆಯಿಸಿದ ಕಾರಣ ವಿಚಾರಿಸಿದೆ.

" ನೋಡ್ರಿ ಈ ಹುಡುಗನನ್ನು. ಕೆಲಸ ಕೊಟ್ಟರೆ ಉಳಿಯುತ್ತಾನಂತೆ. ಮೈ ಎಲ್ಲ ಬಾಸುಳಿ ಎದ್ದುಬಿಟ್ಟದೆ. ನೀಚ ! ಬಹಳ ಹೊಡೆದು

ಬಿಟ್ಟಿದ್ದಾನಂತೆ. ತಾಯಿನೂ ಎದುರಿಗೇ ಇದ್ದಳಂತೆ. ಎಂಥ ತಾಯಿ! ಹಾದರಿ............"

ಇನ್ನೂ ಅವಳ ಮಾತು ನಡೆದೇ ಇತ್ತು. ನಾನು ಸ್ವಲ್ಪ ಗಾಬರಿಯಾದೆ. ಮನೆಗೆ ಬಂದುದೇ ತಡ. 'ಹಾಗಂತೇ........ಹೀಗಂತೆ' ಸುರುವು ಮಾಡಿಯೇ ಬಿಟ್ಟಳು ಸರಾಗವಾಗಿ. 'ನಿಧಾನ' ಎಂದು ಅವಳನ್ನು ಸುಮ್ಮನಿರಿಸಿ, ಆತ ನನ್ನು ಜಗುಲಿಗೆ ಕರೆದು ಕೇಳಿದೆ.

"ತಮ್ಮ, ನಿನ್ನ ಹೆಸರೇನೊ?"

"ಕನ್ನನಂತೇ" ನನ್ನವಳು ತಾನೇ ಉತ್ತರ ಕೊಟ್ಟಳು.

"ಹೌದು, ಒಡೆಯಾ, ಕನ್ನ" ಅವನೂ ಹೇಳಿದ.

"ಇಲ್ಲೇಕೆ ಬಂದೆಯೋ? ನೋಡಿದರೆ ತಗ್ಗಿನ ಬದಿಯವನ ಹಾಗೆ ಕಾಣುತ್ತಿ."

"ಬೇಡ್ತಾ ಬಂಸೆ ಒಡೆಯಾ. ನಂಗೆ ಮಂಕೀನ್ರಾ"

"ನಿನಗೆ ಯಾರೂ ಇಲ್ಲವೇನೋ?"

"ಅವ್ವಿ ಇದಾಳ್ರ"

"ಇದ್ರೆ—ಏಕೆ ಬಿಟ್ಟು ಬಂಡೆಯೊ?"

ಅವನು ಅಳತೊಡಗಿದ. ಅಷ್ಟರಲ್ಲಿ ನನ್ನ ಮತ್ತೋರ್ವ ಮಿತ್ರ ಬಂದ.

"ಓಹೋ! ಇವನು ಇಲ್ಲಿ ಬಂದಿದಾನೇನೋ? ಅವನ ಕತೆ ಕೇಳಿದ್ದೀಯಾ? ಸರಿಯಾಗಿ ಹೇಳುವದೇ ಇಲ್ಲ ಮಹಾರಾಯಾ! ಹೇಳಿಂದರೆ ಅಳುವದೊಂದೇ ಮಾಡ್ತಾನೆ. ಸಿನ್ನೆ ಅವನ ಹತ್ತಿರ ಕೇಳಬೇಕಾದರೆ ಸಾಕು. ಸಾಕಾಗಿ ಹೋಯಿತು."

ಗೆಳೆಯನು ಅವನ ಬಗೆಗೆ ಹೇಳುತ್ತಲೇ ಇದ್ದನು. ಅವನಿಗೂ ಆ ಹುಡುಗನ ಬಗ್ಗೆ ಎಲ್ಲವೂ ಗೊತ್ತಿರಬೇಕೆಂದು ನಾನು ಕೇಳುತ್ತಲೇ ಇದ್ದೆನು ಮಧ್ಯೆ ನನ್ನವಳು 'ಹಾಗಲ್ಲಾ ........ ಹೀಗಂತೆ!' ಎಂದು ಬೆರಸಿಯೂ ಬೆರಸುತ್ತಿದ್ದಳು.

* * * *

ದುಡಿಯಲಾರದಾಯಿತು ಹೊಟ್ಟೆಗೆ ಮಗನನ್ನು ಕಟ್ಟಿಕೊಂಡು ಹೊರಟಳು.... ಬೇಡುತ್ತ. ಓರ್ವ ಮಹಾಶಯ ಅವಳಿಗೆ ಉಣಬಡಿಸಿದ. ಆದರೆ ಕೈ ತೊಳೆದು ಮಗನಿಗಾಗಿ ಒಳಗೆ ನಡೆದಾಗ ಹಾಸಿಗೆಗೆ ಕರೆದ. ಬಡಿಸಿದ ಋಣಕ್ಕೆ ಆತನ ಮಾಂಸಮೋಹಕ್ಕೆ ಎಡೆಗೊಟ್ಟಳು. ಎಂಜಲನ್ನು ತಿಂದ ಅವಳು ಎಂಜಲೇ ಆದಳು! ಕಲುಷಿತಳಾದಳು! ಆಗಿನ ಅವಳ ಅನುಭವವನ್ನು ಅವಳ ಎದೆ ಮಾತ್ರ ಬಲ್ಲದು. ಮುದ್ದು ಮರಿಯಾದ ಮಗು ಅದನ್ನೇನೂ ಆಗ ಅರಿಯದು. ಹೀಗೇ ತಿರುಗುತ್ತಿರುವಾಗ ಸಾಯಿಬ ಸಿಕ್ಕ. 'ಬರು ವಿಯಾ?' ಎಂದು ಕೇಳಿದ. ನೀರಿನಲ್ಲಿಳಿದ ಆಕೆ ಮುಂದುವರಿದಳು. ಇಡೀ ಮುಳುಗಿದವಳಿಗೆ ಛಳಿಯ ಹಂಗೇಕೆ? ಅವನೊಡನೆ ನಾಲ್ಕುದಿನ ತಿರುಗುತ್ತಿರು ವಾಗ ಅವನ ಮಾಂಸಮೋಹಕ್ಕೂ ಪೂರ್ಣ ಬಲಿಯಾದಳು. ಅದೂ ಅವನ ಅನ್ನದ ಋಣಕ್ಕಾಗಿ! ಅವನಿಗೆ ತಾಯಿ-ಮಕ್ಕಳ ಮೇಲೆ ಅಧಿಕಾರವಾಯಿತು. ಅಧಿಕಾರ ಸ್ಥಾಪಿಸಿದ. ಏಕೆ.......... ಅವರು ಅಸಹಾಯರೆನಿಸಿದ್ದರಿಂದ. ಅನಾಥರೆನಿಸಿದ್ದರಿಂದ. ಅದಕ್ಕಾಗಿ ಹೊಡೆಯುತ್ತಿದ್ದ. ಬಡಿಯುತ್ತಿದ್ದ. ಇನ್ನೇನನ್ನೊ ಮಾಡುವದೂ ನಿಶ್ಚಯವಿತ್ತು. ಅಲ್ಲದೆ 'ಹುಡುಗನು ದೊಡ್ಡವ ನಾಗುತ್ತಿರುವ. ಅವನ ಬುದ್ಧಿ ಅವನಿಗೆ ಬಂದ ಮೇಲೆ ಅವನಂತೂ ಓಡಿ ಹೋಗುವವನೇ! ಸಂಗಡ ಅವನ ತಾಯಿಯೂ ಓಡಿಹೋದಾಳು' ಎಂದು ಅವನು ಹುಡುಗನ ಏಳ್ಗೆಗೇ ಕುಂದು ತರುತ್ತಿದ್ದ. ಹೀಗೇ ಹುಡುಗನನ್ನು ತೀರಿಸಿಬಿಡುವದೇ ಅವನ ಉದ್ದೇಶವಿತ್ತೇನೊ! ಒಂದು ದಿನ ಬರಬಹುದಾ ಗಿತ್ತು—ತಾಯಿಯ ಕೈಯಿಂದಲೇ ಮಗನಿಗೆ ವಿಷ! ಅದಕ್ಕಾಗಿ—

'ಇಂದೇ ನೀನೆಲ್ಲಿಯಾದರೂ ನಡೆ. ಇಲ್ಲಿರಬೇಡ. ನೀನಿನ್ನೂ ಸಣ್ಣವ ನೆಂದು ನನಗೆ ತಿಳಿಯುತ್ತದೆ. ಆದರೆ ನಿನ್ನಂಥ ಎಷ್ಟೋ ಮಂದಿ ಬಾಳುತ್ತಿ ದ್ದಾರೆ, ಬಳಲುತ್ತಿದ್ದಾರೆ, ಸಾಯುತ್ತಿದ್ದಾರೆ. ಹೋಗುವಾಗ ನನ್ನ ಸ್ಮರಣೆ ಬೇಡ. ನನ್ನ ಸ್ಮರಣೆ ಬಂದರೆ ನನ್ನ ನೈತಿಕ ಪತನದ ಹೇಸಿಕೆತನ ನೆನಪಾ ದೀತು! ಆದರೆ ಅದು ಅನಿವಾರ್ಯವ ಪತನ. ಈ ಮಾತಿನ ಸತ್ಯ ನಿನಗೇ ದೊಡ್ಡವನಾದ ಮೇಲೆ ತಿಳಿದೀತು!'

ಎಂದು ತಾಯಿಯು ತನ್ನ ಹೃದಯದ ಮಶಿಕುಡಿಕೆಯಲ್ಲಿ ಬಾಳ ಲೆಕ್ಕ ಣಿಕೆ ಅದ್ದಿ, ಮಗುವಿನ ಚಿತ್ತಭಿತ್ತಿಯಲ್ಲಿ ಬರೆದಳು! ಆದರದು ಮೂಡೀತೇ? ಮಾಸೀತೇ? ಎನ್ನುವ ಅರಿವಿಲ್ಲ ಅವಳಿಗೆ.

ಬುದ್ಧಿ ಬಲಿಯುವ ಹುಡುಗನ ನಾಲ್ಕು ಕಡೆ ಉಪವಾಸವೋ! ಸಿಕ್ಕ ಸ್ವಲ್ಪ ಆಹಾರದಿಂದಲೇ ಜೀವ ಹಿಡಿದುಕೊಂಡು ತಿರುಗಿದ ಅಳುತ್ತ ಬೇಡುತ್ತ. ಕೆಲವರು ಕನಿಕರದಿಂದ ಬುದ್ಧಿವಾದ ಮಾಡಿದರು ಆದರೆ ಯಾರೂ ಕೆಲಸಕ್ಕೆಂದು ಇಟ್ಟುಕೊಳ್ಳಲಿಲ್ಲ. ಹೀಗೇ ತಿರುಗುತ್ತಿರುವಾಗ ಅಕಸ್ಮಾತ್ ಪೇಟೆಗೆ ಬಂದ ಸಾಯಿಬ ಹುಡುಗನನ್ನು ಕಂಡ. ಹಿಡಿದುಕೊಂಡು ನಡೆದ. ತಿದಿ ಒತ್ತಲು ಸದ್ಯ ಯಾರಾದರೂ ಬೇಕಾಯಿತಲ್ಲ ಕರೆದುಕೊಂಡು ಹೋಗಿ ತಾಯಿಯ ಮುಂದೇ ಸಾಕಷ್ಟು ಬಡಿದ ತನ್ನ ನೆನಪು ಸಾಯುವವರೆಗೆ ಇರುವ ಹಾಗೆ ಬರೆ ಹಾಕಿದ! ತಾಯಿಯ ಹೃದಯ ಒಡೆದು ಚೂರು ಚೂರಾಯಿತು.

‘ಬೇಕಾದವಳು ನಾನು ನಿನಗೆ. ಅವನು ನಿನಗೆ ಸಂಬಂಧಿಸಿದವನಲ್ಲ! ಲೋಕದ ಮಗು ಅವನು. ಅವನನ್ನು ಬಿಟ್ಟುಬಿಡು. ಇಲ್ಲವಾದರೆ ……’ ಚೀರಿದಳು. ಸಾಯಿಬ ಬಿಟ್ಟುಬಿಟ್ಟ.

ಆಗಲೇ ಊರ ಜನರೆಲ್ಲ ತುಂಬಿದ್ದರು. ಅವರೆಲ್ಲ ಓಡಿಬಂದ ಹಾದರಿಯೆಂದು ಅವಳಿಗೇ ಚೆನ್ನಾಗಿ ಬಯ್ದರು ಹುಡುಗನನ್ನು ಕರೆದುಕೊಂಡು ಹೋಗಿ, ಒಂದು ತುತ್ತು ತಿಂಡಿ ಕೊಟ್ಟು ಕಳುಹಿದರು.

ತಾಯಿ ಮಾತ್ರ ‘ಲೋಕದ ಮಗು ತನ್ನಂಥ ಅಪವಿತ್ರಳ ಮಗುವಾದೀತೆ? ತಾನು ಮಗುವಿನ ಬಳಿ ಇದ್ದು ಹುಳುಕೊರೆದ ಮಿಡಿಯನ್ನಾಗಿ ಮಾಡಲೆ?’ ಎಂದು ವೇದನೆಯನ್ನು ನುಂಗುತ್ತ ಇರತೊಡಗಿದಳು.

* * * *

“ಈಗ ಈ ಹುಡುಗ ತಿರುಗುತ್ತ ಇಲ್ಲಿ ಬಂದಿರುವ. ಕಷ್ಟದ ವಾತಾವರಣದಲ್ಲೇ ಬೆಳೆದು ಬಂದಿರುವ ಇವನಿಗೆ ತನ್ನ ಮಟ್ಟಿಗೆ ಅನುಭವ ಬಂದಿದೆ. ಅದಕ್ಕೇ ಕೆಲಸ ಕೊಡಿ ಎನ್ನುತ್ತಾನೆ. ನೀನು ಬೇಕಾದರೆ ಅವನಿಗೆ ಆಶ್ರಯ ಕೊಡಬಹುದು ನೋಡು ”

ಗೆಳೆಯನು ನನಗೆ ಸೂಚಿಸಿದ. ಹುಡುಗ ಅಳುತ್ತಿದ್ದ. ಆತನನ್ನು ಹುಡುಗರನ್ನಾಡಿಸುವದಕ್ಕೆಂದು ಮನೆಯವಳ ಇಂಗಿತದಂತೆ ಇರಿಸಿಕೊಂಡೆ.

ಅಂದು ಸಂಜೆ ನಾನು-ನನ್ನವಳು ಹುಡುಗನನ್ನು ಇನ್ನೂ ಏನನ್ನೋ ವಿಚಾರಿಸುತ್ತ ಕುಳಿತಿದ್ದೆವು. ಅನುವಾದ ಮಾಡುತ್ತಿದ್ದ ಮಿತ್ರನು ಆಗ ಬಂದು ತಾನು ಮಾಡುತ್ತಿದ್ದ ಅನುವಾದ ಮುಗಿಯಿತೆಂದು ನಮ್ಮೆದುರಿನಲ್ಲಿ ಓದಿದನು.

" ........... ಒಂದು ತುಣುಕು ರೊಟ್ಟಿಗೆಂದೇ ದೇಹವನು ಮಾರಿದ ಮಂಗಲೆಯು ಮುಕವನ್ನೆಂದಿಗಾದರೂ ಹಾಡಿರುವೆಯಾ ? "

ಅಲ್ಲೇ ಬದಿಯಲ್ಲಿ ತಲೆ ತಗ್ಗಿಸಿ ಕುಳಿತ ಹುಡುಗ ವಿಕಾರವಾಗಿ ನಗುತ್ತಿದ್ದ. ಆದರೆ, ಆ ನಗುವಿನ ಹಿಂದೆ ಇರುವ ಬರಗಾಲದ ರುದ್ರಮಯತೆಂ(?) ಪಾಡು ನನ್ನವಳು 'ಕನ್ನ' ಎಂದು ಕರೆದಾಗ ಹೊರಹೊಮ್ಮಿ, ಸಲ್ಲಿಸಲಾಗದ ಅಳುವಾಗಿ ಸಂದಿತು !

# ಋಣವಿಮೋಚನೆ?

ಬಿಸಿಲಿನಿಂದ ತಲೆ ಕಾದಹಾಗೆ, ಶಿವುಗೌಡನ ವಿಚಾರಧಾರೆ ತನ್ನ ಮೇಲಿದ್ದ ಋಣಗಳನ್ನು ಲೆಕ್ಕ ಹಾಕುತ್ತಲಿತ್ತು. ಹೆಗಲ ಮೇಲೆ ಕೋವಿ ಹೊತ್ತು ಹಂದಿಗಾವಲಿಗೆ ಹೋದವನು ಸಣ್ಣಪುಟ್ಟ ಕೆಲಸಗಳನ್ನು ಮುಗಿಸಿ, ತಿರುಗಿ ಗುಡಿಸಲಿಗೆ ಹೊರಟಿದ್ದ. ತನ್ನ ಬಳಗದವರ ಋಣಗಳನ್ನೆಲ್ಲ ಲೆಕ್ಕದ ಮಡುವಿನಲ್ಲಿ ಮುಳುಗಿಸಿದಾಗ ಒಂದು ಅವನ ಪಾಲಿಗೆ ಮುಳುಗದ್ದಾಗಿತ್ತು. ಧಡಧಡ ಕೆಲವು ದೂರ ಕಾಲು ಹಾಕಿದ. ಮತ್ತೆ ಸಾವಕಾಶ ನಡೆಯುತೊಡಗಿದ. ಬಿಸಿಲಿನ ತಾಪವಲ್ಲಿ ಕಣ್ಣು ಕಾಣಿಸದಷ್ಟು ದೂರದಲ್ಲಿ ಯಾರೋ ಬರುತ್ತಿರುವದು ಕಂಡಿತು. ಯಾರೋ ಹೆಗಡೆಯವರ ನೆಂಟರಾಗಿರಬಹುದೆಂದು ಊಹಿಸಿ, ತಲೆಯ ಮೇಲೊಮ್ಮೆ ಕೈಯಾಡಿಸಿದ; ಬಿಸಿಲು ಚನ್ನಾಗಿ ಹೊಡೆದಿತ್ತು.

“ ಏನೋ ಶಿವಗೌಡಾ ? ”

“ ಓಃ ನೀವಾಃ! ನಾ ಹೆಗ್ಗೇರ ನೆಂಟ್ರು ಅಂತ ಮಾಡ್ದೆ. ಕೈ ಜೋಡಸ್ದೆ ಒಡ್ಯಾ ” ಗೌಡ ಶಾನುಭೋಗಾಗೆ ಕೈ ಮುಗಿದ. ಅವರನ್ನು ಅವನು ಎರಡು ನೂರು ವರ್ಷಗಳಿಂದ ಬಲ್ಲ.

" ಮತ್ತೇನ್ ಶಿವಗೌಡಾ ? ಯಾವ ಕಡೀಗೆ ಹೊರಟಿದ್ದೆ ? ಓಹೋ ಕೋವಿ! ........ ಮತ್ತೇನಾದ್ರೂ ಬೇಟೆ ಆಯಿತೋ ? "

ಒಂದೇ ಉಸುರಿಗೆ ಮೂರು ನಾಲ್ಕು ಪ್ರಶ್ನೆ. ಅವರಿಗೆ ಬಿಸಿಲಲ್ಲಿ ನಿಲ್ಲುವದು ಬೇಡವಾಗಿತ್ತು. ಅದಕ್ಕೂ ಹೆಚ್ಚಾಗಿ ಕೈಯಲ್ಲಿದ್ದ ವಸ್ತ್ರ, ಕೆಲವು ಕಾಗದಪತ್ರಗಳ ಗಂಟು ಬಿಸಿಲಲ್ಲಿ ಕಾದು, ಮೊದಲಿಗಿಂತ ಇಮ್ಮಡಿ ಭಾರವಾಗಿತ್ತು. ಹೆಗಡೆಯವರ ಮನೆಯವರೆಗೆ ಅವನ್ನು ಹೊತ್ತು ತರಹೇಳುವ ಪೀಠಿಕೆಗೆ ಮಾತು ಎತ್ತಿದರು.

" ಅದ್ನ ತಕಂಬೇಕಾ ? " ಅವನೂ ಕೇಳಿದ.

" ನಿಂಗ್ ಹೆಗಡೇರ ಮನೇಲ್ಲಿ ಕೆಲಸಿದ್ರೆ ತಗಂಬಾ " ಅವನ ಭಾಷೆಯ ಧಾಟಿಯಲ್ಲೇ ಜುಳುಪಿದರು. ಅವರು ಹಳ್ಳಿಯಲ್ಲಿ ತಿರುಗಿ ತಿರುಗಿ, ಅಲ್ಲಿಯ ಭಾಷೆಯ ಮಟ್ಟವನ್ನು ಕೆಲಮಟ್ಟಿಗೆ ಕಲಿತಿದ್ದರು. ಅದು ಆತ್ಮೀಯತೆಗೆಂದು ಅವರ ಉದ್ದೇಶ.

ಹೆಗಡೆಯವರು ಊಟಕ್ಕೆ ಹೋದ ಸಮಯದಲ್ಲಿ ಅವರ ಮನೆಯ ಜಗುಲಿಯನ್ನೇರಿದರು. ಜಗುಲಿಯಲ್ಲಿದ್ದ ಹುಡುಗರು ಒಳಗೆ ಹೋಗಿ, ಶಾನುಭೋಗರ ಆಗಮನವನ್ನರುಹಿದರು. ಶಾನುಭೋಗರಿಗೆ ಕೂಡಲೇ ಸ್ನಾನಕ್ಕೆ ಕರೆಯು ಆಯಿತು. ಗೌಡ ಅವರ ಗಂಟನ್ನು ಒಂದು ಬದಿಯಲ್ಲಿಟ್ಟು, ಇಲ್ಲಿಟ್ಟಿದ್ದೇನೆಂದು ತೋರಿಸಿ, ಯಥಾಪ್ರಕಾರ ಕೋವಿ ಹೊತ್ತು, ಮನೆಗೆ ಊಟಕ್ಕೆಂದು ನಡೆದನು.

* * * *

" ಕೈ ಮುಗ್ದೆ ಒಡೆಯಾ. ಮಗ್ನ ಮದ್ವೆ ನೀವೇ ಮಾಡ್ಸದ್ದಾಂಗಾಗ್ತಿತ್ತು ........... "

ಶಿವಗೌಡ ಶಾನಭೋಗರ ಕಾಲಿಗ್ ಬಿದ್ದ.

" ಬೇಡ ಬೇಡಾ. ಏಳು..... ಏನೋ ಮಹಾರಾಯ ! " ಸರಿಯುತ್ತ ನುಡಿದರು.

ಮಗನ ಮದುವೆ ಈ ಸರತಿಯೇ ಆಗಬೇಕೆಂದು ಗೌಡನ ಪ್ರಬಲ ಮನೀಷೆ. ಅದಕ್ಕೆ ಅವನಲ್ಲಿ ಸಾಕಷ್ಟು ಹಣವಿದ್ದಿಲ್ಲ. ಹೆಗಡೆಯವರಿಂದ

ಹಣ ತೆಗೆದುಕೊಳ್ಳುವ ಎಂದರೆ, ಅವರ ಹತ್ತಿರ ಕೇಳಲು ಅವನಿಗೆ ಒಂದು ತರವಾಗುತ್ತಿತ್ತು. ಆದುದರಿಂದ ಅವನು ಕೇಳಲಾರದಾಗಿದ್ದ. ಹಾಗೆಂತ ಮತ್ತಾರೊಡನೆಯೂ ಅವನು ತೆಗೆದುಕೊಳ್ಳಲಾರ. ತೆಗೆದುಕೊಳ್ಳುವದು ಹೆಗಡೆಯವರಿಂದಲೇ! ಆದರೆ, ಅವನ ವತಿಯಿಂದ ಹೆಗಡೆಯವರೊಡನೆ ಕೇಳಲು ಒಬ್ಬರು ಬೇಕಾಗಿತ್ತು. ಶಾನಭೋಗರಿಗೂ ಹೆಗಡೆಯವರಿಗೂ ಹೆಚ್ಚಿನ ಸ್ನೇಹವೆಂದು ಅವನಿಗೆ ತಿಳಿದಿತ್ತು. ಅದಕ್ಕೆ ಅವನು ಶಾನುಭೋಗರ ಕಾಲಿಗೆ ಬಿದ್ದು, ಅವರೊಡನೆ ತನ್ನ ಬೇಡಿಕೆಯನ್ನು ತೋಡಿಕೊಂಡಿದ್ದ.

ಶಾನುಭೋಗರು ಸ್ತಬ್ಧರಾದರು. ಅವರಿಗೆ ಯಾವ ವಿಚಾರವೂ ಕೂಡಲೇ ಹೊಳೆಯಲಿಲ್ಲ.

ಅನುಮಾನಪಾದದ್ದನ್ನು ಕಂಡು ಗೌಡ,

"ಹೆಗಡೇರ್ ದುಡ್ಡು ನಾ ತಿನ್ನೂದಿಲ್ಲಾ ಒಡ್ಯಾ. ದೇವ್ರ ದಯಾ ನನ್-ಮೇಗ್ ಇದ್ರೆ, ನಾ ಹೆಂಗಾರೂ ಅವ್ರ ಕೆಲಸಾನೇ ಮಾಡಿ, ತೀರಸ್ತೀ ಬಿಡಿ. ಒಟ್ಟಾರೆ ನನ್ನ ಮಗ್ನ ಮದ್ವಿ ಭಾರಾ ನಿಮ್ಮೇಲೆ, ಹೆಗಡೇರ್ ಮೇಲೆಯಾ! ನೋಡಿ."

ದೈನ್ಯವಾಗಿ ಬೇಡಿಕೊಂಡ. ಶಾನುಭೋಗರು 'ಆಯಿತು' ಎಂದು ನಡೆದರು. ಮತ್ತೊಮ್ಮೆ ಹೆಗಡೆಯವರಿಗೆ ಸಿಕ್ಕಾಗ ವಿಷಯವನ್ನು ಪರ್ಯಾಯವಾಗಿ, 'ಅದು ನೀವೇ ಮಾಡತಕ್ಕ ಕರ್ತವ್ಯ' ಎಂದು ಬುದ್ಧಿ ಹೇಳುವವರ ಪಕ್ಷ ಹೊತ್ತು ಸೂಚಿಸಿಬಿಟ್ಟರು.

"ನನ್ನ ಹತ್ರ ಕೇಳಲೇ ಇಲ್ಲ! ಕೇಳಿದ್ರೆ ಅವನಿಗೆ ಕೊಡ್ಲಿಕ್ಕೇನಡ್ಡಿ?" ಎಂದು ಹೆಗಡೆಯವರು ನಗುತ್ತ ನುಡಿದರು.

ಆ ದಿವಸವೇ ಹೆಗಡೆಯವರು ಗೌಡನನ್ನು ಕರೆಸಿ,

"ಅವ್ರ ಕೈಲಿ ಹೇಳ್ಸಬೇಕಾಗಿತ್ತೇನೋ? ಮಳ್ಳ ........ ನನ್ನ ಹತ್ರ ಕೇಳಿದ್ರೆ ನಾ ಕೊಡ್ತಿದ್ದಿಲ್ಲ ಅಂತ! ಇಕ್ಲಿ ........ ತಗಂಡು ಹೋಗು, ಯಾವಾಗ ಬೇಕು ಅಂತ. ತೀರಾ ಖರ್ಚು ಮಾಡಬೇಡಾ!"

ವಾತ್ಸಲ್ಯಪೂರ್ವಕವಾಗಿ ನುಡಿದರು.

ಮದುವೆಯ ಮರುದಿನ ಗೌಡ ಮಗಸೊಸೆಯರನ್ನು ಹೆಗಡೆಯವರ ಮನೆಗೆ ಕರೆದುಕೊಂಡು ಬಂದು, ಅವರಿಗೆ ನಮಸ್ಕರಿಸ ಹೇಳಿದ. ಆಗ ಹೆಗಡೆಯವರಿಗೆ ತಮ್ಮ ಹಣದ ಸಾಫಲ್ಯತೆಯು ಅರಿವಾಗಿ, 'ಚಂದಾಗಿ ನಾಲ್ಕು ಮಕ್ಕಳಾಗಿ, ಸುಖದಲ್ಲಿರಿ,' ಎಂದು ಹರಸಿದರು. ಗೌಡ ಹಿಗ್ಗಿ, ಅವರ ಮನೆಯ ಅಂಗಳವನ್ನು ಮೂರು ನಾಲ್ಕು ಸಾರಿ ಸುತ್ತುವರಿದುಬಿಟ್ಟ.

ಐದಾರು ವರ್ಷಗಳು ಕಳೆದಿವೆ. ಮಗನಿಗೆ ಎರಡು ಮೂರು ಮಕ್ಕಳಾಗಿವೆ. ದಿನ ಸಂಜೆ ಗೌಡ ಮೊಮ್ಮಕ್ಕಳನ್ನು ಎತ್ತಿಕೊಂಡು ಆಡಿಸುತ್ತ, ಅವರ ಹಾಗೇ ತಾನೂ 'ಚಾಚಾ-ಚಾಚಾ' ಎನ್ನುವಾಗ ಒಮ್ಮೆಯಾದರೂ ಅವನಿಗೆ ಹೆಗಡೆಯವರ ನೆನಪು ಆಗದಿರುತ್ತಿರಲಿಲ್ಲ ಆಗ ಮಗ-ಸೊಸೆಯರನ್ನು ಕೂಡ್ರಿಸಿಕೊಂಡು, ವಿಷಯವನ್ನೆಲ್ಲ ತಿಳುಹಿ, 'ಅವ್ರ ಋಣ ತೀರ್ಸಬೇಕು ತಿಳೀತಾ? ಮರೀಬಾರ್ದು!' ಎಂದು ಆಜ್ಞಾಪಿಸಿ, ಮತ್ತೊಮ್ಮೆ ಮೊಪಲಿನ ಆನಂದವನ್ನು ಅನುಭವಿಸಿದ. 'ತಾನು ಋಣ ತೀರಿಸದೇ ಸತ್ತು ಹೋದರೆ?' ಎಂದು ಅವನಿಗೆ ಎನಿಸುತ್ತಿತ್ತೋ ಏನೊ!

*    *    *    *

ಉತ್ತರ ಕನ್ನಡ ಜಿಲ್ಲೆಯ ಎಂಟು ತಾಲೂಕುಗಳಲ್ಲೊಂದು ಯಲ್ಲಾಪುರ. ಪ್ರಕೃತಿದೇವಿ ಜಿಲ್ಲೆಗೆ ಕಾಡುಗಳ ಹಸಿರು ಸೀರೆಯ ವರದಾನವನ್ನೀಯುವಾಗ ಅಲ್ಲಿಂದಲೇ ನಿಂತು ಕೊಟ್ಟಿರಬೇಕೆಂಬಂತಿರುವ ಬಹು ಕಗ್ಗಾಡಿನ ಸೀಮೆ. ಪ್ರಕೃತಿಯ ಬಲವಂತ ಗಂಡ ಮಕ್ಕಳಲ್ಲೊಬ್ಬನಾದ ಸಹ್ಯಾದ್ರಿಯ ಶಲ್ಲಿಯ ಮಡಿಗು ಪದರಿನ ಗುಡ್ಡಗಾಡು, ಅಲ್ಲಲ್ಲಿ ತಲೆ ಎತ್ತಿ ಕಾವಲು ನಿಂತ ತಳವರರಂತೆ ಕಾಣುತ್ತಿದೆ. ಅಲ್ಲಿಯದೊಂದು ಹಳ್ಳಿ ಕವಡೀಕೆರೆ. ಊರು ವಿಶಾಲವಲ್ಲದಿದ್ದರೂ ಇಗ್ಗಟ್ಟೆನ್ನುವಂತಿಲ್ಲ. ಸುತ್ತುಮುತ್ತಲಿನ ಮರಮುಟ್ಟುಗಳನ್ನೆಲ್ಲ ಕಡಿದು ಮನೆಯ ಸುತ್ತ ಸ್ವಲ್ಪ ಬಯಲು ಮಾಡಿದ್ದಾರೆ. ಮನೆಯ ಮುಂದೆ ತೋಟ. ತೋಟದ ಆಚೆಯೊಂದು ಗುಡ್ಡ. ಅದರ ಇಳುಕಲಿನಲ್ಲಿ ಒಕ್ಕಲಿಗರ ಒಂದೆರಡು ಗುಡಿಸಲುಗಳು. ಮನೆ ಹಾಳತವಾಗಿದ್ದರೂ, ಮುಂಬದಿಯ ಸಿಮೆಂಟಿನ ಕಟ್ಟೆ, ಮೆಟ್ಟಿಲುಗಳು ಹೊಸ ವಾತಾವರಣದ ಛಾಯೆಯನ್ನು ತೋರಿಸುತ್ತಿದ್ದವು ಮನೆಯ ಯಜಮಾನರು ಗೋವಿಂದ ಹೆಗಡೆಯವರು.

ಅವರು ನಾಲು ಮಂದಿ ಅಣ್ಣತಮ್ಮಂದಿರು. ಭಿನ್ನಭಾವವಾಗಿ ಉಳಿದಿದ್ದಿಲ್ಲ ಭೂತಾಕಾರದ ಮನೆಯ ಒಡಲಿನಲ್ಲಿ ಒಂದುಗೂಡಿ ಇದ್ದರು. ಅದರಲ್ಲೂ ಗೋವಿಂದ ಹೆಗಡೆಯವರು 'ದೇವತಾ ಮನುಷ್ಯ'ರೆನ್ನಿಸಿಕೊಂಡಿದ್ದರು. ಸುತ್ತಲಿನ ಹಳ್ಳಿಗಳ ಯಾವ ಶುಭ-ಅಶುಭ ಕಾರ್ಯರಂಗದಲ್ಲೂ ಅವರಿದ್ದೇ ಇರುತ್ತಿದ್ದರು. ಮದುವೆ ಮಂಗಲಗಳಲ್ಲಿ ಅದರಲ್ಲಿ ಎವರಂತೆ ಆಗಿ, ಸಭೆಯಿಂದ ಹಿಡಿದು ಅಡಿಗೆಯ ಮನೆಯ ವರೆಗೂ ಓಡಾಡಿ, ವ್ಯವಸ್ಥೆ ಮಾಡಿಸುತ್ತಿದ್ದರು. ಅಲ್ಲದೆ, ಯಾರಾದರು ಸತ್ತು ಸ್ವರ್ಗವೇರಿದಾಗಲೂ ಸಂಬಂಧಿಕರಂತೆ ತಾವೂ ಮರುಗಿ, ಪುನಃ ಅವರಿಗೆಲ್ಲ ಸಮಾಧಾನ ಮಾಡಿ, ಸ್ವತಃ ಅವರ ಕಷ್ಟಕ್ಕೆ ಹೆಗಲಿತ್ತು, ಮುಂದಿನ ಕೆಲಸ ತೀರಿಸಿ ಬರುತ್ತಿದ್ದರು.

ಅವರಿಗೆ ಪೇಟೆಯ ನೂತನ ಸಂಸ್ಕೃತಿಯ ಝಳ ತಾಗಿದ್ದಿಲ್ಲ. ಅಲ್ಲದೇ ಹಳ್ಳಿ, ಪೇಟೆಯ ಸಂಸ್ಕೃತಿಗಳ ಮಧ್ಯಂತರ ಪರಿಸ್ಥಿತಿಯೂ ಅವರಲ್ಲಿದ್ದಿಲ್ಲ. ಅವರಿದ್ದುದು 'ಹಳೆಯ ಕಾಲದ ಮನುಷ್ಯ'ರಂತೆ.

ಅವರಿಗೆ ತಕ್ಕ ಆಳು ಶಿವ್ರಗೌಡ. ಅವನಿಗೆ ಯಾರಾದರೂ 'ಎಷ್ಟು ದಿನವಾಯಿತೋ ಹೆಗಡೇರ ಮನೆಯಲ್ಲುಳಿದು ?' ಎಂದು ಕೇಳಿದರೆ, ಧನೇರ್ ಮದ್ವಿಯಾಗಿ ಒಂದ್ ತಿಂಗ್ಳೀಗೆ ನನ್ನ ಮದ್ವಿ ಒಡ್ಯಾ. ದೊಡ್ಡ ಹೆಗಡೇರೇ ನನ್ನ ಮದ್ವಿ ಮಾಡ್ಸೀರು!' ಎಂದು ಹುಬ್ಬನೇರಿಸಿ, ಕಣ್ಣಗಲ ಮಾಡಿ ಹೇಳುತ್ತಿದ್ದ. ಗೋವಿಂದ ಹೆಗಡೆಯವರ ತಂದೆಯವರೇ ಅವನಿಗೆ ಮದುವೆ ಮಾಡಿಸಿದ್ದರೆಂದಮೇಲೆ ಕೇಳಬೇಕೆ? ಅದಕ್ಕೇ ಅವನಿಗೆ ಅಷ್ಟು ಹೆಮ್ಮೆ. ಅದಕ್ಕೆ ಅವನು ಹೆಗಡೆಯವರ ಹಿಂದಿನ ಹಿರಿಯರ ಕಾಲಕ್ಕೆ ಹೊರಳಿ, ಅಷ್ಟು ದೂರದಿಂದ ತನಗೂ ಹೆಗಡೆಯವರ ಮನೆತನಕ್ಕೂ ಇದ್ದ ಸಂಬಂಧವನ್ನು ಹೇಳುತ್ತಿದ್ದ. ಅದರಲ್ಲೂ ಹೆಚ್ಚಿನ ಸಂಗತಿ ಗೋವಿಂದ ಹೆಗಡೆಯವರ, ಅವನ ಮದುವೆ ಕೇವಲ ಒಂದೇ ತಿಂಗಳ ಹೆಚ್ಚುಕಡಿಮೆಯಲ್ಲಿ ಆಗಿದ್ದು. ಅದೇ ಅವನ ಭಾವಿಕತನಕ್ಕೆ ಪುಷ್ಟಿಕೊಟ್ಟಿದ್ದು. ಆದರಿಂದಲೇ ಅವನು, ತನಗೂ ಹೆಗಡೆಯವರಿಗೂ ಏನೋ ಜೀವಗಂಟು ಬಿದ್ದಿದೆಯೆಂದು ತಿಳಿದಿರುವರು.

ಹೆಗಡೆಯವರೂ ಅವನನ್ನು ಗೌರವವಾಗಿಯೇ ನೋಡಿಕೊಳ್ಳುತ್ತಿದ್ದರು. ಹೆಗಡೆಯವರಿಗೇ ಒಳ್ಳೇ ಮನುಷ್ಯನೆಂದಾದ ಮೇಲೆ ಎಲ್ಲರಿಗೂ ಹಾಗೆಯೇ

ಆತ ಆದಿರಲಿ! ಸ ಧಾರಿತ ಜಗತ್ತಿನ ನುರಿತ ಶಾನುಭೋಗರು ಸಹ—ಅವನ ಗಾಂಭೀರ್ಯಯುಕ್ತ ನಡತೆಯನ್ನು ಕಂಡು, ‘ಏನೋ ಬಹಳ ನಗಗಳುಳ್ಳ ನಂಬಿಗಸ್ಥನಿರಬೇಕು’ ಎಂದುಕೊಂಡಿದ್ದರು ಅಷ್ಟು ತನ್ನ ಸಹಜ ಗುಣಗಳಿಂದ ಇದ್ದು, ಮಾನ ಕಾಯ್ದುಕೊಂಡು, ನಂಬಿಗಸ್ಥನಾಗಿ ಬಾಳಬಂದಾತ. ಆದಕ್ಕೇ ಅವನಿಗೆ ಯಾರ ಋಣವನ್ನೂ ಇಟ್ಟುಕೊಳ್ಳಬಾರದೆಂದು ಇಚ್ಛೆ ಬಂದುದು. ಆದಕ್ಕೆ ಸರಿಯಾಗಿ ಶಾನುಭೋಗರು ಬಂದದ್ದರಿಂದ ಅವನಿಗೆ ವಿಷಯಪಲ್ಲಟವಾದಂತಾಗಿತ್ತು. ಆದರೆ, ಮನೆಗೆ ಬರುವಾಗ ಅರ್ಧ ದಾರಿಯಲ್ಲೇ ಅದೇ ವಿಚಾರ ಮತ್ತೆ ನೆನಪಾಯಿತು ಮನಸ್ಸಿನಲ್ಲಿ ಹಲವು ವಿಚಾರಗಳು ಬಂದು ಮುತ್ತತೊಡಗಿದವು. ಅವನಿಗೆ ಒಂದಕ್ಕೂ ಸಮರ್ಪಕ ಉತ್ತರ ಸಿಗದ್ದರಿಂದ ತೊಂದರೆಯೆನಿಸಿತು. ಆದರೂ, ನಂತರ ನೋಡಿದರಾಯಿತು ಎಂದು ಊಟ ಮಾಡಿ, ಹೆಗಡೆಯವರು ಮಧ್ಯಾಹ್ನದ ವಿಶ್ರಾಂತಿಯ ನಿದ್ರೆ ಮುಗಿಸಿ, ಎದ್ದಿರಬಹುದೆಂದು ಹೊರಟನು.

ಗೌಡನ ಮುಖ ತಮ್ಮ ಮನೆಯ ಹೊರಬದಿಯಲ್ಲಿ ಕಂಡಂತಾದ ಕೂಡಲೇ ಹೆಗಡೆಯವರು ‘ಗೌಡಾ........’ ಎಂದು ಕರೆದರು. ಅವರು ಜಗುಲಿಯ ಮೇಲೆ ಕುಳಿತಿದ್ದರು. ಎದ್ದು ಅಂಗಳಕ್ಕೆ ಬಂದರು. ಗೌಡ ಕೈಂಕರ್ಯಕ್ಕೆ ಸಿದ್ಧವಾದ ಭಂಗಿಯಿಂದ ಏನೆಂದು ಕೇಳಿದ.

“ಅದೇನೋ ಕಾಯಿದೆ ಬಂದಿದೆಯಂತೆ. ಸಾಲಾ ಕೊಟ್ಟೋರು, ತಗೊಂಡವರು ಎಲ್ಲಾ ಸರಕಾರಕ್ಕೆ ತಿಳಿಸಬೇಕಂತೆ! ಇನ್ನು ಮೂರು ನಾಲ್ಕು ದಿವಸ ಮಾತ್ರ ಅವಧಿ ಇದೆಯಂತೆ. ಹೋಗಿಬಂದು ಬಿಡುವನೇನೋ?”

ಹೆಗಡೆಯವರು ಸಹಜ ಧ್ವನಿಯಲ್ಲಿ ಆತ್ಮೀಯರಾಗಿ ನುಡಿದರು.

ಶಾನುಭೋಗರು ಹೆಗಡೆಯವರಿಗೆ ತಿಳಿಸುವಾಗ ಕಾಯಿದೆಯ ನಿಜ ಸ್ವರೂಪವನ್ನು ತಿಳಿಸಿರಲಿಲ್ಲ. ನಿಜವಾಗಿ ಹೇಳಬೇಕಾದರೆ—ಅವರಿಗೇ ಕಾಯಿದೆಯ ನಿಜವಾದ ರೀತಿ ತಿಳಿದಿರಲಿಲ್ಲ. ಏನೋ ದೊಡ್ಡ ಗೌಜಿ ಬಿದ್ದಂತೆ ತಾವೂ ಹೆಗಡೆಯವರಿಗೆ ಹೇಳಿದ್ದರು. ಅವರು ಹೇಳಿದಂತೆಯೇ ಹೆಗಡೆಯವರು ತಿಳಿಸಿದರು. ಅಲ್ಲದೆ, ಶಾನುಭೋಗರು ಹೇಳುವಾಗ ಹಲವಾರು ಸಲ ತೆಗೆದುಕೊಂಡ ‘ಟೆನನ್ಸಿ, ಋಣವಿಮೋಚನೆ’ ಎಂಬ ಶಬ್ದಗಳು ಸಹಿತ ಕೊಚಾಟೆ

ಯೆನಿಸಿ, ತಿಳಿಯುವೇ ಮರೆತು ಹೋಗಿತ್ತು. ಒಟ್ಟಿನಲ್ಲಿ ಅವರು ತಿಳಿದುಕೊಂಡ ಸಾರಾಂಶ — 'ಸರಕಾರಕ್ಕೆ ಅವರೇ ಛಾಪಿಸಿದ ಕಾಗದದಲ್ಲಿ ಇಬ್ಬರೂ ತಿಳಿಸ ಬೇಕಂತೆ' ಎಂದು ಮಾತ್ರ!

"........ಯಾಕ್ರಾ ಸರಕಾರಕ್ಕೆಲ್ಲಾ ತಿಳ್ಸೋದು? ನಿಮ್ಮ ಹಣಾನ ಮಡ್ಕಂಡು ಸಾಯ್ತನ್ರಾ?"

"ಶ್ಶಾ, ನೋಡು! ಆ ಕಾಯ್ದೆ ಹೆಸರು, ನೀನು ಹೇಳುವತನಕ ನೆನಪಾಯಿತು. 'ಋಣವಿಮೋಚನೆ ಕಾಯಿದೆ' ಎಂದಂತೆ! ಅದರಿಂದೇನೂ ಆಗುವದಿಲ್ಲವಂತೋ! ಬರೇ ತಿಳಿಸುವದಂತೆ. ವಿಚಾರಕ್ಕೆ ಕಡೆಗೆ ಕರದ್ರೆ ಹೋಗಿ, 'ನಾ ಕೊಡ್ತೇನೆ' ಎಂದು ಹೇಳಿ ಬಂದರಾಯಿತಂತೋ! ನಿನೇನ್ ನನ್ನ ಹತ್ರ ಸುಳ್ಳು ಹೇಳೋದ್ ಬಿದ್ದಿದೆಯೇನೋ?"

"ಹಾಂಗಾರಡ್ಡಿ ಇಲ್ರಾ" ಎಂದು ಒಪ್ಪಿದ. "ಮತ್ತ ನಂಗೇನೂ ತಿಳೂದಿಲ್ಲ! ಎಲ್ಲಾ ನೀವೇಯಾ!" ಸಂಗಡ ಎಚ್ಚರಿಗೆ ಕೊಡಲೂ ಮರೆಯಲಿಲ್ಲ

ಮರುದಿನ ತಾಲ್ಲೂಕ್ಕೆ ಹೋಗಿ, ಅರ್ಜಿಕಾಗದ, ಬರೆಯಲಿಕ್ಕೆ ಎಂತ ಐದಾರು ರೂಪಾಯಿ ಖರ್ಚು ಮಾಡಿ, ಲೇಖೀ ಮೂಲಕ ತಿಳಿಸಿದೆನೆಂತ ಸಮಾಧಾನ ಹೊಂದಿ ಬಂದರು. ಆ ಬರೆಯುವವನೂ ಕಾಯಿದೆಯ ನಿಜ ಸ್ವರೂಪವನ್ನು ತಿಳಿಸಲಿಲ್ಲ. ಅವನಿಗೆ ತಕ್ಕ ಶ್ರಮವಿಲ್ಲದೆ ನಾಲ್ಕೈದು ರೂಪಾಯಿಗಳು ಸಿಗುವಾಗ ಬಿಟ್ಟಾನೆ?

ಗೌಡನ ಮನಸ್ಸಿನಲ್ಲಿ ಮಾತ್ರ 'ತನ್ನ ಋಣ ಎಲ್ಲರಿಗೂ ತಿಳಿಯುವ ದಲ್ಲಾ!' ಎಂಬ ನಾಚಿಕೆ, ಖೇದದಿಂದೊಡಗೂಡಿಕೊಂಡು ಬಂದಿತ್ತು. ಆದರೆ ಹೆಗಡೆಯವರಿಗೆ ಪ್ರತಿನುಡಿಯುವ ಸ್ವಭಾವ ಅವನಲ್ಲಿಲ್ಲವಾದ್ದರಿಂದ ಅವರನ್ನೇ ನಂಬಿ ಸುಮ್ಮನುಳಿದ.

* * * *

"ಗೋವಿಂದ ಹೆಗಡೆಯರು ಕವಡೀಕೆರೇ.... ..."

ಕೋರ್ಟಿನ ಜವಾನ ಮೂರು ಸಾರೆ ದೊಡ್ಡದಾಗಿ ಕೂಗಿ ಕರೆದ. ಎರಡನೇಯ ಸಾರೆ ಕೂಗುವವರೊಳಗೇ ಹೆಗಡೆಯವರು ಅವನ ಹತ್ತಿರ ಬಂದು

ನಿಂತಿದ್ದರು. ಅವರ ಹಿಂದೆ ಬಾಲದಂತೆ ಗೌಡ ಇದ್ದ. ಹೆಗಡೆಯವರು ಬಂದಿದ್ದನ್ನು ಕಂಡ ಜವಾನ ಗೌಡನ ಹೆಸರು ಹಿಡಿದು ಕೂಗಿದ.

" ಶಿವರಾಮಣ್ಣ ಗೌಡ ಕವಡೀಕೆರೇ "

" ಇಲ್ಲೇ ಇದ್ದಾರೆ "

ಅಲ್ಲಿಯೇ ನಿಂತಿದ್ದ ಗುರುತಿನವರೊಬ್ಬರು ನುಡಿದರು.

ಗೌಡ ನಡುಗುತ್ತಿದ್ದ. ಅವನು ಈ ಕೋರ್ಟು ಗೀರ್ಟು ಕಂಡವನಲ್ಲ. ಅದರ ಅವಶ್ಯಕತೆ ಅವನಿಗೆ ಇದ್ದಿಲ್ಲ ಈ ಹಿಂದೆ ಕಂಡುಬರಲೂ ಇಲ್ಲ. ಅಷ್ಟೇಕೆ? ಹೆಗಡೆಯವರಿಗೂ ಕೋರ್ಟಿನ ವಿಷಯ ಏನೇನೂ ಗೊತ್ತಿರಲಿಲ್ಲ. ಅವರಿಗಾದರೂ ಇನ್ನೂ ತನಕ ಕೋರ್ಟು ಕಚೇರಿಗಳ ಆವಶ್ಯಕತೆ ಕಂಡು ಬಂದಿಲ್ಲ. ಕಳವಿನಿಂದ ಹಿಡಿದು ಕಾಲು ಮುರಿದ ವರೆಗಿನ ಪಂಚಾಯತಿಯನ್ನು ತಮ್ಮ ಹಳ್ಳಿಗಳಲ್ಲೇ ಅವರು ಬಗೆಹರಿಸಿ ಬಿಟ್ಟಿದ್ದರು. ಅಪರೂಪಕ್ಕಾದರೂ, ನೌಕರ ಮಂದಿ ಅವರ ಮನೆಗೆ ಹೋಗಿ-ಬಂದು ಮಾಡುತ್ತಿದ್ದರು. ಆದುದರಿಂದ ಹೆಗಡೆಯವರಿಗೆ ಕೋರ್ಟಿನ ಬಗ್ಗೆ ಅಷ್ಟು ಹೆದರುವ ಕಾರಣವೀಗ ವಿರಲಿಲ್ಲ.

ವಿಚಾರಕರು ಗೌಡನಿಗೆ ಒಂದು ಕಾಗದವನ್ನು ತೋರಿಸಿದರು. 'ಇದು ನಿನ್ನ ಹೆಬ್ಬೆಟ್ಟಿನ ಗುರುತೋ ? ' ಎಂದು ಕೇಳಿದರು.

ಗೌಡ, ತಾನೇ ಕಾಗದದ ಮೇಲೆ ಎಡಗೈ ಹೆಬ್ಬೆಟ್ಟಿನ ಗುರುತು ಹಾಕಿರುವೆನೆಂದು ವಿವರವಾಗಿ ತಿಳಿಸಿದ.

ಗೌಡನಿಗೆ ಏನೂ ಸ್ವಂತ ಜಮೀನು ಎಲ್ಲವೆಂದು ವಿಚಾರಕರಿಗೆ ತಿಳಿದಿತ್ತು. ಏಕೆಂದರೆ ಸ್ವಂತ ಜಮೀನಿದ್ದವರು ಅರ್ಜಿ ಕಾಗದದ ಮೇಲೆ ಬರೆಯಬೇಕಾಗುತ್ತಿತ್ತು. ಹಾಗೆ ಅರ್ಜಿಯಲ್ಲಿ ಇಲ್ಲವಾಗಿತ್ತು. ಆದರೂ ಅವರು, ಏನಾದರೂ ಹೆಚ್ಚುಕಡಿಮೆಯಾಗಿರಬಹುದೆಂದುಕೊಂಡರು. ಅಲ್ಲದೆ, ಸುಮ್ಮಸುಮ್ಮನೆ ಅರ್ಜಿ ಮಾಡಲಿಕ್ಕಿಲ್ಲವೆಂದು,

" ನಿನಗೆ ಜಮೀನು ಎಷ್ಟಿದೆಯೊ ? " ಕೇಳಿದರು.

ಗೌಡನಿಗೆ ಕೇಳಿಸಲಿಲ್ಲ.

"ಕಾಲೀಗ್ ಬಿದ್ದೆ ಒಡ್ಯಾ ಎಂತಾ ಅಂದ್ರಿ? ಕೇಳ್ಸಿಲ್ಲಾ" ಗೌಡ ಅವರ ಮೇಜಿನ ಕಾಲು ಹಿಡಿದು ನಮಸ್ಕರಿಸಿದ.

ಮತ್ತೊಮ್ಮೆ ಕೇಳಿದರು. ಆಗ, ಹೆಗಡೆಯವರ ಮನೆಯದೇ ಸ್ವಲ್ಪ ತೋಟ ಗದ್ದೆ ಮಾಡಿಕೊಂಡು ಜೀವಿಸುತ್ತಿರುವದನ್ನು ತಿಳಿಸಿದ. ಸಂಗಡ 'ಹೆಗಡೇರು ಪುಣ್ಯಾತ್ಮರು' ಎಂದು ಹೇಳಲೂ ಮರೆಯಲಿಲ್ಲ.

ಕೋರ್ಟಿಗೆ ಬಂದಕೂಡಲೇ ಹೆಗಡೆಯವರಿಗೆ ಹೊಸ ಶಾನುಭೋಗರಿಂದ ಎಲ್ಲವೂ ತಿಳಿದಿತ್ತು. ನ್ಯಾಯಾಧೀಶರು ನಗುತ್ತ—'ನಿನಗೆ ಸ್ವಂತ ಜಮೀನೇ ಇಲ್ಲವಾದ್ದರಿಂದ, ಮತ್ತು ನಿನ್ನ ಸಾಲದ ಬಗ್ಗೆ ಋಣಕೋರ್ಟಿನ ಕಾಯಿದೆಯಂತೆ ಯೋಗ್ಯ ಪುರಾವೆ ಹಾಗು ಕಾಗದಪತ್ರವಿಲ್ಲದ್ದರಿಂದ ನಿನ್ನನ್ನು ಸಾಲದಿಂದ ಪೂರ್ಣ ಬಿಡುಗಡೆ ಮಾಡಲಾಗಿದೆ' ಎಂದರು.

ಗೌಡ ಆಚೆಈಚೆಯವರ ಮೋರೆ ನೋಡಿದ. ಅವರು ಸರಿಯಾಗಿ ತಿಳಿಸಿದರು, ಗೌಡ ಒಮ್ಮೆಲೇ ಹೋಗಿ ನ್ಯಾಯಾಧೀಶರ ಕಾಲು ಹಿಡಿದ. ಹೊರಡಲೆಂದು ಎದ್ದು ನಿಂತ ಅವರು ಕುಳಿತುಕೊಂಡರು.

"ದೇವ್ರು, ನಮ್ಮಗ್ನ ಮದ್ವಿಕಾಲ್ದದಲ್ಲಿ ತಗಂಡಿದ್ದು ರುಪ್ಗೆ. ಅವ್ರ ದುಡ್ದು ನಾ ಕೊಡ್ತಿದ್ರೆ—ಆ ಮಾರಾಯ ನಮ್ಮಕ್ಕ್ಯಮರಿ ಸರಿಯಾಗಿಡಾಣಿಲ್ಲ. ದೇವ್ರು, ನೀವೇ ಹೀಂಗೇಳಿದ್ಮೇಲ್ಹೀಂಗೆ? ಸ್ವಲ್ಪಸ್ವಲ್ಪಾಗಿ ತೀರಸ್ತಿನಿ. ಕೊಡೋದ್ ನಾ ಸುಳ್ಳು ಹೇಳ್ತೀನ್ರಾ? ಮನೀಗ್ ಹೋದಮ್ನೇ...."

ಮುಂದೆ ಅಳುವಿನ ರಭಸದಲ್ಲಿ ಗೌಡನ ಧ್ವನಿ ಸಿಲುಕಿತು.

ನ್ಯಾಯಾಧೀಶರ ಕಾಲು ಅವನ ಬೆರಳುಗಳ ಸತ್ಯಯುತ, ದೈನ್ಯ ಹಿಡಿತದಲ್ಲಿತ್ತು. ಅವರಿಗೆ ತಪ್ಪಿಸಿಕೊಳ್ಳಲಾಗಲಿಲ್ಲ. ಅವರ ಕಾಲಿಗೂ ನಾಲ್ಕು ಹನಿ ಕಣ್ಣೀರಿನ ಅಭಿಷೇಕವಾಯಿತು. ಅವರ ಹೃದಯದ ಭಾವನಾಡಿ 'ಜುಂ, ಜುಂ' ಎಂದಿತು. ಉತ್ತರ ಕನ್ನಡ ಜಿಲ್ಲೆಯ ಈ ನಿರ್ಮಲ ಹೃದಯದ ದೈನ್ಯಕ್ಕೆ, ಸತ್ಯಕ್ಕೆ, ಅವರ ಹೃದಯ ಮಾರುಹೋಗಿ, ಬಾಗಿತು. ಕಣ್ಣಂಚು ಹರ್ಷಾಶ್ರುಗಳನ್ನು ಒಸರಿತು, ಮೋರೆ ಒರೆಸಿಕೊಳ್ಳುವ ನೆವದಿಂದ ಒರೆಸಿಕೊಂಡರು. ಕಾಣಿಸಿಕೊಳ್ಳಲಿಲ್ಲ. 'ಏಳು....ಏಳು, ನೀನು ಹೇಳಿದಂತೆಯೇ

ಆಗಲಿ' ಎಂದು ಕಳುಹಿಸಿದರು ಅವರ ಮನಸ್ಸು, 'ಯಾವ ಕಾರ್ಯವು ಪ್ರಬಲ ಪ್ರತಾಪವಾದರೂ ಇಂಥ ನಿರ್ಮಲ ಜೀವಿಗಳಿಗೆ ತಟ್ಟದು; ತಟ್ಟಿ ಪರಿಣಾಮ ಮಾಡದು' ಎಂದು ಹೇಳುತ್ತಿತ್ತು. ಅಲ್ಲದೆ, 'ಬಾಹ್ಯವನ್ನು ಕಾಯಿದೆಯಿಂದ ವ್ಯತ್ಯಾಸಗೊಳಿಸಿದರೂ, ಹೃದಯವು ತನಗೊಲ್ಲದ್ದಕ್ಕೆ ಒಗ್ಗಲಿಕ್ಕಿಲ್ಲ! ಅದು ಎಂದಾದರೂ ನಿಜತ್ವಕ್ಕೆ ತಿರುಗುವದೇ!' ಎಂಬ ತತ್ವದ ಅರಿವು ಅವರಿಗೆ ಬಂದಿತು. ಹಾಗೇ ಅದು ಅವರನ್ನು ಸ್ವಲ್ಪ ಹೊತ್ತು ಸುಮ್ಮನೆ ಕುಳ್ಳಿರಿಸಿತು!

ಅಂದು ಒಂದೇ ಗಾಡಿಯಮೇಲೆ ಗೌಡ, ಹೆಗಡೆಯವರು ಮನೆಗೆ ಬಂದರು. ಗೌಡ ಆಗಾಗ ಕಣ್ಣೊರಸಿಕೊಳ್ಳುತ್ತಿದ್ದ. ಆದ ಘಟನೆಯಿಂದ ಇಬ್ಬರಿಗೂ ಮನಬಿಚ್ಚಿ ಮಾತನಾಡಲಾಗಲಿಲ್ಲ. ಮರುದಿನ ಬೆಳಗಿನಲ್ಲಿ, ಹೆಗಡೆಯವರ ಮನೆಯ ಜಗುಲಿಗೆ ಗೌಡನ ಸೊಸೆಯ,—ಹಿಂದಿನಕಾಲದ— ಇಕ್ಕೇರಿ ಭಂಗಾರದ ಗೆಜ್ಜೆ ಕಟ್ಟಾಣಿ ಬಂದಿತು

"ಗೌಡಾ, ನಿನಗೆ ಮಳ್ಳು ಹಿಡೀತೇನೊ? ತೆಗಂಡುಹೋಗಿ ಮನೆಯಲ್ಲಿಡು. ಮಳ ಮಳ್ಳು ಹರೀಬೇಡಾ. ನಾ ಏನ ನಿನ್ನ ಮರ್ಯಾದೆ ತೆಗೀಬೇಕೆಂತ ಮಾಡಿದ್ನೇನೋ? ಎಲ್ಲಾ ಈ ಎಡವಟ್ಟು ಶಾನುಭೋಗರು ಮಾಡಿದ ವ್ಯಾಪಾರ. ಸರಿಯಾಗಿ ತಿಳಿಸಲಿಲ್ಲ, ಏನಿಲ್ಲ. ಅದಕ್ಕೇ ಹೀಗೆಲ್ಲಾ ಆಗಿದ್ದು. ಹುಂ, ನಡಿ"

ಕನಿಕರಗೊಂಡು ಸಂತಯಿಸಿದರು.

ಎಷ್ಟು ಹೇಳಿದರೂ ಗೌಡ ಕೇಳಲಿಲ್ಲ. ಕಡೆಗೆ ಹೆಗಡೆಯವರೇ ಸ್ವತಃ ಗೌಡನ ಮನೆಯವರೆಗೆ ಹೋಗಿ, ಅವನ ಸೊಸೆಯ ಕೊರಳಿಗೆ ಆ ದಾಗೀನೆಯನ್ನು ಹಾಕಿಸಿ, ಚನ್ನಾಗಿ ಹರಸಿ ಬರಬೇಕಾಯಿತು!

* * * *

ಮೊನ್ನೆ ಮೊನ್ನೆ ಯಾರೋ ಹೆಗಡೆಯವರ ಮನೆಗೆ ಬಂದ ಹೊಸಬರು, ಗೌಡನ ಹತ್ತರ ರೂಢಿಯಂತೆ— 'ಎಷ್ಟು ದಿನವಾಯಿತೋ ನೀನು ಹೆಗಡೇರ ಮನೆಯಲ್ಲುಳಿದು?' ಎಂದು ಕೇಳಿದರು. ಆಗ ಗೌಡ,

"ಧನೇರ್ ಮದ್ವಿಯಾಗಿ ಒಂತಿಗ್ಳೀಗೆ ನನ್ನ ಮದ್ವಿ ಒಡ್ಯಾ, ದೊಡ್ಡ ಹೆಗ್ಡೀರೇ ನನ್ನ ಮದ್ವಿ ಮಾಡ್ಸೀರು........ ..."

ಎಂದು ಮುಂತಾಗಿ ಹೇಳತೊಡಗಿದನು.

# ಕುಸುಮ ಕಂಟಕ

"ಅಪಹೃತರಾದ ಸ್ತ್ರೀಯರನ್ನು ತಿರುಗಿ ನಿಮ್ಮನಿಮ್ಮ ಮನೆಗಳಿಗೆ ಸೇರಿಸಿಕೊಳ್ಳಿ. ಅವರನ್ನು ಹಾಗೇ ಎಂದಿಗೂ ಪರದೇಶಿಗಳನ್ನಾಗಿ ಮಾಡಬೇಡಿ. ಅವರನ್ನು ಹಾಗೇ ಬಿಡುವದರಿಂದ ದೇಶದ ಲೌಕಿಕ, ನೈತಿಕ ಪರಿಸ್ಥಿತಿಯು ಇನ್ನೂ ಹದಗೆಟ್ಟು ಹೋಗುವದು. ಆದರಿಂದ ಸ್ವತಂತ್ರ ಭಾರತದ ಕೀರ್ತಿಯು ಅಳಿಯುವದು. ಅವರೆಲ್ಲ ನಿಮ್ಮ ಅಕ್ಕತಂಗಿಯರು, ಹೆಂಡಂದಿರು, ತಾಯಂದಿರು! ಅವರನ್ನೆಲ್ಲ 'ದಿಕ್ಕಿಲ್ಲದವರನ್ನಾಗಿ ಮಾಡುವದು ಪರಮ ಅನ್ಯಾಯ!

ಸೃಷ್ಟಿಯ ಎಲ್ಲ ಜೀವಿಗಳನ್ನು ಸೇವಿಸುತ್ತ—ದೇವರ ಪೂಜ್ಯತ್ವವನ್ನೂ ಪ್ರೇಮವನ್ನೂ ವ್ಯಕ್ತಪಡಿಸುವದಕ್ಕಾಗಿ ಮಾನವನು ದೇವರ ಪ್ರತಿನಿಧಿಯಾಗಿರುವನೆಂಬುದನ್ನು ಜ್ಞಾಪಕದಲ್ಲಿಟ್ಟುಕೊಳ್ಳಿರಿ."

"ಆದುದರಿಂದ, ದಯೆ, ಪ್ರೀತಿಯಿಂದ ಅವರನ್ನು ಪುನಃ ಸೇರಿಸಿಕೊಳ್ಳಿರಿ!"

ಎಂದು ಮಹಾತ್ಮಾ ಗಾಂಧೀಜಿಯವರು ತಮ್ಮ ಪ್ರಾರ್ಥನೋತ್ತರ ಭಾಷಣದಲ್ಲಿ ಕಳಕಳಿಯಿಂದ ನುಡಿದರು.

ಹೀಗೆ ಮಹಾಬಲ ಓದಿದ ಅವನು ದಿನವೂ ಸಂಯುಕ್ತ ಕರ್ನಾಟಕವನ್ನು ಓದುತ್ತಿದ್ದ. ಅದನ್ನು ಅವನಾಗಿ ಎಂದಿಗೂ ತರಿಸುವದು ಅಶಕ್ಯವೇ ಆಗಿತ್ತು. ನಿಜವಾಗಿ ಅವನಿಗೆ. ಪತ್ರಿಕೆ, ಸಾಹಿತ್ಯ ಎಂದರೆ ಆಗದು. ತನ್ನ ಅಂಗಡಿಯ ಕೆಲಸ, ಲೆಕ್ಕಪತ್ರಗಳ ಹೊರತು ಇನ್ನೇನನ್ನೂ ಅವನು ಮೆಚ್ಚುವದಿಲ್ಲ. ಮನೆಯಲ್ಲಿ ಹೆಂಡತಿ ಏನನ್ನಾದರೂ ತರಲು ಹೇಳಿದರೆ ‘ ಇಂದು ನನಗೆ ಬಹಳ ಕೆಲಸವಿದೆ. ಈಗ ಸಾಧ್ಯವಿಲ್ಲ. ನಾಳೆ ನೋಡುವಾ ’ ಎಂದು ಒರಟಾಗಿಯೇ ನುಡಿದುಬಿಡುತ್ತಿದ್ದ. ಬಾಲ್ಯದಿಂದ ಜೊತೆಗೂಡಿ ಆಡಿದ ಜೊತೆಗಾರರು ಒಮ್ಮೊಮ್ಮೆ ಅವನ ಅಂಗಡಿಗೆ ಬರುತ್ತಿದ್ದರು. ಅಂಗಡಿಯಲ್ಲಿ ಕೆಲಸವಿಲ್ಲದಾಗ ಅವನು ಅವರ ಸಂಗಡ ಹರಟೆ ಹೊಡೆಯುತ್ತಿದ್ದ. ಅವರ ಮಾತುಕತೆಯಲ್ಲಿ ಹೆಚ್ಚಾಗಿ ವ್ಯಾಪಾರದ ಸುದ್ದಿ. ಅದು ತಪ್ಪಿದರೆ ಹೆಣ್ಣಿನ ಸುದ್ದಿ. ಇನ್ನುಳಿದರೆ ಅವರಿವರ ಟೀಕೆ. ‘ ಅವನೋ........ ಎಲ್ಲ ಗೊತ್ತಿದೆ........ ಅವಳಿದ್ದಾಳಲ್ಲ! ಅಲ್ಲಿಗೆ ಹೋಗುತ್ತಾನಂತೆ. ಮಹಾ ಸಂಭಾವಿತ ಬಿಡು! ’—ಎಂದು ಮಹಾಬಲ ಟೀಕೆಗೆ ಮೆರುಗು ಕೊಡುತ್ತಿದ್ದ. ಒಂದು ದಿನ ಅವನ ಜೊತೆಗಾರರು,

“ ಏನೋ ಮಹಾರಾಯಾ, ಒಂದು ಪತ್ರಿಕೆಯನ್ನೂ ತರಿಸುವದಿಲ್ಲ. ಸಂಯುಕ್ತ ಕರ್ನಾಟಕ ತರಿಸಲ್ಲ. ಸಾಮಾನು ಕಟ್ಟುವದಕ್ಕೂ ಬರುತ್ತದೆ. ಬಂದ ಗಿರಾಕಿಗಳಿಗೆ ಓದಲೂ ಆಗುತ್ತದೆ. ಅಲ್ಲದೆ; ಈಗಿನ ದಂಗೆಯ ಸುದ್ದಿಗಳು ಮಜಾ ಇರುತ್ತವೆ ಕೊಡುವ ದುಡ್ಡಿಗೇನು ಸೋಲಲ್ಲ. ”

ನುಡಿದಿದ್ದರು.

ಅಂದಿನಿಂದ ಮಹಾಬಲ ಪತ್ರಿಕೆಯನ್ನು ತರಿಸತೊಡಗಿದ್ದ.

ಮಹಾಬಲ ಮೊದಮೊದಲು ಪತ್ರಿಕೆಯನ್ನು ಓದುತ್ತಿರಲಿಲ್ಲ. ಪತ್ರಿಕೆಯನ್ನು ಮರುದಿನದವರೆಗೆ ಇಟ್ಟು ಬಳಿಕ ಹರಿದು ಸಾಮಾನು ಕಟ್ಟುತ್ತಿದ್ದ. ಆದರೆ ಗಿರಾಕಿಗಳು ಓದಿ, ಸುದ್ದಿಯನ್ನು ಬಣ್ಣಿಸತೊಡಗಿದ್ದರಿಂದ ಅವನೂ ಸಾವಕಾಶ ಓದತೊಡಗಿದ್ದ. ಹಾಗೆಂತ ಅವನು ತನ್ನ ಕ್ಷೇತ್ರದ ಹೊರಗೆ ಎಂದಿಗೂ ಬುದ್ಧಿಯನ್ನು ಓಡಿಸುತ್ತಿರಲಿಲ್ಲ.

ಪತ್ರಿಕೆಯಲ್ಲಿನ ಪ್ರತಿ ಸಂಗತಿಯನ್ನು ಓದಿದಕೂಡಲೇ ಅವನ ಟೀಕೆ ಇದ್ದೇ ಇರುತ್ತಿತ್ತು. ಇಂದು ಗಾಂಧೀಜಿಯವರ ಭಾಷಣವನ್ನು ಓದಿದ ಕೂಡಲೇ ಅವನೆಂದ—,

" ಲೌಡಿಮಕ್ಕಳು ! ಯಾಕೆ ಅವರನ್ನೆಲ್ಲ ತಿರುಗಿ ಸೇರಿಸಿಕೊಳ್ಳುತ್ತಾರೆ. ಮತ್ತೊಬ್ಬರು ಮುಟ್ಟಿದಮೇಲೆ ತಮಗೇಕೆ ಎಂದಾಗಿರಬಹುದು. ಹಾಗೆ ಮಾಡ ಬಾರದು ಪಾಪ ! ನಿರಾಶ್ರಿತ ಆ ಹೆಂಗಸರಿಗೆ ಗತಿಯಾರಪ್ಪ ? "

ಗಾಂಧೀಜಿಯವರು ' ತಿರುಗಿ ಸೇರಿಸಿಕೊಳ್ಳಿ ' ಎಂದುದನ್ನು ಅವನು ಓದಿದ ಆದರೆ ' ನಿರಾಶ್ರಿತರಾದವರನ್ನು ತಿರುಗಿ ಸೇರಿಸಿಕೊಳ್ಳಲಿಲ್ಲ. ಅದಕ್ಕೇ ಗಾಂಧೀಜಿಯವರಿಗೆ ಹೇಳುವ ಪ್ರಸಂಗ ಬಂತು ' ಎಂದು ತೀರ ವಿರುದ್ಧವಾಗಿ ಅವನು ಅರ್ಥ ಮಾಡಿಕೊಂಡ. ಅರ್ಥ ಮಾಡಿಕೊಂಡಿದ್ದು ಅವನ ಕ್ಷೇತ್ರ ದೊಳಗಿನ ಬುದ್ಧಿಗೆ ತಕ್ಕಂತೆ !

ಮಹಾಬಲ ' ಪಾಪ ' ಎಂದು ದಯೆಯ ವಾಕ್ಯವನ್ನು ನುಡಿದದ್ದರಿಂದ 'ಅದು ವ್ಯಂಗವೇ ಹೊರತು ನಿಜದ ನುಡಿಯಲ್ಲ' ಎಂದು ಅವನ ಜೊತೆಗಾರರ ಚುಚ್ಚು ಮಾತನೊಗೆದರು—

" ಅಯ್ಯೋ........ ಅಯ್ಯೋ ! ಏನು ಕನಿಕರವಪ್ಪ ನಿನಗೆ ! ಅವರನ್ನು ಸೇರಿಸಿಕೊಳ್ಳುವದಿರಲಿ. ಆ ನಿರಾಶ್ರಿತ ಹೆಂಗಸರು ನಿನ್ನ ಅಂಗಡಿ ಬಾಗಿಲಿಗೆ ಬಂದರೆ ಎಂಟಾಣೆ ಕೊಟ್ಟೀಯೇನು ? ಅದಕ್ಕೇನಾದರೂ ಪ್ರಯೋಜನವಾಗ ಬೇಕಂದೀಯೆ. ಹೊರತೂ ಬಿಡಲಿಕ್ಕಿಲ್ಲ ! "

" ಛೆ, ಛೆ ಹಾಗೆಂದಾದರೂ............ "

" ಎಲ್ಲಾ ಗೊತ್ತಿದೆಯೋ ನಿನ್ನ ಪಂಟು, ಇಲ್ಲೇನು ದಂಗೆಯಾಗಲಿಲ್ಲ, ಮಣ್ಣಿಲ್ಲ. ಮತ್ತೇನು ಯಾರೂ ಹೊತ್ತುಕೊಂಡು ಹೋಗಲಿಲ್ಲ. ಆದರೂ ನೀನು ಅವಳನ್ನು ನಿರ್ಗತಿಕಳಾಗಿ ಮಾಡದೆಯಲ್ಲ ! ಅದೇ ಮುಖವೇನೋ ಈಗ ' ಪಾಪ ' ಎನ್ನುವದು ? ಭಾರಿ ದುಃಖಪಟ್ಟುಕೊಂಡೆಯಲ್ಲವೆ ? "

ಮಹಾಬಲನ ಮುಖ ಹುಳ್ಳಹುಳ್ಳಗಾಯಿತು. ಅವನಿಗೆ ಆ ಜೊತೆ ಗಾರನ ಈ ತೆರದ ಹೇಳಿಕೆ ಹೊಸದಾಗಿದ್ದಿಲ್ಲ. ಆದರೂ ತಾನು ಸೋತೆ, ತಾನು ಕೀಳು ಮನುಷ್ಯ ಎನ್ನಿಸಿಕೊಳ್ಳಬಾರದೆಂದು,

“ ಏನೋ ? ಯಾವದೋ ? ”

ಜೋರಾಗಿ ಪ್ರಶ್ನಿಸಿದ.

“ ಹೀಗೋ........ ನೆನಪಿಲ್ಲವೇ ? ಮರೆತಿರಬಹುದು ಬಿಡು. ಅದನು ನಾನೇ ನೆನವು ಮಾಡಬೇಕಾಯಿತು ! ”

ಎಂದು ಹೇಳತೊಡಗಿದ.

* * * *

ಮಹಾಬಲನ ತಂದೆ ಮಗನಿಗೆಂದು ಜಮೀನು, ಸಾಕಷ್ಟು ಹಣವನ್ನೆಲ್ಲ ದುಡಿದಿಟ್ಟು ಹೋಗಿದ್ದ. ಸಾಯುವ ಮೊದಲು ಮಗನಿಗೆ ಹೇಳಿದ್ದ —, ‘ ಇದ್ದ ಅಂಗಡಿಯನ್ನು ನಡೆಯಿಸಿಕೊಂಡು, ಜಮೀನಿನ ವ್ಯವಸ್ಥೆ ನೋಡಿಕೊಳ್ಳುತ್ತ ಬಂದರಾಯಿತು. ಒಂದೇ ಕೊರತೆ ಮಾತ್ರ ನನಗೆ ಕಾಣಿಸುತ್ತದೆ. ನಿನಗೆ ಮದುವೆ ಮಾಡಲಿಲ್ಲ. ಅದೇನು ನೀನೇ ಕಾಲನೋಡಿ ಮಾಡಿಕೊಂಡ ರಾಯಿತು. ’

ತಂದೆ ಕಾಲವಾದಾಗ ಮಹಾಬಲನಿಗೆ ಹತ್ತೊಂಬತ್ತರ ಪ್ರಾಯ. ಅವನ ಮನ ಏನೆಂದರೂ ಹೆಣ್ಣಿನತ್ತ ಸೆಳೆದುಹೋಗುತ್ತಿತ್ತು. ಮೇಲಾಗಿ ಅವನಿಗೆ ಅದ ಶಿಕ್ಷಣ ಅಲ್ಪ. ಓದುಬರೆಯಲು ಮಾತ್ರ ಈಗಂತೂ ಅವನಿಗೆ ಹೇಳಿ ಕೇಳುವವರೇ ಇಲ್ಲ. ಅವನೇ ಯಜಮಾನ. ‘ ಮದುವೆಯಾಗುವ ಎಂದರೆ ಎಲ್ಲಾ ವ್ಯವಸ್ಥೆ, ತಯಾರಿ ಆಗಬೇಕು. ಅದೆಲ್ಲ ಎಲ್ಲಿ ಕೂಡಲೇ ಸಾಧ್ಯ ? ’ ಎಂದು ಯೋಚಿಸಿದ. ಹಾಗೇ ಮುಂದುವರಿದ. ಮುಂದುವರಿಯಲು ಕಾರ ಣವೂ ಇತ್ತು.

ಮಹಾಬಲ ದಿನವೂ ದೇವಸ್ಥಾನಕ್ಕೆಂದು ಹೋಗುತ್ತಿದ್ದ. ಅದು ಭಕ್ತಿ ಯಿಂದಲ್ಲ. ಪದ್ಧತಿಯಂತೆ. ಜೊತೆಗಾರರಲ್ಲಿ ಕೆಲವರು ಹೋಗುತ್ತಾರೆಂದು ಅವನೂ ಹೋಗುತ್ತಿದ್ದನೆನ್ನಬಹುದು. ಅವನ ಜೊತೆಗಾರರು, ಅವನು ದಿನವೂ ದೇವಸ್ಥಾನಕ್ಕೆ ತಪ್ಪದೇ ಬರುವದಕ್ಕೆ ಬೇರೆ ಕಾರಣವನ್ನು ಹೇಳುತ್ತಿದ್ದರು. ಆ ಓಣಿಯ ಮೂಲೆಯದೊಂದು ಮನೆ-ಗುಡಿಸಲು ಅವನನ್ನು ಹೆಚ್ಚು ಸೆಳೆ ದಿತ್ತು. ಆ ಸಣ್ಣ ಗುಡಿಸಲಿನಲ್ಲಿ ವಾಸಿಸುತ್ತಿದ್ದವರು ಕಾಮಾಕ್ಷಿ, ಅವಳ ಮಗಳು ಸಾವಿತ್ರಿ.

ಕಾಮಾಕ್ಷಿ ಯಾವ ಊರಿನವಳೆಂದರೆ ಯಾರಿಗೂ ತಿಳಿಯದು. ಹಾಗಾಗಿ ಮಹಾಬಲನಿಗೂ ತಿಳಿಯದು. ಆದರೆ ದಿನವೂ ದೇವಸ್ಥಾನಕ್ಕೆ ಹೂಗಳನ್ನು ತರುವ ಎಳೆ ಜವ್ವನದ ಸಾವಿತ್ರಿಯನ್ನು ಮಾತ್ರ ಅವನು ನೋಡಿ ಬಲ್ಲನು. ದಿನವೂ ಅವನು ಅವಳನ್ನು ಕಾಣುತ್ತಿದ್ದ. ದಿನವೂ ಅವನಲ್ಲಿ ಹಲವು ವಿಚಾರಗಳು ಮೂಡಿ ಬರುತ್ತಿದ್ದವು. ಒಮ್ಮೆ, ಎಲ್ಲಿಯಾದರೂ ಸಾವಿತ್ರಿ ತಪ್ಪುಗಣ್ಣಿನಿಂದ ಅವನನ್ನು ನೋಡಿದ ದಿನ ಅವನು ತನ್ನ ತಲೆಯನ್ನು 'ಇದೆಯೋ? ಇಲ್ಲವೊ?' ಎಂದು ಹುಡುಕುವ ಪ್ರಸಂಗ ಬರುತ್ತಿತ್ತು. ಅಂತೂ ಅವನು ದಿನವೂ ಅವಳನ್ನು ನೋಡುವದಕ್ಕಾಗಿಯೇ ದೇವಸ್ಥಾನಕ್ಕೆ ಬರುತ್ತಿದ್ದನೆಂದರೇ ಸರಿಯಾದೀತು.

ಮಹಾಬಲ ಅಷ್ಟಕ್ಕೆ ಸುಮ್ಮನುಳಿಯಲಿಲ್ಲ. 'ಸಾವಿತ್ರಿ ಕಾಮಾಕ್ಷಿಯ ಮಗಳು. ಕಾಮಾಕ್ಷಿ ವಿಧವೆ, ನಿರ್ಗತಿಕಳು. ಎಲ್ಲಿಂದಲೋ ಅವಳು ಇಲ್ಲಿಗೆ ಮಗಳೊಂದಿಗೆ ಬಂದು ನೆಲಸಿದಳು. ಎಮ್ಮೆ ಸಾಕಿ, ಹಾಲು ಮಾರಿ ಜೀವನ ಸಾಗಿಸಿಕೊಳ್ಳುತ್ತ ಬಂದಳು. ಅವರಿಗೆ ಯಾರೂ ಗತಿಕರಿರಲಿಲ್ಲ. ನಿರ್ಗತಿಕರು................' ಹೀಗೆ ಏನೇನನ್ನೋ ಅವನು ಪತ್ತೆ ಮಾಡಿದನು.

ಕಾಮಾಕ್ಷಿಯ ಜೀವನ ಮುಕ್ಕಾಲು ಪಾಲು ದುಃಖದಲ್ಲೇ ಕಳೆಯಿತು. ಏರು ವಯಸ್ಸಿನಲ್ಲೇ ಪತಿಯು ತೀರಿದನು ಬಳಿಕ ಕಪಟವರಿಯಲಾರದ ಅವಳು ಓರ್ವ ಧೂರ್ತ ಕಾಮಿಯ ಮಾಂಸ ಮೋಹಕ್ಕೆ ಬಲಿಯಾದಳು. ಸಾವಿತ್ರಿಯನ್ನು ಹೆತ್ತಳು. ಅಲ್ಲಿಯವರೆಗೆ ಹೊಟ್ಟೆಗೆ ಒಂದು ತುತ್ತು ಅನ್ನವಾದರೂ ದೊರಕುತ್ತಿತ್ತು. ಜಾತಿಯವರು ಅವಳನ್ನು ಜಾತಿಯಿಂದ ಹೊರಗೆ ಹಾಕಿ, ಅವಳ ಪಾಲಿನದನ್ನೆಲ್ಲ ದೋಚಿಕೊಂಡರು. ಹಾಗಾಗಿ ಹಸಿ ಮೈಯಲ್ಲಿ ಅಲ್ಲಲ್ಲಿ ಕೆಲಸ ಮಾಡಿಕೊಂಡು ತುತ್ತು ತಿಂದೋ, ಉಪವಾಸವೋ ದಿನಗಳೆಯ ತೊಡಗಿದಳು. ಒಂದೊಂದು ದಿನ ಗತದಿನಗಳ ಸ್ಮರಣೆಗಳು, 'ಪತಿ ಪ್ರೇಮ, ಪತಿಯ ವಿನಾಶ, ಕಪಟ ಜಾಲ, ಕಾಮತೃಪ್ತಿಗೆಂದು ಅಸಹ್ಯ ಕೃತ್ಯ. ಜಾತಿಯ ಬಹಿಷ್ಕಾರ, ಸಾವಿತ್ರಿಯ ಜನನ, ಉಪವಾಸದ ಸಂಕಟ, ಅಲ್ಲಿ ಇಲ್ಲಿ ಬಿಕ್ಕೆ....' ಹೀಗೆ ಒಂದೊಂದಾಗಿ ಚಿತ್ರಪಟದ ದೃಶ್ಯಗಳಂತೆ ಅಚ್ಚಳಿಯದೆ ಕಣ್ಣಿಗೆ ಕಟ್ಟುತ್ತಿತು. ಆ ಹೊತ್ತಿನಿಂದ ನಾಲ್ಕೈದು ದಿನಗಳವರೆಗೂ ಕಣ್ಣೀರು ತಟಕಿಕ್ಕುತ್ತಲೇ ಇರುತ್ತಿತ್ತು. ಆ ನೀರು ದುಃಖದಿಂದ ಹೊರಟ ಕಣ್ಣೀರಲ್ಲ.

ದುಃಖದ ಅತಿ ಕಾವಿನಿಂದ ಹೃದಯವು ಬೆಂದು ಹೊರಟ ಅಸಹಾಯ ಅಬಲೆ ಯೋರ್ವಳ ರಕ್ತದ ಹನಿಹುಂಡುಗಳು! ಆದರೂ ಅವಳು ತನ್ನ ಸಂಕಟವನ್ನು ಮಗಳ ಮುದ್ದು ಮುಖವನ್ನು, ಪುಟ್ಟ ದೇಹವನ್ನು ನೋಡಿ ಕೆಲಪಟ್ಟಿಗೆ ಹಿಡಿತದಲ್ಲಿಟ್ಟುಕೊಳ್ಳುತ್ತಿದ್ದಳು.

ಸಾವಿತ್ರಿಯ ನಾಮಕರಣದ ದಿನ. ಅವಳು ಎಂದಿಗೂ ಮರೆಯಲಾರದ ದಿನವಾಗಿ ಸಂದಿದೆ. ಹೆಸರಿಡುವ ದಿನದಲ್ಲಿ ಎಲ್ಲರ ಮನೆಗೆ ಮುತ್ತೈದೆಯರು ಬರುತ್ತಾರೆ. ಮಂಗಳಕರವಾದ ಜೋಗುಳಗಳನ್ನು ಹಾಡುತ್ತಾರೆ ಸಿಹಿ ಪದಾರ್ಥ ಗಳನ್ನು ಹಂಚುತ್ತಾರೆ. ಇನ್ನೇನೇನೋ ಅನೇಕ ಆನಂದದ ಕೆಲಸಗಳು ಜರುಗುತ್ತವೆ. ಆದರೆ ಕಾಮಾಕ್ಷಿಯ ಮನೆಯಲ್ಲಿ ಇವೆಲ್ಲ ಎಲ್ಲಿ ಸಾಧ್ಯ ?

ಕಾಮಾಕ್ಷಿ ಅಂದು ಶಿಶುವನ್ನು ಎತ್ತಿಕೊಂಡು ತನ್ನ ಗುಡಿಸಲ ಚಿಕ್ಕ ಬಾಗಿಲ ಬಳಿ ನಿಂತಿದ್ದಳು. ಕೆಲಕಾಲ ಕುಳ್ಳಿರುತ್ತಿದ್ದಳು ಹಾಗೇ ಎದ್ದು ನಿಲ್ಲುತ್ತಿದ್ದಳು. ಅವಳು ಯಾರಾದರೂ ತನ್ನ ಗುಡಿಸಲಿಗೆ ಬಂದಾರು ಎಂದುಕೊಂಡಿದ್ದಳು. ಯಾರೂ ಬರುವದಿಲ್ಲನೆಂದು ಅವಳ ಒಳಮನ ನುಡಿದಿತ್ತು. ಆದರೂ ಆಶೆಯಿಂದ ಚಂಚಲಗೊಂಡ ಮನ ಅವಳನ್ನು ಬಾಗಿಲಲ್ಲಿ ಕುಳ್ಳಿರಿಸಿತ್ತು. ಹಾದಿಗಾಯಿಸುತ್ತಿತ್ತು. 'ಯಾರಾದರೂ ಬರಬಹುದು ಯಾರಾದರೂ ಬಂದಿದರೆ........!' ಎಂದು ಭಾವವನ್ನು ಕೆದಕುತ್ತಿತ್ತು. ಒಮ್ಮೊಮ್ಮೆ ಆಶೆಯ ನೋಟದಿಂದ ನಿಟ್ಟಿಸುತ್ತಿದ್ದಳು. ಒಮ್ಮೊಮ್ಮೆ ನಗುತ್ತಿದ್ದಳು. ಹೊತ್ತು ಮುಳುಗುತ್ತ ಬಂದ ಹಾಗೆ ಅವಳ ಮುಖ ಮುದುಡಿ ಬಸವಳಿದಿತ್ತು. ಅತ್ತು ಅತ್ತು ಕಣ್ಣು ಊದಿ ಕೊಂಡಿತ್ತು.

ಕತ್ತಲೆಯಾಯಿತು. ಒಳಗೆ ಹೋಗಿ ಮಿಣುಕು ಹಣತೆಯೊಂದನ್ನು ಹೊತ್ತಿಸಿದಳು

ಅವಳ ಒಬ್ಬಳೇ ಮಗಳ ಹೆಸರಿಡುವ ಸಮಾರಂಭಕ್ಕೆ ಯಾವ ಅತಿಥಿ ಗಳೂ ಗುರ್ತಿನವರೂ ಬರಲಿಲ್ಲ.

ನೊಂದ ಮನಸ್ಸಿನಿಂದ ಏನನ್ನೂ ಮಾಡಲಾರದಾದಳು.

ಒಂದಿಷ್ಟು ಬೆಲ್ಲವನ್ನು ತಂದು ಕೂಸಿನ ಬಾಯಿಗೆ ಒರೆಸಿದಳು. ಕೂಸು

ಬೆಲ್ಲವನ್ನು ಚಪ್ಪರಿಸಿದಂತೆ ಮಾಡಿತು. ತಾಯಿಗೆ ಅದೇ ಒಂದು ಇನಿದಾದ ಸಂಗತಿಯಾಯಿತು. ಆದರೆ ಮತ್ತೆ ದುಃಖ ತೂರಿಬಂದಿತು.

ಅವಳು ಯೋಚಿಸಿದಳು.................... !

‘ ಹೆಸರೇನು ? ಯಾವ ಹೆಸರಿಡಬೇಕು ?

ನನ್ನಂತೆ ಬೀದಿಯ ಗತಿ ಇವಳಿಗಾಗಬಾರದು !

ನನ್ನಂತೆ ಅನಿವಾರ್ಯವಾಗಿಯಾದರೂ ಇವಳಿಗೆ ಶೀಲದ ಪತನ ಆಗ ಕೂಡದು !

ಕಷ್ಟವಾದರೂ ಮರ್ಯಾದೆಯಿಂದ ಬಾಳಬೇಕು ! ಬೆಳಗಬೇಕು ! ’

ಕಾಮಾಕ್ಷಿ ಪತಿಯಿರುವಾಗ ಪುರಾಣದ ಸಾವಿತ್ರಿ ಸತ್ಯವಾನನ ಕತೆ ಕೇಳಿದ್ದಳು. ಅಂತೆ ಅವಳು ನಿಶ್ಚಯಿಸಿದಳು.

“ ಸಾವಿತ್ರಿ !........ ಸಾವಿತ್ರೀ, ನನ್ನ ಸಾವಿತ್ರೀಽಽ ” ಮಗಳನ್ನು ಮುದ್ದಿನಿಂದ, ದುಃಖ ಮರೆಸುವ ಮೋಹದಿಂದ ಕರೆದಳು, ಅಪ್ಪಿದಳು, ಲಲ್ಲೆ ಮಾಡಿದಳು.

ಬದಿಯಿಂದ ಬಂದ ಬೆಕ್ಕು ‘ ಮಿಯಾಂವ್ ’ ಎಂದಿತು. ಅತಿಥಿಗಳಾರೂ ಇಲ್ಲದ ಮನೆಗೆ ಆ ಬೆಕ್ಕೇ ಅತಿಥಿಯಾಯಿತು.

ಕಾಮಾಕ್ಷಿಯ ಮೋಹ - ಮಮತೆ ಬೆಕ್ಕಿನ ಬರುವಿಕೆಯಿಂದ ಒಮ್ಮೆ ಮರೆಯಾಯಿತು. ‘ ಯಾರೂ ಬರಲಿಲ್ಲ ’ ಎನ್ನುವ ನೆನಪು ಮತ್ತೆ ಬಂದಿತು ಆದರೂ ಬೆಕ್ಕನ್ನೇ ಅತಿಥಿಗಳ ಸಾಲಿನಲ್ಲಿ ಕಾಮಾಕ್ಷಿ ಎಣಿಸಿದಳು ಉಣ್ಣಲು ಅವಳಿಗೆ ಹೊಟ್ಟೆತುಂಬ ಇಲ್ಲವಾದರೂ ಬೆಕ್ಕಿಗೆ ಅನ್ನ, ಬೆಲ್ಲ ಫಳಹಾರವನ್ನಿಕ್ಕಿದಳು. ಬೆಕ್ಕು ಅದನ್ನು ತಿನ್ನುತ್ತಿರುವಾಗ ಕಾಮಾಕ್ಷಿ ಯಾವುದೋ ಒಂದು ಬಗೆಯ ಸಮಾಧಾನದಿಂದ ನೋಡುತ್ತಿದ್ದಳು. ನೋಡುತ್ತ ತನ್ನ ದುಃಖದ ಬಗೆಯನ್ನು ಕ್ಷಣಕಾಲ ಮರೆತಳು.

ಸಾವಿತ್ರಿ ಬೆಳೆಯತೊಡಗಿದಳು. ಕಷ್ಟ ಸುಡುತ್ತಲೇ ಇತ್ತು. ತಾಯಿ ಕಾಮಾಕ್ಷಿ ಮಗಳಿಗೆ ತಿಳಿಯುವದೋ ಇಲ್ಲವೋ ಎನ್ನುವ ಅರಿವಿಲ್ಲದೆ— ತನ್ನ ಬವಣೆಯನ್ನು ಆದ್ಯಂತವಾಗಿ ನುಡಿಯುತ್ತಿದ್ದಳು. ಮಗಳು ಬೆರಗುಗಣ್ಣಿನಿಂದ

ಏಕೋಭಾವದಿಂದ ಕೇಳುತ್ತಿದ್ದಳು. ಆದರೆ ಏನೆಂದು ಎಳೆಯ ಬುದ್ಧಿಗೆ ಅರಿವಾಗುತ್ತಿರಲಿಲ್ಲ. ಅರಿತರೂ ಮುಸುಕು ಮುಸುಕು!

ಯಾರು ಮಾತನಾಡಿಸಿದರೂ ನಗುತ್ತ ಅಂಬೆಗಾಲಿಕ್ಕಿಕೊಂಡು ಹೊರಬರುವ ಸಾವಿತ್ರಿ ಬೆಳೆದಿದ್ದಳು. ನಾಚಿಕೆ ಮುಂತಾದ ಪ್ರಾಯದ ವಿಶೇಷ ಗುಣಗಳು ತುಂಬಿ ತುಳುಕುತ್ತಿದ್ದವು. ಯಾರಾದರೂ ಸರಿಯಾಗಿ ನೋಡಿದರೆ ತಲೆ ತಗ್ಗಿಸಿ 'ಸರಕ್ಕನೆ' ಒಳಗೆ ಸರಿಯುತ್ತಿದ್ದಳು. ವಯಸ್ಸಿನ ಮೆಟ್ಟಲು ಒಂದೊಂದಾಗಿ ಕಳೆದು ಹದಿನಾಲ್ಕಕ್ಕೆ ಏರಿತ್ತು.

ಸಾವಿತ್ರಿಯ ಬೆಳವಣಿಗೆಯನ್ನು ನೋಡಿ ಕಾಮಾಕ್ಷಿ ಹಿಗ್ಗುತ್ತಿದ್ದಳು. ಕೂಡಲೇ ಕುಗ್ಗಿ ಕೊರಗುತ್ತಿದ್ದಳು. 'ಸಾವಿತ್ರಿಯ ಗತಿಯೇನು?' ಎಂಬ ಮುಂದಿನ ವಿಚಾರ ಅವಳನ್ನು ನಡುಗಿಸುತ್ತಿತ್ತು. ಅವಳು ಸಾವಿತ್ರಿಗೆ ಒಂದು ಗತಿಯನ್ನು ಕಾಣಿಸಲು ಸಾವಿತ್ರಿಯನ್ನು ಓರ್ವ ಒಳ್ಳೇ ಗುವರನ ಕೈಗೆ ಕೊಡಲು ಯತ್ನಿಸತೊಡಗಿದಳು. ತನ್ನ ಗುರ್ತಿನ ಹಲವರಲ್ಲಿ ಕೇಳಿದಳು. ತನ್ನಂತೆ ಜಾತಿ ಬಾಹಿರರಾದವರಲ್ಲಿ ಕೇಳಿದಳು. ಆಗಬಹುದಾದ ಜಾತಿಯವರಲ್ಲಿ ಕೇಳಿದಳು. ಯಾರೂ ಸಾವಿತ್ರಿಯನ್ನು ಹೆಂಡತಿಯೆಂದು ಗ್ರಹಿಸಿಕೊಂಡು ಬಾಳಲು ಮುಂದುವರಿಯದಾದರು. ಪರದೇಶಿ ಹೆಣ್ಣಿಗೊಂದು ಗತಿ ಇಲ್ಲದಾಯಿತು, ನೆಲೆ ಇಲ್ಲದಾಯಿತು. ಕಾರಣ–ಅವಳು ಕುಲವಿಲ್ಲದ ಹೆಣ್ಣು!

ತಾಯಿಯ ದೇಹ ಕೊರಗಿ ಕೊರಗಿ ಸಣ್ಣಾಗುತ್ತ ಬಂದಿತು. ನಡು ನೀರಿನಲ್ಲಿ ಮುರುಕು ದೋಣಿಯೂ ಚೂರುಚೂರಾಗಿ ಅಸ್ಥಿರವೇ ಕಾಣದಾಯಿತು. ಇಷ್ಟು ದಿನಗಳ ಅವಳ ಆಸೆ ಕಮರಿತು. ನಂಬಿಗೆಯ ತೃಷೆ ಆರದೆ ನಿರಾಶೆಯನ್ನು ಮುಸುಕಿಬಿಟ್ಟಿತು!

ಅದೇ ಸಮಯ. ಒಂದುದಿನ ಮಹಾಬಲ ಕಾಮಾಕ್ಷಿಯನ್ನು ಮನೆಗೆ ಕೆಲಸಕ್ಕೆಂದು ಕರೆಯಿಸಿದ. ಮಾತುಮಾತಿನಲ್ಲಿ ತನ್ನ ಇಚ್ಛೆಯನ್ನು ತಿಳಿಸಿದ.

"ನೀನೇನು ಹೆದರಬೇಡ. ನಾನು ಅವಳನ್ನು ಖಾಯಂ ಆಗಿ ಇಟ್ಟುಕೊಳ್ಳುತ್ತೇನೆ. ನನಗಂತೂ ಮದುವೆಯಾಗಿಲ್ಲ. ಮತ್ತೇಕೆ ಹೆದರಿಕೆ?"

ಕೇಳುತ್ತಿದ್ದ ಕಾಮಾಕ್ಷಿಗೆ ತೆಪ್ಪ ದೊರಕಿದಂತೆನಿಸಿತು. ಮುನ್ನ ಎಣಿಸಿಕೊಂಡಿದ್ದ ಆದರ್ಶವೆಲ್ಲ ಒಂದು ಬಾರಿ ಆದ ನಿರಾಶೆಯಿಂದ ಮರವೆಯಾಗಿತ್ತು.

ಕಾಮಾಕ್ಷಿಗೆ ಮಹಾಬಲನೇ ತಮ್ಮ ಪಾಲಿನ ದೇವರಾಗಿ ಕಂಡನು. ಇಲ್ಲದೇ ಮಹಾಬಲನೇ ಮನೆಯ ಯಜಮಾನನೆಂದು ತಿಳಿದಿತ್ತು.

" ಯಾವುದೇ ರೀತಿಯಿಂದಲೂ ನನ್ನ ಮಗಳು ನಿರ್ಗತಿಕಳಾಗಳು. ಮನೆಯಲ್ಲಿಯೇ ಇಟ್ಟುಕೊಳ್ಳದಿದ್ದರೂ ಒಳ್ಳೇ ಮನೆಯಲ್ಲಿ ಅವಳನ್ನು ಇಟ್ಟುಕೊಂಡಿರಬಹುದು. ನನ್ನ ಮಗಳಿಗೆ ಎಂತಾಗಲಿ ಸುಖ ಸಿಕ್ಕಿದಂತಾಯಿತು ! " ಎಂದು ಹಿಗ್ಗಿದಳು. ತರುಣ, ಅವಿವಾಹಿತ, ಚುರುಕು ಮಹಾಬಲನ ಮಿದು ನಗೆಗೆ ಮರುಳಾದಳು. ಜೇನಿಗಿನದೆಲ್ಲ ಹಾಲೆಂದುಕೊಂಡಳು. ಬರೀ ಅಮೃತವನ್ನು ಕಲ್ಪಿಸಿದಳು. ಬರುವ ಹಾಲಾಹಲವನ್ನು ಯೋಚಿಸಲಿಲ್ಲ ಮೊದಲು ತಾನೆಲ್ಲ ತಪ್ಪಿ ಬವಣೆಯಲ್ಲಿ ಬೆಂದಳೋ ಅಲ್ಲೇ ಮಗಳನ್ನೂ ಜಾರಿಸಿದಳು !

ಮಹಾಬಲ ಸಾವಿತ್ರಿಯನ್ನು ಸ್ವೀಕರಿಸಿ ತನ್ನ ಮಾಂಸಪೋಷಣವನ್ನು ಹೊಂದುತ್ತ ಬಂದನು. ವರುಷ ಹಾಗೂ ಹೀಗೂ ಸಂದಿತು ಸಾವಿತ್ರಿಗೆ ಒಂದು ಗಂಡು ಮಗು ಆಯಿತು. ಸಾವಿತ್ರಿ ಆಗ ಸಂಭ್ರಮವಾಗಿಯೇ ಇದ್ದಳು.

ಆದರೆ............?

ಮಹಾಬಲನ ದೂರದ ಸಂಬಂಧಿಕರು, ಜೊತೆಗಾರರು ಕೂಡಿ ಮಹಾಬಲನಿಗೆ ಒತ್ತಾಯ ಮಾಡಿ, ಹೆಣ್ಣೊಂದನ್ನು ಗಂಟು ಹಾಕಿ ಲಗ್ನ ಮಾಡಿದರು. ಅವರಿಗೆ ಈ ಸಮಾಚಾರ ತಿಳಿಯದಾಗಿತ್ತು. ಅವನೂ ಹೇಳಿರಲಿಲ್ಲ. ಹೇಳಿದರೆ ತನ್ನ ಮರ್ಯಾದೆಗೆ ಕುಂದು ಬರುವದೆಂದು ಸುಮ್ಮನಿದ್ದ. ತನ್ನ ಮರ್ಯಾದೆಯ ಹಾದಿಯಲ್ಲಿ ಸಾವಿತ್ರಿಯ ಇಡೀ ಜೀವನವನ್ನು ಸುಡಲು ಸಮ್ಮತಿಸಿದ. ಸಮಾಜವೆಲ್ಲ ಕೀಳೆಂದು ಬಗೆದು ಬದಿಗೊತ್ತಿದ ಸಾವಿತ್ರಿಯನ್ನು, ಹೆಣ್ಣೊಬ್ಬಳನ್ನು ಉಪಭೋಗಿಸಿಕೊಂಡು ಕಸವೆಂದು ಬೀಸಾಡಿದ.

ಸಾವಿತ್ರಿಯ ಬಡಿಸಿದ ಅನ್ನದಲ್ಲಿ ಹೊಲಸು ಬಿದ್ದಿತು. ಅವಳ ತುತ್ತನ್ನು ಕಸಿದೊಯ್ದರು. ಮೇಲಿನಿಂದ ಹೊಟ್ಟೆ ಎರಡಾಗಿತ್ತು, ಇಮ್ಮಡಿಯಾಗಿತ್ತು.

ತಾಯಿಯಂತೆ ಅವಳು ಅಲ್ಲಿ ಇಲ್ಲಿ ಕೆಲಸ ಮಾಡಿಕೊಂಡು ತಿರುಗುತ್ತಿದ್ದಳು. ಒಂದು ತಿಂಗಳು ಒಬ್ಬ, ಮತ್ತೊಂದು ತಿಂಗಳು ಮತ್ತೊಬ್ಬ. ಒಂದು ದಿನ ಒಬ್ಬನ ಪಾಲು, ಮತ್ತೊಂದು ದಿನ ಇನ್ನೊಬ್ಬನ ಪಾಲು. ಜಗತ್ತಿನ ಕಾಮದ ಹುಚ್ಚು ಕುನ್ನಿ ಅವಳನ್ನು ಅನವರತವಾಗಿ ಕಚ್ಚುತಿತ್ತು, ಕೊಳೆಸುತ್ತಿತ್ತು !

ಸಾವಿತ್ರಿ ತನ್ನ ದುಃಖವನ್ನು

“ ಸುಡಬೇಕು ನನ್ನ ಜನ್ಮವನ್ನು. ಎಷ್ಟೆಲ್ಲ ಹೇಸಿಕೆ ಈ ಹೊಟ್ಟೆಯ ಕೂಳಿಗಾಗಿ. ಇಂದು ಎಲ್ಲಿಯೂ ಸದಾ ಕೆಲಸಕೊಟ್ಟು ಮಾನದಿಂದ ನನ್ನಂಥವರನ್ನು ಉಳಿಸುವವರಿಲ್ಲ ಏಕೆ ಸಾವು ಬರುವದಿಲ್ಲ ! ”

ಎಂದು ಅಳುತ್ತ ಹಾಡಿಕೊಳ್ಳುತ್ತಿದ್ದಳು. ಆದರೂ ಮಹಾಬಲನ ಬಗ್ಗೆ ಆವಳು ಒಂದಾದರೂ ಕಟುಮಾತನಾಡಲಿಲ್ಲ.

“ ಅವರು ಅವಳ ಸಂಗಡಲಾದರೂ ಚನ್ನಾಗಿರಲಿ. ನಾನೇಕೆ ಮಧ್ಯ ಹುಳಿ ಹಿಂಡಲಿ ? ಅವಳೂ ನನ್ನಂತೆ ಹೆಣ್ಣು. ನನಗೊಬ್ಬಳಿಗೆ ಈ ಗತಿಯಾಗಿದ್ದೇ ಸಾಕು ಇನ್ನಾರಿಗೂ ಬೇಡ ! ” ಎಂದು ಕಣ್ಣೀರು ಹರಿಸುತ್ತಿದ್ದಳು. ಕಣ್ಣೀರು ದುಃಖದ ಕತೆಯನ್ನು ಉಸುರುವಂತಿರುತ್ತಿತ್ತು. ಸುಖದ ದಿನಗಳಿಗೆ ಮೇಲಿಂದ ಮೇಲೆ ತರ್ಪಣ ಬಿಡುತ್ತಲಿರುತ್ತಿತ್ತು.

ಇಂದಿಗೂ ಸಾವಿತ್ರಿ, ಅವಳ ತಾಯಿ ಅದೇ ಮುರುಕು ಗುಡಿಸಲಿನ ಹೊರ ಕಟ್ಟೆಯ ಮೇಲೆ ಕುಳಿತಿರುತ್ತಾರೆ. ಅವರ ಮುಖಗಳಲ್ಲಿ ಪ್ರಸಿದ್ಧ ಕಲೆಗಾರನು ತನ್ನ ಕುಂಚದಿಂದ ಚಿಂತೆಯ ಭಾವವನ್ನು ಚಿತ್ರಿಸುವಾಗ ನೆರಿ ಎಬ್ಬಿಸಿದಂತೆ ನೆರಿಗಳು ಎದ್ದು ಕಾಣುತ್ತಿವೆ. ಅವರು ಅಳುತ್ತ, ಒರೆಸಿಕೊಳ್ಳುತ್ತ ತಮ್ಮ ದುಃಖದ ಕತೆಯನ್ನು ಹಲುಬಿಕೊಳ್ಳುತ್ತಿರುತ್ತಾರೆ............ ಮಳೆಗಾಲದಲ್ಲಿ ಹರಕು ಮುರಕು ಮುಚ್ಚಿಗೆಯೊಳಗಿಂದ ಮನೆಯೂ ಸಹ ನೀರ ಕೆಡವುತ್ತ ಅವರ ಅಳುವಿನಲ್ಲಿ ಬೆರೆಯುತ್ತಿರುತ್ತದೆ !

* * * *

ಮಹಾಬಲನಿಗೆ ಚುಚ್ಚು ಮಾತು ಚನ್ನಾಗಿ ತಾಗಿತು.

“ ನೀನೇನು ಸಣ್ಣ ಸಾಮಾನ್ಯ ಪಾಪಿಯಲ್ಲ ! ಗೂಂಡಾಗಳಿಗಿಂತ ಮಿಕ್ಕಿದವ. ಅವರು ಆ ಕೆಲಸಕ್ಕೇ ಬಹಿರಂಗವಾಗಿ ಬಿದ್ದವರಿರುತ್ತಾರೆ. ನೀನಾದರೆ ಹಾಗಲ್ಲ. ಬೇಕಾದಷ್ಟು ಅನ್ಯಾಯ ಮಾಡಿಕೊಂಡು ಸಭ್ಯನಂತೆ ಇರುವವ ” ಎಂದು ಜೊತೆಗಾರ ನಗುತ್ತ ನುಡಿದ.

ಮಹಾಬಲನ ಮನ ಸ್ವಲ್ಪ ಅಳುಕಿತು. ಉಗುಳು ನುಂಗಿಕೊಂಡು,

“ ಆದರೂ ನೀನು ಮಹಾ ಮನುಷ್ಯನಪ್ಪ ! ”

ನಗೆಯಲ್ಲಿ ವಿಷಯನ್ನು ತೇಲಿಸಿದ. ಅಷ್ಟರಲ್ಲಿ ಗಿರಾಕಿಗಳು ಬಂದರು. ಎದ್ದು ನಡೆದ. ಆದರೆ ಅವನ ದಯಾಶೂನ್ಯ, ಕೃತಕ ಮನಸ್ಸು,

"ಊಂ, ದಂಗೆಯಲ್ಲಿ ಎಷ್ಟು ಸ್ತ್ರೀಯರು, ಹುಡುಗರು, ನಿರ್ಗತಿಕರಾಗಿ ಬೀದಿಬೀದಿಯಲ್ಲಿ ಸಾಯುತ್ತಿದ್ದಾರೆ, ಹೊಟ್ಟೆಗೆ ಸಹಿತ ಇಲ್ಲದೆ, ಅಂದ ಮೇಲೆ ಇವರದೇನು ಹೆಚ್ಚು ? ಇಲ್ಲಿ ಈ ರೀತಿಯಿಂದಾದರೂ ಅನ್ನ ಸಿಗುತ್ತದೆ, ಮತ್ತೇನು ? ಹೊಟ್ಟೆಗೇ ಇಲ್ಲದವರಿಗೆ ಮಾನಮರ್ಯಾದೆಯಂತೆ ! "

ಎಂದೇ ನುಡಿಯಿತು ! ಅವನ ದೃಷ್ಟಿಯಲ್ಲಿ ತನ್ನದೇನು ಅಂಥ ಗಣ್ಯ ಅಪರಾಧವಲ್ಲವೆಂದೇ ಆಗಿದೆ. ಹೀಗಾಗಿ ತಲೆಯನ್ನು ಕುಡುಗಿಕೊಂಡು ತನ್ನ ಕೆಲಸಕ್ಕೆ ಹೊರಟ.

* * * *

ಮಹಾಬಲ ಇಂದಿಗೂ ಪತ್ರಿಕೆ ತರಿಸುತ್ತಲೇ ಇದ್ದಾನೆ. ಓದುತ್ತಲೂ ಇರುತ್ತಾನೆ ! ಆದರೆ ಅವನು ಸಮಾಜೋದ್ಯಾನದ ಒಂದೊಂದೇ ಹೂಗಳನ್ನು ಕತ್ತರಿಸಿ, ಕೆಡಿಸಿ, ಸಮಾಜಸೌಂದರ್ಯವನ್ನೂ, ಭದ್ರತೆಯನ್ನೂ ಕೆಡಿಸುತ್ತಿರುವ ಕುಸುಮ-ಕಂಟಕ !

# ಅವರೇಕೆ ಇನ್ನೂ ಬರಲಿಲ್ಲ?

" ಅವರೇಕೆ ಇನ್ನೂ ಬರಲಿಲ್ಲ ?....ಏಕೆ ಇನ್ನೂ ಬರಲಿಲ್ಲ ? ಪೇಟೆಗೆ ಹೋದವರು ಸಂಜೆಗೆ ಮನೆಗೆ ಬಂದೇ ಬರುತ್ತಿದ್ದರು. ಬಾಗಿಲಿಗೆ ಬರುವಾಗಲೇ 'ಕಲ್ಯಾಣೀ' ಎಂದು ಒಂದು ದಿನವೂ ಕರೆಯದಿರುತ್ತಿದ್ದಿಲ್ಲ. ಇಂದಿಗೆ ನಾಲ್ಕು ವರ್ಷವಾದರೂ ಪೇಟೆಗೆ ಹೋದವರು ಒಂದು ರಾತ್ರಿಯೂ ಅಲ್ಲಿ ಇದ್ದುದಿಲ್ಲ. ಇಂದೇಕೆ ಬರಲಿಲ್ಲ ?.... .. ಏಕೆ ಬರಲಿಲ್ಲ ? ಹಾಯ್.... ಹುಚ್ಚು ಮನಸ್ಸೇಕೆ ಇಷ್ಟು ಭಯಪಡುತ್ತಿದೆ ? ಭಯವೇತರದು ? ಆದರೆ.... ಅವರೇಕೆ ಇನ್ನೂ ಬರಲಿಲ್ಲ ? "

ಕಲ್ಯಾಣಿ ತನ್ನಷ್ಟಕ್ಕೆ ತಾನೇ ಹಲುಬಿಕೊಳ್ಳುತ್ತಿದ್ದಳು ಮುನ್ನಿನ ದಿನವೇ ಅವಳ ಗಂಡ ಉಮಾಪತಿ ಹತ್ತುಮೈಲು ದೂರದಲ್ಲಿರುವ ಪೇಟೆಗೆ ಹೋಗಿದ್ದನು. ಅವನು ಯಾವಾಗಲೂ ಪೇಟೆಗೆಂದು ತನ್ನ ಹಳ್ಳಿಯಿಂದ ಹೋದುದಾದರೆ—ಬೆಳಗಿನ ಹನ್ನೊಂದು ಘಂಟೆಗೇ ಉಂಡು, ಸಾಯಕಲ್ಲಿನ ಮೇಲೆ ಹೊರಟು, ರಾತ್ರಿ ಕಪ್ಪಾಗುವದರೊಳಗೇ ತಿರುಗಿ ಮನೆ ಸೇರುತ್ತಿದ್ದ. ಅದು ಒಂದೆರಡು ಸಾರಿಯದಲ್ಲ ರೂಢಿ. ನಾಲ್ಕು ವರ್ಷಗಳಿಂದಲೂ ಹಾಗೆಯೇ, ಮದುವೆಯಾಗಿ ಮನೆಮಾಡಿದಂದಿನಿಂದಲೂ ಹಾಗೆಯೇ.

' ತನ್ನವರು ಎಷ್ಟು ಸತ್ಯವಾದಿಗಳು. ನಿಷ್ಕಳಂಕ ವರ್ತನೆಯವರು. ತನ್ನ ಮೇಲೆ ಕರುಣೆ, ಪ್ರೇಮ ಅಬ್ಬಾ! ' ಎಂದು ಮನಸ್ಸಿನಲ್ಲಿ ಪ್ರಿಯನ ಸಾನ್ನಿಧ್ಯವನ್ನು ಕಲ್ಯಾಣಿ ಅನೇಕ ಸಾರೆ ಹೊಂದುತ್ತಿದ್ದಳು.

ಕೂಡಿಬಾಳತೊಡಗಿ ನಾಲ್ಕು ವರ್ಷವಾದರೂ, ಒಂದು ಮಗನ ತಂದೆ-ತಾಯಿಯಾದರೂ ಅವರದು ಇಂದು ಮದುವೆಯಾದ ಹೊಸ ದಂಪತಿಗಳ ಸವಿ ಜೀವನ. ಇಂದಿಗೂ ಅಂದಿನ ಒಲವೇ, ಒಯ್ಯಾರವೇ ಅಂದು ಕನಸಿನ ರಾಜ್ಯದಲ್ಲಿ ವಿಹರಿಸಿದಂತೆ ಇಂದೂ ವಿಹರಿಸುತ್ತಾರೆ ಇಬ್ಬರೂ.

ಒಂದು ದಿನ ಅವಳು ಕಾಲು ಮಡಿಚಿಕೊಂಡು ನೆಲದ ಮೇಲೆ ಬಗ್ಗಿ ಕುಳಿತು ಹಾಡನ್ನು ಬರೆದುಕೊಳ್ಳುತ್ತಿದ್ದಳು. ತೋಟದಿಂದ ಆದೇ ಆಗ ಬಂದ ಉಮಾಪತಿ ನೆಲದ ಮೇಲೆ ಕುಳಿತಿರುವದನ್ನು ಕಂಡನು. ಕೂಡಲೇ ಕುಳಿತುಕೊಳ್ಳಲು ಕಂಬಳಿಯನ್ನು ತಂದುಕೊಟ್ಟನು ಇಬ್ಬರೂ ಜೋಡಿಯಾಗಿ ಕುಳಿತುಕೊಂಡರು. ಅವಳು ಸಣ್ಣ ಮಧುರ ಧ್ವನಿಯಲ್ಲಿ ' ರಾಮಚಂದನೆ ಃ ನಮೀಸೂವೆನು....' ಎಂದು ತನ್ನ ಧ್ವನಿಲಯಕ್ಕೆ ತಕ್ಕಂತೆ ಹಾಡುತ್ತಿದ್ದಳು. ಉಮಾಪತಿ ಅವಳು ಹೇಳಿದ ಸೊಲ್ಲನ್ನೇ ವಿಕಾರಮಾಡಿ ಹೇಳಿದ. ' ಅಲ್ಲ, ನೇ....ಸೂ ಎಲ್ಲ ಏತಕ್ಕೆ? ಸಹಜ ಹೇಳಲು ಬರುವದಿಲ್ಲವೆ? ' ಎಂದು ಕೇಳಿ, " ತಿದ್ದಿ ಹೇಳಿದ." ಅವಳೂ ಸರಿಮಾಡಿ ಬರೆದುಕೊಂಡಳು. ಹೀಗೆ—ಅಷ್ಟು ಸಣ್ಣ ವಿಷಯದಲ್ಲೂ ಸಹ ಒಂದಾಗಿ ಸಾಗುತ್ತಿದ್ದರವರು. ಮುದ್ದುಮಗ ಚಿದಾನಂದನ ವಿಷಯವಾಗಿ ಅವರು ಒಮ್ಮೊಮ್ಮೆ ಹುಸಿ ಜಗಳವಾಡುತ್ತಿದ್ದರು.

" ಚಿದಾ ನಿಮ್ಮ ಹಾಗೆ ಅಲ್ಲವೆ? "

" ಅಲ್ಲ, ನಿನ್ನ ಹಾಗೇ. ಆ ಒಂಟು ಮೋರೆ, ಬಾಗಿದ ಹುಬ್ಬು, ಎಲ್ಲ ನಿನ್ನ ಹಾಗೆ. "

" ಇಲ್ಲ ಅಂದ್ರೆ. ಅವನು ನಿಮ್ಮ ಹಾಗೆಯೇ....ನನ್ನ ಪುಟಾಣೀ " ಎಂದು ಮುದ್ದುಕೊಟ್ಟಳು ಚಿದಾನಂದನಿಗೆ.

" ಏಕೆ? ನೀನು ಹಾಗೆಲ್ಲ ಹೇಳಿದರೆ ಅವನು ಕೇಳುತ್ತಾನೇನು? ಪುಟಾಣೀ, ನೀನು ಅಮ್ಮನ ಹಾಗೇ ಅಲ್ಲವೇನೋ? "

ಮೃದುವಾಗಿ ಮಗನ ಕೆನ್ನೆಯನ್ನು ತಟ್ಟುವ. ಮಗು ಕೆನ್ನೆ ಮುಟ್ಟಿದ ಕೂಡಲೇ ನಗೆಮಾಡುವದು. ಆಗ ಉಮಾಪತಿ, " ನೋಡಿದೆಯಾ?

ಹೌದಂತೇ! ಅವನು ನಿನ್ನ ಹಾಗೆಯೇ ಅಂತೆ; ಅವನೇ ಹೇಳುತ್ತಾನೆ. ” ಎಂದು ಗಟ್ಟಿಯಾಗಿ ಮುದ್ದಿಡುತ್ತಿದ್ದ ಮಗನಿಗೆ. ಮಗು ಅವನ ಒರಟು ಗಡ್ಡ ತಾಗಿ ತ್ರಾಸಾದಂತಾಗಿ ಅಳಲು ಸುರುಮಾಡುತ್ತಿತ್ತು.

“ ಅಯ್ಯೆ! ಮುದ್ದು ಹೆಚ್ಚಾಗಿ ಕಚ್ಚಿಬಿಟ್ಟಾಂದ್ರೆ? ” ಮೋಹಾ- ಮಮತೆಯ ನಿಧಿ ತಾಯಿ ಸುಮ್ಮನಿರಿಸುತ್ತಿದ್ದಳು. ಹೀಗೆಯೇ ಅದೆಷ್ಟೋ ಬಾರಿ ನಡೆಯುತ್ತಿತ್ತು.

“... ....ಆದರೆ— ಅವರೇಕೆ ಇನ್ನೂ ಬರಲಿಲ್ಲ?”

ಇದೇ ಯೋಚನೆ ಅವಳ ಎದೆಯಲ್ಲಿ ತುಮುಲ ವಿಪ್ಲವನ್ನೆಸಗುತ್ತಿತ್ತು. ಸುಟ್ಟ ಮನಸ್ಸು ಇಲ್ಲದ ಯೋಚನೆಯನ್ನು ತಂದಿಕ್ಕುತ್ತಿತ್ತು, ಬೇಡವೆಂದು ಒರೆಸಿ ಹಾಕಿದರೂ, ರಾತ್ರಿ ಹನ್ನೆರಡಾದರೂ ಬರಲಿಲ್ಲ. ಹೊರಬದಿಗೆ ಗಾಡಿ ಎತ್ತಿನ ಕೊರಳಗಂಟೆ “ ಟಣ್ ಟಣ್ ” ಎಂದರೂ ಅವಳಿಗೆ ತನ್ನ ಪತಿಯು ಸಾಯಕಲ್ಲೇ ಬಂತೆಂಬ ಗ್ರಹಿಕೆ. ಎದ್ದು ಬಾಗಿಲ ತೆಗೆದು ನೋಡಿದಳು. ಹೊರಗಿನ ಅಂಧಃಕಾರವನ್ನು ಶಪಿಸಿದಳು. ನಿರಾಶಳಾಗಿ ಬಾಗಿಲನ್ನು ತಳ್ಳಿ- ಕೊಂಡು ಬಂದು, ಒಂದು ಕೈಯನ್ನು ಮಗನ ಮೇಲಿಟ್ಟುಕೊಂಡು ಮಲಗಿ- ದಳು.

“ ಇಲ್ಲ. ಇನ್ನೂ ಬರಲಿಲ್ಲ. ಎರಡು ದಿನವಾಯಿತು, ಮೂರು ದಿನ ವಾಯಿತು. ಇನ್ನೂ ಬರಲಿಲ್ಲವಲ್ಲಾ? ಎಲ್ಲಿಯಾದರೂ ಹೋದರೆ? ಅಥವಾ.......! ಹಾಗೆಂದಿಗೂ ಸಾಧ್ಯವಿಲ್ಲ. ಹೆದರಿದ ಮನಸ್ಸು ಹುಚ್ಚು ನೆನೆಯುವದು. ನನ್ನ ಸ್ವಾಮಿ ಅಂಥವರೆ?........ಏನೋ ಕೆಲಸವಿರಬೇಕು. ಇಲ್ಲವಾದರೆ ಹಾಗೆಲ್ಲಾ ಪೇಟೆಯಲ್ಲಿರುತ್ತಿದ್ದಿಲ್ಲ. ಬಂದಾರು.......” ಎಂದು ಕಾತರಳಾಗಿದ್ದರೂ ಸುಮ್ಮನಿರುತ್ತಿದ್ದಳು.

ಮರುದಿನ ಅವಳ ತಂದೆ ಬಂದನು. ಮನೆಯಲ್ಲಿ ಗಂಡ-ಹೆಂಡತಿ ಇಬ್ಬರೇ ಆಗಿರುವದರಿಂದ ಕಲ್ಯಾಣಿಗೆ ತವರುಮನೆಗೆ ಹೆಚ್ಚುಸಾರೆ ಹೋಗಿ ಬರಲಿಕ್ಕಾಗು ತ್ತಿದ್ದಿಲ್ಲ ತಂದೆಯೇ ಮಗಳ ಮನೆಗೆ ಪದೇ ಪದೇ ಬಂದು ನೋಡಿ ಕೊಂಡು ಹೋಗಬೇಕಾಗುತ್ತಿತ್ತು.

ನೊಂದ ಮನಸ್ಸಿನ ಕಲ್ಯಾಣಿಗೆ ತಂದೆಯು ಬಂದ್ದರಿಂದ ಸ್ವಲ್ಪ ಸಮಾ- ಧಾನವಾಯಿತು. ಅವಳು, ಗಂಡ ಹೋಗಿ ನಾಲ್ಕೈದು ದಿವಸಗಳಾದುದನ್ನು

ತಂದೆಗೆ ತಿಳಿಸಿ, ಗಂಡ ಬರುವ ವರೆಗೆ ಅಲ್ಲಿಯೇ ಇರಲು ಕೇಳಿಕೊಂಡಳು. ತಂದೆ ಒಪ್ಪಿ ಉಳಿದನು. ಅಂದು ಉಂಡು ಕೈತೊಳೆಯಲು ಹಿತ್ತಲಿಗೆ ಹೋದಾಗ—

"ಕಲ್ಲು, ಆ ಗಿಡ ಕೀಳಲಿಕ್ಕಾಗಿದೆಯಲ್ಲಾ. ಅದಕ್ಕೆ ಸ್ವಲ್ಪ ಮಣ್ಣು ಹಾಕಿಸಿ ಬುಡ ಗಟ್ಟಿಮಾಡಬೇಕಿತ್ತು. ಇಲ್ಲವಾದರೆ ಗಿಡ ಕಿತ್ತು ಬೀಳು-ವದೇ. ಅಲ್ಲದೇ ಅದಕ್ಕೆ ಗಟ್ಟಿಮುಟ್ಟಿನ ಸವಕಿಬಳ್ಳಿ ಹಬ್ಬಿಕೊಂಡಿದೆಯಲ್ಲ"

—ತಂದೆ ನುಡಿದರು. ಆ ಗಿಡ ಹಿತ್ತಲ ಕಾಲುವೆ ಅಂಚಿನಲ್ಲಿತ್ತು. ಅದಕ್ಕೆ ಹತ್ತಿಕೊಂಡ ಬಳ್ಳಿ ಅದೇ ಗಟ್ಟಿಯಾಗಿ ಅಂಟಿಕೊಂಡಿತ್ತು. ಒಂದೆ-ರಡು ಹೂ-ಕಾಯಿಗಳನ್ನು ಬಿಟ್ಟಿತ್ತು. ಆದರೆ ಗಿಡ ಬುಡಕ್ಕೆ ಮಣ್ಣಿಲ್ಲದೆ ಬೀಳುವದರಲ್ಲಿತ್ತು.

ಮುಂದೆ ಒಂದೆರಡು ದಿನಗಳ ನಂತರ ಉಮಾಪತಿ ಮನೆಗೆ ಬಂದನು. ಒಂದು ಭಾರೀ ಕೆಲಸದ ಸಲುವಾಗಿ ಗೆಳೆಯನೋರ್ವನ ಸಂಗಡ ಬೆಳಗಾವಿಗೆ ಹೋಗಿದ್ದನಾಗಿ ಹೇಳಿದನು. ಆದರೆ ಮೊದಲಿನಷ್ಟು ಉತ್ಸಾಹಿತನಾಗಿರಲಿಲ್ಲ. 'ಪ್ರವಾಸದ ತ್ರಾಸಿರಬಹುದು' ಎಂದು ಮಾವ ತಿಳಿದು, ನಗುತ್ತ ಮನೆಗೆ ನಡೆದನು.

ಮೊದಲು ತಂದೆಯಂತೆಯೇ ಕಲ್ಯಾಣಿ ಅಂದುಕೊಂಡಳು. ಆದರೆ ಕಡೆಗೆ ಊಹಗೊಂಡಳು, 'ಏನೋ ಮನಸ್ಸಿಗೆ ಹಿಡಿದದ್ದು' ಎಂದು. ಅವಳು ಗಂಡನಿಗೆ ಕೇಳಿದಳು.

"ಯಾಕೆ—ಇತ್ತಲಾಗಿ ತಣ್ಣಗಿರುವಿರಲ್ಲಾ ?"

"....ನನಗೇನಾಗಿದೆಯೋ ? ಸರಿ ಇದ್ದೇನೆ. ಮೈಕೈ ಎಲ್ಲ ಚೆನ್ನಾ-ಗಿದೆ" ಮಾತು ಉಗುಳು ನುಂಗಿ ಬರುತ್ತಿತ್ತು. ಮತ್ತು ತಡಕಾಡುತ್ತಿತ್ತು.

"ಹೂಂ, ನನಗಷ್ಟು ತಿಳಿಯುವದಿಲ್ಲವೆ ? ಏಕೋ ಏನೋ ! ಕೇಳಿದರೂ ಹೇಳುವದಿಲ್ಲ. ನನ್ನದೇನಾದರೂ ತಪ್ಪಾಗಿದೆಯೋ ?"

"ಇಲ್ಲಿಲ್ಲ ನಿನ್ನದೆಂಥ ತಪ್ಪೆ ? ಪ್ರವಾಸದಲ್ಲಿ ಹೊತ್ತುಹೊತ್ತಿಗೆ ಆಹಾರ ನಿದ್ರೆ ಇಲ್ಲದ್ದರಿಂದ..........ಮತ್ತು....... .......ನಿನಗೆ ಹೇಳದೆ ಹೋದೆನಲ್ಲಾ...." ಮತ್ತೇನನ್ನೋ ಬಾಯಿ ಮುಂದುವರಿಸಲು ಹವಣಿಸಿದ್ದು, ಥಟ್ಟನೆ ನಿಂತಿತು. ಅಷ್ಟರಲ್ಲಿ ಒಳಗೆ ಚಿದಾ ಏನೋ ಗಡಿಬಿಡಿ ನಡೆಸಿದ್ದರಿಂದ

ಗಂಡನನ್ನು ಕೋರೆಗಣ್ಣಿನಿಂದ ನೋಡುತ್ತ ಒಳಗೆ ನಡೆದಳು. 'ಬಿಡುತ್ತೀ-ನೆಲ್ಲಿ? ರಾತ್ರಿ ಕೇಳುತ್ತೇನೆ ನನ್ನವನಲ್ಲಿ!' ಎನ್ನುವಂತಿತ್ತು ಮೋರೆಯ ಭಾವ, ಕಣ್ಣ ಸಂಜ್ಞೆ. ಅಂದವಳು ಗಂಡನನ್ನು ಸಮೀಪಿಸಿದಳು.

............... . ..... .. ....................!

ಏನೆಂದು ವಿಚಾರಿಸಿದಳು.

ವಿಷಯ ತಿಳಿದಳು.

ಹೃದಯ ಮಗನ ನೆನಸಿ 'ಅದು ಸುಳ್ಳೆ?' ಎಂದಿತು. ಹೀಗಾಗಿ ನಲುಮೆ ಹಾಲಾಹಲವ ಮಥಿಸಿ ಅಲ್ಲಿ ದಿವ್ಯಭಾವವನ್ನು ಸೃಜಿಸಿಟ್ಟಿತ್ತು!

* * * *

"ಏನು?"

"ಇವಳಿಗೆ...."

"ಆ್ಞಂ....ಆ್ಞಂ ಏನು? ಕುಳಿತುಕೊಳ್ಳಿ ...ಕುಳಿತುಕೊಳ್ಳಿ ಅಮ್ಮ. ನೀವೂ ಕುಳಿತುಕೊಳ್ಳಿ."

ಮುದುಕ ಮಾತ್ರ ಕುಳಿತುಕೊಂಡ.

"ಏನು ಹೇಳಿ?"

"ಇವಳೂ ನನ್ನ ಮಗಳು."

'ಆಗಲಿ. ಏನಾಗಿದೆ? ಅಮ್ಮಾ ಹಾಗೇಕೆ ಕುಳಿತಿರಿ? ಸಂಕೋಚ-ಪಡಬೇಡಿ. ಖುರ್ಚಿ ಎತ್ತರಾಯಿತೇ? ಸರಿಯಾಗಿ ಕುಳಿತುಕೊಳ್ಳಿ."

"ಇಲ್ಲ ...ಸರಿಯಾಗಿ ಕುಳಿತುಕೊಳ್ಳಲಾಗುವದಿಲ್ಲ." ಅವಳ ದನಿ ಅತಿ ವೇದನೆಯದಾಗಿತ್ತು. ಹೆದರಿಕೆ ಸಂಕೋಚದಿಂದ ಉಸುರು ಸಣ್ಣದಾಗಿ ಹೊರಡುತ್ತಿತ್ತು.

ಈಗ ಡಾಕ್ಟರರಿಗೆ ತಿಳಿಯಿತು. ಅವರು ಅವಳನ್ನು ಸರಿಯಾಗಿ ನೋಡಿದರು. ಕುತ್ತಿಗೆಯಿಂದ ಕೆಳಗೆಲ್ಲ ಹುಣ್ಣು ಸೋರಿ ಸೀರೆ ಅಂಟಿಕೊಂಡಿದೆ. ಅವಳು ಅಂಟಿದ ಸೀರೆಯನ್ನು ಕುಳಿತುಕೊಳ್ಳುವಾಗ, ಏಳುವಾಗ ಬಿಡಿಸಿಕೊಳ್ಳಲಾರದೆ ಅಷ್ಟು ತ್ರಾಸುಪಡುತ್ತಿದ್ದಳು! ಅವಳ ಮೋರೆಯ ಪ್ರತಿ ಒಂದು ನರನಾಡಿಗಳೂ ವೇದನೆಗೆ ಶ್ರುತಿಗೊಟ್ಟು 'ಉಯಿಃ!' ಎಂದು ತಮ್ಮ ಮೂಕ ಅಂತಸ್ತಾಪವನ್ನು ಕಣ್ಣುಗಳಿಂದ ಪ್ರವಾಹವಾಗಿ ಹರಿಯಿಸುತ್ತಿದ್ದವು.

ಅವಳು ಎದೆಯ ಮೇಲೆ ಅಂಟಿಕೊಂಡಿದ್ದ ಸೆರಗಿನ ಬದಿಯನ್ನು ಜಾರಿ ಹೋಗಿದೆಯೆಂದು ಸರಿಸಿಕೊಂಡಳು. ಆಗ ಅವಳ ಕೈ ಕೊಳೆತಿದೆಯೋ ಎನ್ನುವಂತಿತ್ತು. ಎದೆಗೆ ಅಂಟಿಕೊಂಡಿದ್ದ ಸೆರಗನ್ನು ಬಿಡಿಸಿದಳು. ಪಿಚಕ್ಕನೆ ಎದೆಯ ತೊಟ್ಟಿನಿಂದ ರಸಿಗೆ ಹಾರಿತು.

"ಅಯ್ಯೋ! ಅಪ್ಪಾ!" ಕಿರಚಿದಳು.

ಕಣ್ಣು ಕತ್ತಲೆಗಟ್ಟಿತ್ತು. ಅಲ್ಲೇ ಖುರ್ಚಿಯ ಹಿಂಬದಿಗೆ ಬಾಗಿತು, ಅವಳ ಬವಣೆಗೊಂಡ ದೇಹ.

ಡಾಕ್ಟರರು ಅವಳನ್ನು ಸ್ಪೆಶಲ್ ಕೋಣೆಗೆ ಸೇರಿಸಿದರು. ಅವರೂ ಮುದುಕರು. ನಿವೃತ್ತರಾದವರು, ಆದರೂ ಯೋಗ್ಯರಾಗಿ ಸುದೃಢರಾಗಿದ್ದುದರಿಂದ ಮತ್ತೂ ಕೆಲಸದಲ್ಲೇ ಇದ್ದರು. ಅವರ ಹೃದಯ ಕರಗಿತು. ಇಳಿತರದ ವಯಸ್ಸಿನ ಅವರು, ತಮ್ಮ ಕರುಳಿಗಾಗಿ ಹಾತೊರೆದು ಗಡಬಡಿಸುವಂತೆ ನರ್ಸ್‌ನ್ನು, ಕಂಪೌಂಡರನನ್ನು, ಆಳನ್ನು ಕೂಗಿದರು. ಎಲ್ಲರೂ ಓಡಿ ಬಂದರು. ಸ್ಟೋವ್ ಹೊತ್ತಿತು. ಸೂಜಿ ಮದ್ದಿನೊಂದಿಗೆ ಅವಳ ದೇಹದಲ್ಲಿ ಸೇರಿತು.

*          *          *          *

ನರ್ಸ್ ಭಾರತಿ ಹುಣ್ಣುಗಳನ್ನು ತೊಳೆಯುತ್ತಿದ್ದಳು. ಮೈತುಂಬ ಎಲ್ಲ ಕಡೆಗೂ ಕೊಳೆಯುವಂತಿತ್ತು. ಎದೆಯನ್ನು ತೊಳೆಯುತ್ತಿರುವಾಗ ಭಾರತಿ ಅನುಕಂಪನೆಯಿಂದ ಕೇಳಿದಳು.

"ಎಲ್ಲಿ ಆಯಿತವ್ವ ನಿನಗೆ?"

ಪ್ರಾಣವಿದೆಯೋ ಇಲ್ಲವೋ ಎನ್ನುವಂತೆ "....ಹಳ್ಳಿ"

"ನಿನಗೆ ಮನೆಯವರಿಲ್ಲವೇ?"

"ಇದ್ದಾರೆ....ಆದರೆ ಅವರು ಮನೆಯಿಂದ ಹೋಗಿ ಬಹಳ ದಿನಗಳಾಗುತ್ತ ಬಂದವು. ಅವರಿಗೂ ಇದೇ ರೋಗ. ಅವರು....ಇಲ್ಲಿಗೂ ಬಂದಿದ್ದರಂತೆ."

"ಓಹೋ! ತಿಳಿಯಿತು. ಡಾಕ್ಟರಸಾಹೇಬರಿಂದ ಚೀಟಿ ತೆಗೆದುಕೊಂಡು ಮಿರಜಿಗೆ 'ಆಪ್ರೇಶನ್' ಮಾಡಿಸಿಕೊಳ್ಳಲು ಹೋಗಿದ್ದಾರೆ. ಅವರು,......."

" ಆಪ್ರೇಶನ್ನು... ? " ಬಿಕ್ಕತೊಡಗಿದಳು.

" ಅಳಬೇಡವಮ್ಮಾ, ಆಯಾಸವಾದೀತು. "

" ಹೇಗೆ ಅಳದಿರಲಿ ಅಕ್ಕಾ ? " ಎಂದು ಎಲ್ಲವನ್ನೂ ಹೇಳಿದಳು.

" ಅವರು ಅಂದು ಮೂರುನಾಲ್ಕು ದಿನಗಳಾದರೂ ಮನೆಗೆ ಬರಲಿಲ್ಲ. ಆಮೇಲೆ ಬಂದಾಗ....ಆ ರಾತ್ರಿ ಅವರನ್ನು ನಾನು ಗಟ್ಟಿಯಾಗಿ ಹಿಡ-ಕೊಂಡೆನು — ಆ ಮೇಲೆ....ಆಮೇಲೆ ಅಂದು ರಾತ್ರಿ ಎಂದಿನಂತೆ....ಅವರ ಕಾಲು ಒತ್ತುತ್ತ ಕುಳಿತೆನು. ಅವರು ಮೈಯೆಲ್ಲ ನೋವು ಎಂದರು. ಅವರು ' ಹೋಗಿ ಮಲಗಿಕೋ ' ಎಂದರೂ ನಾನು ಅವರಿಂದ....ಬಯಸಿದೆನು—ಆಗ ಅವರೆಲ್ಲವನ್ನೂ ಹೇಳಿದರು ! ನಂತರ....ನಂತರ ! ಹುಚ್ಚು ಮನಸ್ಸು ಕೇಳಲಿಲ್ಲ ಅಂಟಿಸಿಕೊಂಡೆ...... ಅಯ್ಯೋ ಅಕ್ಕಾ ! ವಸ್ತ್ರ ಅಂಟಿಕೊಂಡಿತು. ಬಿಡಿಸೇ....ಬಿಡಿಸೇ ! ಅಯ್ಯೋ ! ಸತ್ತೇ ... ಸತ್ತೇ ! "

* * * *

ದಿವಸಕ್ಕೆ ಬೇಸರವೇ ಇಲ್ಲ. ಮೂವತ್ತು ಸಾರೆ ಕಳೆಯಿತು. ಬಾಡಿ ಸುಕ್ಕುಗಟ್ಟಿದ, ಏನು ಮಾಡಬೇಕೆಂದು ತಿಳಿಯದ, ಬಾಳಿನ ಬಡಿತಗಳನ್ನು ಒಂದೊಂದಾಗಿ ತಿಂದು ಕರಗಿದ ಆ ಮುದುಕ ತಂದೆ ಮಗಳ ಮೋರೆಗೆ ಕಿವಿಗೊಟ್ಟು ಆಲಿಸುತ್ತಿದ್ದ. ಕಣ್ಣೀರಿಗೆ ' ಯಾರಿದ್ದಾರೆ, ಯಾರಿಲ್ಲ. ' ಎನ್ನುವ ಭಯ-ಸಂಕೋಚವಿಲ್ಲ. ಹೃದಯಕ್ಕೆ ಸಂಕೋಚವೇಕೆ ? ಅದು ತನ್ನ ಕೆಲಸ ನಡೆಯಿಸುತ್ತಲೇ ಇತ್ತು.

" ಅಪ್ಪಾ ಅವರು....? "

" ಹ್ಞಾಂ, ಮಗಳೇ....ಇದೇ ಈಗ ತಾರು ಕೊಟ್ಟಾಗಿದೆ. ಹಣವನ್ನು ಸಹ ತಾರು-ಮನಿಆರ್ಡರ ಮಾಡಲಾಗಿದೆ. ಇನ್ನೊಂದು ತಾಸಿನಲ್ಲಿ ಬರ ಬಹುದು.

ತಂತಿ ಡಾಕ್ಟರರಿಗೆ ಬಂದಿತು. ಅವರು ಬದಿಯಲ್ಲಿ ಹೋಗಿ ಓದಿ ಕೊಂಡು ಬಂದರು. ಮೋರೆ ಹುಳ್ಳಗಾಗಿತ್ತು. ಆದರೂ ತಮ್ಮ ರೀತಿಯಂತೆ ' ಸ್ವಲ್ಪ ಹೊತ್ತಿನಲ್ಲೇ ಬರುವರಂತೆ ' ಎಂದರು.

" ಅಪ್ಪಾಜಿ....ಅವರು....ಬಂದರೆ ? "

" ಹ್ಞಾ, ಬರುತ್ತಾನೆ ಮಗಳೇ. "

ಹೀಗೇ ಬರೇ ಉಸಿರಿನ ಬಲದಿಂದ ಅನೇಕ ಸಾರೆ ಕೇಳಿದಳು ತಂದೆಯ ಉತ್ತರವನ್ನೂ ಹಲವು ಸಾರೆ ಪಡೆಯುತ್ತಿದ್ದಳು.

" ಮಗು....ನಿನ್ನ ಮಗ, ಚಿದಾನಂದ "

ರಕ್ತವೆಲ್ಲ ರಶಿಗೆಯಾಗಿ ಸೋರಿಹೋದ ಕೈ ಏಳಲು ಯತ್ನಿಸಿತು. ಏಳಲಿಲ್ಲ ! ಅರ್ಧಮರ್ಧ ಕರಗಿದರೂ ತೇಜಸ್ಸಿನಿಂದ, ಮಾತೃಪ್ರೇಮದಿಂದ ಕೂಡಿದ ಕಣ್ಣು ಕೈಯ ಕೆಲಸಮಾಡಿತು

" ಚಿ .. ದಾ೩..."

ಕಣ್ಣಂಚಿನಿಂದ ನೀರು ! ಅದು ನೀರಲ್ಲ. ಮಾತೃಪ್ರೇಮದ-ಪತಿಪ್ರೇಮದ ಪರಿಶುದ್ಧ ಹೃದಯದ ಸವಿಸೊಲ್ಲು !

" ಅಪ್ಪಾ ಅವರೇಕೆ ಬರಲಿಲ್ಲ ? "

ಶ್ವಾಸ ಹುದುಗಿ ಬರುತ್ತಿತ್ತು. ಮತ್ತೊಂದು ಬಾರಿ ಕಿರ್ರನೆ ಕೂಗಿದಳು.

" ಅವರೇಕೆ ಇನ್ನೂ ಬರಲಿಲ್ಲ ? ? "

ಚಿರ್‌ನೆ ಹಾರಿತು. ರಶಿಗೆ-ರಕ್ತ, ಅವಳ ಅಂಗಾಂಗಗಳಿಂದ, ಅವಳ ಜೀವ ಅವರ ಪಾದಕ್ಕೆ ತಲುಪಿತು. ಆಸ್ಪತ್ರೆಯ ಗೋಡೆಗಳೆಲ್ಲ ' ಅವರೇಕೆ ಇನ್ನೂ ಬರಲಿಲ್ಲ ? ' ಎಂದು ತಿರುಗಿ ಕೇಳಿದವು.

ಮೈಗೆಲ್ಲ ಚೌಷಧಿ ಬಡಿದು, ಹೆಚ್ಚು ಬೆಲೆಬಾಳುವ ಅವಳ ಪ್ರೀತಿಯ ' ನಿಸ್ತಾಂಬಲ ' ಸೀರೆಯನ್ನು ಉಡಿಸಿ, ಮೋರೆಗೆ ಲಕ್ಷಣವಾಗಿ ಕುಂಕುಮ ಬಡಿದು, ' ಆಟ್ಟಲಿ ನ ಮೇಲೆ ಒಯ್ಯುವಾಗ ಆಸ್ಪತ್ರೆ ಜನರೆಲ್ಲ " ಸಾಯು ವಾಗಲೂ ಅವರೇಕೆ ಇನ್ನೂ ಬರಲಿಲ್ಲ ? ಎಂದುಕೊಂಡಳು. ಎಂತಹ ಪತಿ-ಭಕ್ತಿ ! " ಎಂದರು. ಮತ್ತೊಬ್ಬರು,

" ಬಿಡಿರೀ, ಎಂಥಾ ಕೆಟ್ಟಮನುಷ್ಯ ಆತ. ರೋಗ ಹಿಡಿಸಿಕೊಂಡು ಬಂದು ಹೆಂಡತಿಯನ್ನು ಹಾಳು ಮಾಡಿದ ನೀಚ. ಅವನ ಸುದ್ದಿ ಏಕೆ ? " ತೀಕ್ಷ್ಣವಾಗಿ ನುಡಿದರು.

" ಇಲ್ಲರೀ, ಹಾಗೆನ್ನಬೇಡಿ. ಅವನೆಂಥವನೇ ಇರಲಿ, ನಮಗೇನು ? ಅವಳಿಗೆ— ಅವನಲ್ಲಿ ತಪ್ಪಿಲ್ಲವಂತೆ ! ಇದರ ಕಾರಣ ಅವಳಿಗೇ ತಿಳಿದಿರಬಹುದು.

ಅವನನ್ನು ಬೈದು ಈ ಮಹಾರಾಯತಿಗೆ ಬೇಸರಪಡಿಸುವದೇತಕ್ಕೆ ? " ಎಂದು ಭಾರತಿ ನುಡಿದಳು.

ಎಲ್ಲರೂ ಹೌದೆನ್ನಬೇಕಾಯಿತು

ಆಗಲಾದರೂ ಕಲ್ಯಾಣಿಯ ಮೋರೆಯ ಮೇಲೆ, ' ನೀವೆಲ್ಲಿದ್ದರೂ— ಯಾವ ಸ್ಥಿತಿಯಲ್ಲಿದ್ದರೂ ನನ್ನವರೇ ! ' ಎಂಬ ಚಿನ್ಹೆಗಳು ಹೆಮ್ಮೆಯಿಂದ ಸ್ಥಿರವಾಗಿದ್ದವು.

ಮರುದಿನ ಆ ಹಳ್ಳಿಯ ಯಾರೂ ಇಲ್ಲದ ಆ ಮನೆಗೆ ತಂತಿಯೊಂದು ತಲುಪಿತು. ಟಂಚೆಯಾಳೇ ಹಳ್ಳಿಯಲ್ಲಿ ತಾರಿನ ಅರ್ಥವನ್ನು ಓದಿಹೇಳಬೇಕಾದ್ದರಿಂದ ಓದಿದ್ದನು. ಆವನು ಭಾರವಾದ ಹೃದಯದಿಂದ ಉಮಾಪತಿಯ ಮರಣದ ಸಂದೇಶದ ರಾಯ-ಭಾರಿಯಾಗಿ ತಂತಿಯನ್ನು ಹೊತ್ತು ತಂದಿದ್ದನು.

ಆದರೆ, ಅದಕ್ಕೂ ಮೊದಲೇ ಆವಳಿಗೆ ವಿಶೇಷ ತಂತಿ ತಲುಪಿ, ' ಅವರೇಕೆ ಇನ್ನೂ ಬರಲಿಲ್ಲವೆಂದು ತಾನೇಕೆ ಹಲುಬಿದೆ ? ' ಎಂದುಕೊಂಡಿರಬಹುದು !

# ಹಳ್ಳಿಯ ಹೊನ್ನು

## ೧

ಕೊಟ್ಟಿಕಟ್ಟುವ ಕಾರ್ಯವಾದುದರಿಂದ ಅನೇಕ ಕೆಲಸಗಳು ಮಾಡುವದಿದ್ದವು.

ಸಣ್ಣಪ್ಪ ತನ್ನ ಕೆಲಸವನ್ನು ಸಾಧ್ಯವಾದ ಮಟ್ಟಿಗೆ ತಾನೇ ಮಾಡಿಕೊಳ್ಳುತ್ತಿದ್ದನು. ಕೊಟ್ಟಿಹಾಳೆಯನ್ನು ಮುಂಗೈಗೆ ಅಡ್ಡ ಕೊಟ್ಟು ಬಗ್ಗಿಸಿ, ವಿದುಮಾಡಿ, ಅಳತೆಗೆ ಸರಿಯಾಗಿ 'ಪರ್‌ಪರ್'ನೆ ಕೊಯಿದುಕೊಂಡು, ಜೋಡಣೆಗೆ ಬೇಕಾದಲ್ಲಿ ಕಡ್ಡಿಯನ್ನು ಚುಚ್ಚಿ, ಚಿಟ್‌ಚಿಟ್‌ನೆ ಕಡ್ಡಿ ಮುರಿಯುತ್ತಿರುವಾಗ ಸಣ್ಣಪ್ಪನ ಚಿಂತೆ ತುದಿ ಬುಡವಿಲ್ಲದೆ ಸಾಗಿತ್ತು. ಚಿಂತೆಯ ಎಳೆತ ಅವನನ್ನು ಎಲ್ಲೆಲ್ಲಿಗೋ ಒಯ್ದುದರಿಂದ ಹರಿತದ ಕತ್ತಿ ಕೈಬೆಟ್ಟಿಗೆ ಇಳಿಯಿತು. 'ಹಾಯ್' ಎಂಬ ಬೆದರು ಕೂಗು ಚಿಂತೆಯ ಸಮಾಧಿಯನ್ನಿಳಿಸಿತು. ರಕ್ತ ಕಣ್ಣಿಗೆ ಮಿಂಚಿ ಎಚ್ಚರಗೊಳಿಸಿತು

ಇಷ್ಟು ವರುಷಗಳ ವರೆಗೆ ಸಣ್ಣಪ್ಪನಿಗೆ ಅದೆಷ್ಟು ಬಡತನದ ಬೇಗುದಿ ಅಡಗಿದ್ದರೂ ಚಿಂತೆಯು ಬೆಂತರ ಅವನನ್ನು ದುಃಖಕ್ಕೀಡು ಮಾಡಿರಲಿಲ್ಲ. ಆದರೆ

ಈ ಸಾರಿ—ಬಡತನದಿಂದ ಬವಣೆಗೊಂಡು, ಅನಿವಾರ್ಯವಾದಾಗ ಸಾಲ ತಂದು, ತೀರಿಸಲಾಗದ ಈ ಸಮಯದಲ್ಲೀಗ 'ಸಾಲ ಶೂಲ' ಎಂಬ ಗಾದೆ ಗನುಸರಿಸಿ ಚಿಂತೆ ಅವನನ್ನೇರಿಯಿತು. ಇಂದು ಘಾಸಿಗೊಳಿಸಿ ಅವನನ್ನು ಸಂಕಟದಲ್ಲಿ ಕೆಡವಿತು.

*　　*　　*　　*

೨

ಮಾದಪ್ಪ ಹೆಗಡೆಯವರ ಮನೆತನಕ್ಕೂ ಸಣ್ಣಪ್ಪನ ಮನೆತನಕ್ಕೂ ಮೂರು ನಾಲ್ಕು ತಲಗಳಿಯ ಹಿಂದಿನ ಯಾವುದೋ ಸಂಬಂಧವಂತೆ.

"ಸಂಬಂಧವಲ್ಲ—ಗಿಂಬಂಧವಲ್ಲ. ಕೆಲಸಕ್ಕಾಗುವದೆಂದು ಹೊಸ ದಾಗಿ ತಂದುಕೊಂಡ ಸಂಬಂಧ!" ಎಂದು ಊಹಿಸಿ ಹೇಳುತ್ತಿದ್ದರು ಇತ್ತ ಲಾಗಿನ ತರುಣರು.

ಆದರೆ ಮಾದಪ್ಪ ಹೆಗಡೆಯವರ ಹೆಂಡತಿ ಹೆಗ್ಗಡತಿ ಒಳಗೆ ಕಾಲು ನೀಡಿ ಕುಳಿತುಕೊಂಡು "ಏನು ಕಾಲು ಜಗಿಯುವದಪ್ಪಾ." ಎಂದು ನೆರೆದ ಹೆಂಗಸ ರಲ್ಲಿ ಮಾತಿಗೆ ಮೊದಲು ಮಾಡಿದಾಗ—

"ಅದೋ? ಗಂಡ-ಗಂಡಸರ ವಿಷಯವೇನು ನನಗೆ ತಿಳಿಯದು. ನಾವು ಹೇಳುವದಾದರೆ—ಅವರಿಗೆ ಬಡತನವಾಗಿದ್ದಕ್ಕೆ ನಮ್ಮಲ್ಲಿಂದ ಕಡ-ಗಿಡ ಒಯ್ಯು ತ್ತಾರೆ. ಹಾಗೇ ನಮ್ಮ ಕೈನೆರವಿಗೂ ಆಗುತ್ತಾರೆ ಮೊನ್ನೆ ಮೇಲಿನ ಮನೆ ಶಂಕರಜ್ಜ ಸತ್ತಾಗ ನಮಗೆಲ್ಲ ಸೂತಕವಾಗಿತ್ತು. ಆಗ ಸಣ್ಣಪ್ಪನ ಮಗ ಗಣೇಶ ಮೂರು ದಿನ ದೇವರಪೂಜೆ ಮಾಡಲು ಬಂದಿದ್ದ. ಹೀಗೆ........" ಎಂದು ರಾಗ ಎಳೆದು ಹೇಳುತ್ತಿದ್ದಳು. ಅಂತೂ ಪ್ರತಿ ಹಬ್ಬ-ಹುಣ್ಣಿವೆ, ಹೆಚ್ಚಿನ ಕಾರ್ಯದ ಸಮಯದಲ್ಲಿ ಸಣ್ಣಪ್ಪ ಹೆಗಡೆಯವರ ಹೇಳಿಕೆ ನೆಲಕ್ಕೆ ಬೀಳದಂತೆ ಅವರ ಮನೆಯಲ್ಲಿ ಕೆಲಸ ಮಾಡುತ್ತಿರುತ್ತಿದ್ದ.

ಅವನ ಹೆಂಡತಿ ಒಳಬದಿಗೆ ಹೆಗ್ಗಡತಿಯ ಕೈನೆರವಿಗೆ ಆಗುತ್ತಿದ್ದಳು. ಮಗ ಹೆಂಗಸರ-ಗಂಡಸರ ಸಣ್ಣ ಸಣ್ಣ ಬಿಟ್ಟಿ ಕೆಲಸಮಾಡಿಕೊಡುತ್ತಿದ್ದ.

"ಓ ಗಣೇಶಾ, ಹಿತ್ತಲಿಗೆ ಹೋಗಿ ನಾಲ್ಕು ಹಲಸಿನ ಎಲೆ ತೆಗೆದು ಕೊಂಡು ಬಾ" ಎಂದು ಪುರೋಹಿತರೂ ಅಧಿಕಾರವಾಣಿಯಿಂದ ನುಡಿಯುತ್ತಿದ್ದರು.

"ಗಣೇಶಾ ಗನಾಣ ಮಾಣಿ ಹೇಳುವ, ಒಂದು ಕೆಲಸಮಾಡುತ್ತೀಯಾ?" ಎಂದು ಮೃದುವಾಗಿ ಹೇಳುವ ಹೇಳಿಕೆ ಹೆಂಗಸರದ್ದಿರುತ್ತಿತ್ತು.

"ಏನು ಹೇಳು ಮಾಡುತ್ತೇನೆ." ನಮ್ರತೆಯನ್ನು ಪ್ರದರ್ಶಿಸುವ ಗಣೇಶ.

"ನಮ್ಮ ಮಾಧು ಕಾಲುವೆ ಅಂಚಿಗೆ ಹೋಗಿದ್ದಾಳೆ. ಬಿದ್ದುಹೋಗ ಬಹುದು! ಸ್ವಲ್ಪ ಇಲ್ಲಿ ತಂದುಬಿಡುತ್ತೀಯಾ? ನನ್ನ ಕೈಗೆಲ್ಲ ಹಿಟ್ಟು ಬಡಿದಿದೆ. 'ಮತ್ತೆ ಯಾರು ಏಳುತ್ತಾರೆ' ಎಂದು ನನಗೆ"

ಗಣೇಶ ಹಿತ್ತಲಿನ ಕಾಲುವೆಗೆ ಅಂಬೆಹರಿದು ಹೋಗಿ ಬೀಳಲಾದ ಮಾಧುವೆಂಬ ಬಾಲನನ್ನು ತಂದುಕೊಡುವ. ಹೀಗೆ ಅವರು ಮೂವರೂ ಮನೆಯವರಿಗೆ ಪ್ರೀತಿಯವರಾಗಿದ್ದರು. ಒಮ್ಮೊಮ್ಮೆ ಕರೆಯಿಸಿಕೊಂಡು ಬರುತ್ತಿದ್ದರು, ಒಮ್ಮೊಮ್ಮೆ ಕರೆಯಿಸಿಕೊಳ್ಳದೇ ಆದರೂ ಬರುತ್ತಿದ್ದರು. ಹೇಗೂ ಇರಲಿ, ಅವರ ಬರವು ಮಾದಪ್ಪ ಹೆಗಡೆಯವರಿಗೆ ಸಂತೋಷವೇ.

೩

ಜಿರ್ರೋನೆ ಮಳೆ ಸುರಿಯುತ್ತಿತ್ತು.

ಸಣ್ಣಪ್ಪನು ಅಂದು ಬೆಳಗಿನಲ್ಲಿ ಅಷ್ಟು ಮಳೆಯಾಗಿದ್ದರೂ ತನ್ನ ಎಮ್ಮೆಯನ್ನು ತನ್ನ ಬೇಣಕ್ಕೇ ಹೊಡೆದು ಬಂದಿದ್ದ. ಸುಮಾರು ಮಧ್ಯಾಹ್ನದ ಹೊತ್ತಿಗೆ ಆಚೆಮನೆಯವನೊಬ್ಬನು ತಮ್ಮ ತೋಟಕ್ಕೆ ಸಣ್ಣಪ್ಪನ ಎಮ್ಮೆ ನಾಲ್ಕೈದು ಬಾಳೆಯ ಸಸಿಗಳನ್ನೂ, ಯಾಲಕ್ಕಿಯ ಹಿಂಡನ್ನೂ ಹಾಳು ಮಾಡಿತು ಎಂದು ಹೇಳಿದನು.

"ನನ್ನ ಎಮ್ಮೆ ಅಲ್ಲಿ ಬಂದಿತ್ತೇನೊ?"

ನಾನು ಇದೇ ಈಗ ಆಚೆಗೆ ಹೊಡೆದು ಬಂದೆ! ನಿನಗೆ ತಿಳಿಸಿಬಿಡುವ ಎಂದು ಬಂದೆ. ಇನ್ನೂ ಹೀಗೇ ಆದರೆ....ಹಟ್ಟಿಗೆ ಹೊಡೆಯಬೇಕಾಗುವದು!"

"ಹಾಗೊಂದು ಮಾಡಬೇಡಿ ಮಹಾರಾಯ್ರಾ"

" ಸಣ್ಣಪ್ಪ ದೈನಾಸಪಟ್ಟು ಬೇಡಿಕೊಳ್ಳುವ. ಅವನಿಗೆ ಬೇಕಾದಲ್ಲಿದ್ದ ತನ್ನ ಎಮ್ಮೆ ಅಲ್ಲಿ ಬಂದಿರಲಿಕ್ಕಿಲ್ಲ ಎಂಬ ಕುಶಾಗ್ರಬುದ್ಧಿ ಇಲ್ಲ.

'....ಮತ್ತೆ....ಬಂದಿತ್ತೋ ಏನೊ!' ಎಂದೇ ಅವನ ಗ್ರಹಿಕೆ. ಅಷ್ಟು ಸರಳ ಸ್ವಭಾವದ ಮನುಷ್ಯನೆಂದು ತಿಳಿದೇ ಅವನ ನೆರೆಹೊರೆಯವರು ಅವನಿಗೆ ಪದೇ ಪದೇ ಗೇಲಿ ಮಾಡುತ್ತಿದ್ದರು; ತೊಂದರೆ ಕೊಡಲು ಯತ್ನಿಸುತ್ತಿದ್ದರು.

ನೆರೆಮನೆಯವರಿಗೆ ಅವನ ಮೇಲೆ ಸ್ವಲ್ಪ 'ಅಷ್ಟಕಷ್ಟೇ'! ಏಕೆಂದರೆ ಅವರ ತೋಟಕ್ಕೆ ತಾಗಿ ಇವನದೂ ನಾಲ್ಕಾರು ಬಣ್ಣ ತೋಟವಿದ್ದಿತು. ಅದ ಷ್ಟನ್ನು ತಮ್ಮ ಬಲೆಗೆ ಎಳೆದುಕೊಂಡರೆ 'ಒಂದೇ ರಖಂ' ಆಗುತ್ತದೆ ಎಂಬ 'ಹೆದ್ದಾಸೆ.'

ಸಣ್ಣಪ್ಪ ತನಗೆ ಬೇಕಾದ ಅಡಚಣೆಗೆಲ್ಲ ಮಾದಪ್ಪ ಹೆಗಡೆಯವರನ್ನೇ ಅಂಟಿಕೊಂಡಿರುವನಲ್ಲಾ ಎಂಬ ಕಟು ಅಸೂಯೆ. ದ್ವೇಷ ಅವರಿಗೆ.

" ಒಂದು ಮೈಲು ದೂರವಾದರೂ ಅಲ್ಲಿಗೇ ಹೋಗಿ ಸಾಯುವ. ನೆರೆ ಮನೆಗೆ ಬರುವನೊ?" ಎಂದು ಭಾವವನ್ನು ಉಗುಳಿ ಬಿಡುತ್ತಿದ್ದರು. ಒಮ್ಮೊಮ್ಮೆ ಸಣ್ಣಪ್ಪನಿಗೆ ಕೇಳುವ ಹಾಗೇ "ಎಡಗಿ ಬಿದ್ದರೆ.........ಮೂರೇ ಮಾರು ನಮ್ಮ ಮನೆ!" ಎಂದು ಹೇಳಿಯೂ ಹೇಳುತ್ತಿದ್ದರು.

ಆದರೆ ಸಣ್ಣಪ್ಪ ತನ್ನ ನಂಬಿಗೆಗೆ ಚ್ಯುತಿ ತಂದುಕೊಂಡು 'ಹಗಲು-ಹದಿನೆಂಟು' ಎಂದು ಹೇಳಿಸಿಕೊಳ್ಳಲಿಲ್ಲ.

೪

ಕೈಗಡ, ಚಿಕ್ಕಸಾಲ ಹೀಗೆಲ್ಲ ಹನಿಹನಿಯಾಗಿ ಕೂಡಿ ಹಳ್ಳವಾಗಿ ಸಣ್ಣಪ್ಪನ ಸಾಲ ನಾಲ್ಕೈದುನೂರಕ್ಕೆ ಏರಿತ್ತು. ಅಲ್ಲದೇ ಆ ಸಾರೆಯ ಕಟ್ಟೆ, ಕೊಯಿಲು ಮುಗಿಸಲು ಮತ್ತೆ ನೂರಾರು ರೂಪಾಯಿಗಳು ಅವನಿಗೆ ಬೇಕಾಗಿದ್ದವು. ಮುನ್ನಿನ ವರುಷ ಅಡಿಕೆಗೆ ಕೊಳೆ ಬಂದದ್ದರಿಂದ ಹುಟ್ಟುವಳಿ ಅರ್ಧದಷ್ಟು ಆಗಿರಲಿಲ್ಲ. ಆದರಿಂದ ಅಷ್ಟು ಸಾಲ ಏರಿತ್ತು. ಅದಕ್ಕೆ ಮಗನ ಉಪನಯನದ ಖರ್ಚು ಸೇರಿಸಿಕೊಂಡಿತ್ತು.

'ವಿಶ್ವಾಸವೆಂದು ಎಷ್ಟು ಹಣ ಕೊಟ್ಟಾರು ಯಾರಾದರೂ?' ಎಂಬುದು ಹೆಗಡೆಯವರ ತಿಳುವಳಿಕೆ.

"ಗಣೇಶಾ, ರಖಂ ಸಣ್ಣದಾಯಿತೆ? ನೀನೇ ನೋಡು" ಎಂದು ಹೆಗಡೆಯವರು ಹೇಳಿದರು. ಮೂಕನಾಗಿ ಕುಳಿತ ಸಣ್ಣಪ್ಪ. ಅವನಿಗೆ ಅರ್ಧ ತಾಸು ಉಪದೇಶ ಮಾಡಿದರು.

"....ನಿನ್ನದೇನು ಓಡಿಹೋಗುವದೋ? ಅಥವಾ ನಾವು ಕಸಕೊಳ್ಳುವದು ಬಿದ್ದಿದೆಯೋ?" ಎಂದೂ ಸಂತಯಿಸಿದರು. ಭದ್ರತೆಗೆಂದು ಬರಸಿಕೊಂಡೂ ಆಯಿತು. ಆವನೂ ಮಾದಪ್ಪ ಹೆಗಡೆಯವರನ್ನು ನಂಬಿ ಇರತೊಡಗಿದ.

ಈ ನಶ್ವರವಾದ ದೇಹ ಶಾಶ್ವತವಲ್ಲವೆಂಬ ತತ್ವವನ್ನೆಲ್ಲರೂ ಅರಿತರೂ ಅದನ್ನೇ ನಂಬಿ, ನೆನೆದುಕೊಳ್ಳುತ್ತ ಬದುಕುವದು ಸಾಧ್ಯವೇ?— ' ಎಂದು ಮುಂತಾಗಿ ಮುಂದಾಲೋಚನೆ ಮಾಡಿ ಹೆಗಡೆಯವರ ಅಶುಭವನ್ನು ತರ್ಕಿಸುವ ಧೂರ್ತ, ಕುತ್ಸಿತ ವಿಚಾರ ಅವನಲ್ಲಿ ಹೊರಡಲಿಲ್ಲ. ಹೊರಡಲು ಸಾಧ್ಯವೂ ಇರಲಿಲ್ಲ; ಅದು ಅವನ ಗುಣಕ್ಕೆ ತಕ್ಕಂತೆ. ಹಾಗಾಗಿ ಅವನಿಗೆ ಸ್ವಲ್ಪೇ ದಿವಸಗಳಲ್ಲಿ ಅನಿರೀಕ್ಷಿತ ಅಪಘಾತ ಉಂಟಾಯಿತು. ಅದು ಮಾದಪ್ಪ ಹೆಗಡೆಯವರು 'ಸುಖದ ಮರಣ' ಹೊಂದಿದುದು. ನಾಗರೀಕತೆಯ ಮಾತಿನಂತೆ 'ಹಾರ್ಟ್‌ಫೇಲ್' ಆದುದು. ಅದರಿಂದ ಅವನಿಗೆ ಅನುಭವಕ್ಕೆ ಬಂದುದು. 'ಈಗಿನ ಹೆಗಡೆ ಮಹಾ ಬಿಗಿ' ಎಂದು.

ಹೊಸ ಹೆಗಡೆ ಹೆಗಡೆಯವರ ಎರಡನೇ ಮಗ, ದುಡ್ಡಿನ ವ್ಯವಹಾರಕ್ಕು, ಭಿಡೆ ಇಲ್ಲದೆ ನಡೆಯುವದಕ್ಕೂ ಅವನೇ ಯೋಗ್ಯನೆಂದು ಹೆಗಡೆಯವರ ಅವಿಭಕ್ತ ಕುಟುಂಬವೆಲ್ಲ ನಿಶ್ಚಯಿಸಿ, ಅವನನ್ನು ಆ ಪದವಿಗೆ ಏರಿಸಿತ್ತು. ಅಲ್ಲದೆ ಹಿರಿಯವನು 'ಅಬ್ರದಾರ್' ಮನುಷ್ಯನಾಗಿದ್ದ. ಅವನು ತಮ್ಮನ ಪದವಿಗೆ ತಂಟೆಯನ್ನೇನೂ ಮಾಡಲಿಲ್ಲ. ಪ್ರತಿಯಾಗಿ,

ಸಣ್ಣವರು ಕೆಲಸ ನಡೆಯಿಸುತ್ತಿರಬೇಕು. ದೊಡ್ಡವರು ದೇಖರೇಕಿ ನೋಡುತ್ತಿರಬೇಕು. ಇದು ಲೋಕಾರೂಢಿ ಎಂದು ಗೃಹಸ್ಥೀ ರೀತಿಯಿಂದ 'ಪ್ರೋಕ್ತ'ವಾಗಿ ಅಂದುಬಿಟ್ಟಿದ್ದ.

ಅಂತೂ ದೊಡ್ಡ ಹೆಗಡೆಯವರ ಕೈಲಾಸಯಾತ್ರೆ ಆದಂದಿನಿಂದ ಸಣ್ಣಪ್ಪನ ಹೆಗಡೆಮನೆಯಾತ್ರೆಯೂ ಕಡಿಮೆಯಾಗತೊಡಗಿತ್ತು. ಹೀಗೇ ಸಂಬಂಧ ಕಡಿಯುವದರಲ್ಲೂ ಇತ್ತು. ಆದರೆ ಅವಶ್ಯವಿದ್ದಾಗ ಕರೆಯಬರುತ್ತಿತ್ತು. ಆದುದರಿಂದ ಅಲ್ಲಿಗೆ ಹೋಗಲೇಬೇಕಾಗುತ್ತಿತ್ತು. ಆಗ ಹೆಗಡೆಗೆ 'ಓಹೊ! ಇವನು ನಮಗೆ ಹಣ ಕೊಡುವದಿದೆ' ಎಂದು ನೆನಪಿಗೆ ಬರುತ್ತಿತ್ತು.

೫

ಹೆಗಡೆ ಇತ್ತಲಾಗಿ 'ಯಾರಿದ್ದಾರೆ, ಯಾರಿಲ್ಲ' ಎಂಬ ಭಾವನೆಯಿಲ್ಲದೆ ಕಂಡಕಂಡಲ್ಲಿ 'ಸಾಲದ ಬಾಬು' ಎಂದು ಕೇಳುತ್ತಿದ್ದನಾದ್ದರಿಂದ, ಸಣ್ಣಪ್ಪನ ಹೃದಯದ ಯಾವುದೋ ಒಂದು ಮೂಲೆಯಲ್ಲಿ ಅಡಗಿದ್ದ ಸ್ವಾಭಿಮಾನ ಜಾಗ್ರತವಾಗಿತ್ತು. ಹಾಗಾಗಿ ಅವನು ಒಮ್ಮೊಮ್ಮೆ ಯೋಚಿಸುತ್ತಿದ್ದನು, "ನಾನಾದರೂ ಏನು ಮಾಡಲಿ?" ಎಂದು ಮುಂತಾಗಿ—

ಅವನ ಪ್ರತಿವರ್ಷದ ಉತ್ಪನ್ನದ ಹಣ ಅವನಿಗೆ ಉಣ್ಣುವದಕ್ಕೇ ಸಾಲುತ್ತಿರಲಿಲ್ಲ. ಅವರು ಮೂರೇ ಜನರಿದ್ದರೂ ಖರ್ಚಿಗೇನೂ ಕಡಿಮೆ ಇದ್ದಿಲ್ಲ. ಬಡತನದ ಜೀವನ ಹೆರರಲ್ಲಿ ಪದೇ ಪದೇ ಕೈ ಒಡ್ಡಬೇಕಾದುದು. ಹಾಗಾಗಿ ಸಹಾಯಕರ ಭಿಡೆಗೆ, ಬಿಟ್ಟಿಗೆ ಅವರು ಒಳಗಾಗುತ್ತಲೇ ಇರಬೇಕಾಗಿತ್ತು. ಆದುದರಿಂದ ಅವರ ಸ್ವಂತ ಕೆಲಸವನ್ನು ಪೂರ್ಣ ತಾವೇ ಮಾಡಿ ಮುಗಿಸಲಾಗುತ್ತಿದ್ದಿಲ್ಲ. ಆ ಸಂಕಟಕ್ಕೆ ಮತ್ತೊರ್ವ ಆಳಿಗೆ ಪಗಾರುಕೊಟ್ಟು ಗೆಯಿಸಿಕೊಳ್ಳಬೇಕಾಗುತ್ತಿತ್ತು. ಆಗ ಅವನ ಆಹಾರ ವಿಹಾರದ ಖರ್ಚು ಬಡಿಯುತ್ತಿತ್ತು. ಬಡತನದ ನಮ್ರ, ತಗ್ಗಿದ ತಲೆಯ ಜೀವನವನ್ನು ಕಂಡೋ ಏನೋ—ಊರಿನ ಉಂಡಾಡಿಗಳೆಲ್ಲ ದಿನವಿಡೀ ಅಲ್ಲೇ! ಅವರೆಲ್ಲ ಹೊರ ಬದಿಗೆ ಕುಳಿತಾಗ ಒಳಗೆ ಸುಮ್ಮನೆ ಗುಮ್ಮಕ್ಕಿಯಂತೆ ತಿನ್ನಲಾಗುತ್ತಿರಲಿಲ್ಲ. ಹಾಗಾಗಿ ಮತ್ತಿಷ್ಟು ಖರ್ಚು ಹೆಚ್ಚುತ್ತಿತ್ತು. ಇನ್ನು ಅವನು ಮಾಡಿದ ಹೆಚ್ಚಿನ ಖರ್ಚೆಂದರೆ—ಮಗನ ಉಪನಯನ. ಅದನ್ನು ಮಾಡದಿದ್ದರೆ ನಡೆಯುತ್ತಿರಲಿಲ್ಲ 'ಮಗನ ಉಪನಯನ ಸಹ ಮಾಡಲಾರದ ಬಕೀರ ಮನುಷ್ಯ'ನೆಂದು ಜಗತ್ತೇ ನಗುತ್ತಿತ್ತು! ಆಗಲಾದರೂ ದುಂದನ್ನೇನೂ ಅವನು ಮಾಡಿದ್ದಿಲ್ಲ. ಕೆಲ ನೆಂಟರನ್ನು ಮಾತ್ರ ಕರೆದು ಬಡಿಸಿದ್ದ.

ಈಗ ಎರಡು ವರ್ಷಗಳಿಂದಲೂ ಹೆಗಡೆ ಕಂಡಕಂಡಲ್ಲಿ "ಸಾಲ ತೀರಿಸು. ಉದ್ದೇಶವೇನು ?" ಎಂದು ಕೇಳುತ್ತಲೇ ಇದ್ದ. ಆಗಂತೂ ಸಣ್ಣಪ್ಪ,

"ಅಯ್ಯೋ ಇದ್ದೂ ಸಂತ್ತಂತೆ" ಎಂದು ಹಳಹಳಿಸುತ್ತಿದ್ದ. ನಿಜವಾಗಿ ಸಣ್ಣಪ್ಪನಿಗೆ ಹೆಗಡೆಯ ದುಡ್ಡನ್ನು ಮುಳುಗಿಸಿಬಿಡಬೇಕೆಂಬ ದುರುದ್ದೇಶವಿದ್ದಿಲ್ಲ. ಆದರೆ ತೀರಿಸಲಾಗುತ್ತಿರಲಿಲ್ಲ. ಆಗ ಹೆಗಡೆ 'ದುರುದ್ದೇಶವೇ!' ಎಂದುಕೊಳ್ಳುತ್ತಿದ್ದ. ಎರಡು ವರ್ಷಗಳಿಂದಲೂ ಸಣ್ಣಪ್ಪ ಒಂದು ಹೊಸ ನುಗುಲನ್ನು ಸಹ ಮನೆಗೆ ತಂದಿರಲಿಲ್ಲ. ಹೀಗೆ ಎಲ್ಲ ಬಗೆಯಿಂದ ಅವನು ಬವಣೆಪಡುತ್ತಿದ್ದರೂ ಅವನ ದುಃಖವನ್ನು ಕೇಳುವವರಿದ್ದಿಲ್ಲ. ಅದರಲ್ಲಿ ಬೇರೆ ಆಚೆ ಈಚೆ ಪರಿಹಾಸ್ಯ, ಅಪಮಾನ ಮಾಡುತ್ತಿದ್ದರು. ಅಲ್ಲದೆ ಮೋರೆಯ ಮೇಲೆ ಉಗಳುವಂತೆ ಮಾತನಾಡುತ್ತಿದ್ದರು.

"ಬಡವನ ಕಂಡರೆ ಬಿಲ್-ಪತ್ರೆ ಸಹ ಹುಬ್ಬು ಹಾರಿಸಿತ್ತಂತೆ! ಅಂತೂ ನನ್ನ ಅವಸ್ಥೆ ಕುನ್ನಿಗಿಂತ ಕಡೆ. ಈ ಮನುಷ್ಯನ ಜನ್ಮಡಲ್ಲಾದರೂ ಏಕೆ ಬಂದೆನಪ್ಪಾ ದೇವರೇ!" ಎಂದು ದುಃಖಿಸುತ್ತಿದ್ದ. ತನ್ನ ಕೀಳ್ತರಗತಿಯ ಬಗ್ಗೆ,

"ಹುಟ್ಟಿದ್ದಕ್ಕೆ ಉಣ್ಣಲು ತುತ್ತು ಅನ್ನವಿಲ್ಲ. ಉಡಲು ಒಂದು ತುಂಡು ವಸ್ತ್ರವಿಲ್ಲ" ಎಂದು ಹಳಹಳಿಸುತ್ತಿದ್ದ. ಅವನಿಗೆ ಮತ್ತೆ ನೆನಪಾಗುತ್ತಿತ್ತು, ಹೆಗಡೆ ಮತ್ತಿತರರು 'ದುಂಡು' ಎಂದು ಅವನಿಗೆ ಕರೆವುದು. ಆಗ ಮನಸ್ಸಿಗೆ ಮತ್ತೆ 'ಪೆಂಟಿ'ದಂತಾಗುತ್ತಿತ್ತು.

ಸಾಮಾನ್ಯವಾಗಿ ತಪ್ಪು ಮಾಡಿದವನೆದುರು 'ನೀನು ತಪ್ಪಿತಸ್ಥನಿರುವಿ ಹುಚ್ಚಾ!' ಎಂದು ನುಡಿದರೆ, 'ನೀನೆಷ್ಟರವನೋ ಕೇಳಲಿಕ್ಕೆ?' ಎಂದು ಜೋರಿನಿಂದ ಕೇಳಿ ಬಾಯಿಮುಚ್ಚಿಸುತ್ತಾನೆ. ಆದರೆ ತಪ್ಪಿತಸ್ಥನಲ್ಲದವನಿಗೆ ಸುಮ್ಮಸುಮ್ಮನೆ ಅಪವಾದ ಹೊರಿಸಿದರೆ, ಅದೂ ತಿರುಗಿ ಮಾತೆತ್ತಲು ಸಹ ಅವಕಾಶವಿಲ್ಲದ ಬಡತನ ಬಾಯಿ ಕಟ್ಟಿದ್ದರೆ, ಹೇಳಿದ್ದನ್ನು ಹೇಳಿಸಿಕೊಂಡು ಸುಮ್ಮನಿರಬೇಕಾಗುತ್ತದೆ.

ಹೀಗೆ ಬಡತನದ ರುದ್ರಕಲ್ಪನೆ ಅವನ ಚಿಂತೆಯ ಪ್ರವಾಹಕ್ಕೆ ಮಹಾಪೂರವನ್ನೇ ತಂದಿಡುತ್ತಿತ್ತು. ಹಾಗಾಗಿ, 'ತನಗಿಲ್ಲದಾಗ ಹೆರರದನ್ನು

ಕಂಡು ತರ್ಕಿಸುವದು ಮನುಷ್ಯ ಸಹಜ ಗುಣ' ಎಂಬಂತೆ ಅವನು ತನ್ನ ನೆರೆಹೊರೆಯುವರನ್ನು ಕಂಡು ತರ್ಕಿಸುತ್ತಿದ್ದನು. ಅವರು ದೊಡ್ಡದೊಡ್ಡವರೆನ್ನುವವರನ್ನೆಲ್ಲ ಕರೆದು ಚಹಪಾರ್ಟಿ ಮಾಡಿಸುತ್ತಿದ್ದರು.

"ಹಾಗಾದರದು ದುಂದಲ್ಲವೇನೋ? ಎಂದೇ ಅವನಿಗೆ ಕಾಣುತ್ತಿತ್ತು. ಆದರೂ ಅವನು ಉಪಾಯವಿಲ್ಲವೆಂದುಕೊಂಡು ಸುಮ್ಮನುಳಿಯುತ್ತಿದ್ದ. ಪ್ರಕೃತಿಯೇ ತಮ್ಮ ತಕ್ಕಡಿಯನ್ನು ಎಷ್ಟು ಹಗುರ ಮಾಡಿದೆಯೆಂದುಕೊಂಡು ಉಸಿರುಗರೆಯುತ್ತಿದ್ದ.

ಅಂತು, ಬಡತನದ ದೆವ್ವ ಅವನ ಮಾನ-ಮರ್ಯಾದೆ, ಸ್ಥಾನ-ಜ್ಞಾನ, ತರ್ಕ-ವಿತರ್ಕಗಳನ್ನೆಲ್ಲ ಮೆಟ್ಟಿ, ಮುಂದೆ ಬಂದು ನಿಂತಿತ್ತು. ಅದು ಅವನ ವ್ಯಕ್ತಿತ್ವವನ್ನು, ವ್ಯಕ್ತಿತ್ವದ ಧಾರ್ಢ್ಯತೆಯನ್ನು ಕೊಲ್ಲತೊಡಗಿತ್ತು!

೬

ಹಳ್ಳಿಯಿಂದ ಪೇಟೆಗೆ ಹೋದ ಹರಟೆಮಲ್ಲನೊಬ್ಬನು ತಿರುಗಿಬಂದು,

"ಇನ್ನೆರಡು ವರ್ಷದಲ್ಲೇ ನಮ್ಮವರಿಗೇ ರಾಜ್ಯ ಸಿಗುವವಂತೆ! ಆಗ ಬಡವ-ದೊಡ್ಡವರನ್ನೆಲ್ಲ ಸಮ ಮಾಡುತ್ತಾರಂತೆ! ಆಗ ಸಾಲಗೀಲ ಎಲ್ಲಾ ಇರುವದೇ ಇಲ್ಲವಂತೆ. ಸಾಲ ಮಾಡಿದ್ದಿದ್ದರೂ ಅವನ ಖರ್ಚಿಗಾಗಿ ಹೆಚ್ಚು ಉಳಿದರೆ ತೀರಿಸುವದಂತೆ! ಈಗಲೇ ಪ್ಲ್ಯಾನು ಮಾಡುತ್ತಿರುವರಂತೆ!" ಎಂದು ಸುದ್ದಿ ಬೀರಿದ್ದನು.

"ಪೇಟೆಗೆ ಹೋಗಿ ಬಂದಮೇಲೆ ಹಳ್ಳಿಯಲ್ಲಿ 'ಪೇಟೆಸುದ್ದಿ' ಎಂತ ಏನನ್ನಾದರೂ ಹೇಳಲೇಬೇಕಾಯಿತಲ್ಲ! ಅದಕ್ಕೇ ಸುಮ್ಮನೆ ಕಲ್ಪನೆಯ ಬಂಡಿ ಉರುಳಿಸಿದ್ದೇ!" ಎಂದು ಕೆಲವರು ತರ್ಕಿಸಿ ಸಿದ್ಧಾಂತ ಮಾಡಿದರು.

"ಮುಂದೆ ಆಗಬೇಕಾಯಿತು; ಹೋಗಬೇಕಾಯಿತು ಮುಂದಾಗುವದನ್ನೆಲ್ಲ ಈಗಲೇ ಹೇಳಲು ಬರುತ್ತಿದ್ದರೆ.........?" ಎಂದು ಕೆಲವರು ಸುಮ್ಮನೆ ಉಳಿದರು.

ಆದರೆ ಮತ್ತೆ ಕೆಲವರು ಆ ವಿಷಯದ ಬಗ್ಗೆ ಏನೂ ವಿಚಾರ ಮಾಡದೆ, ತಮ್ಮ ನಿತ್ಯ ಕರ್ತವ್ಯದಂತೆ ಅಲ್ಲಿ ಇಲ್ಲಿ ವಿಷಯ ಬೊಗಳುತ್ತ— ಹೆಗಡೆಯವರ

ಮನೆಯಲ್ಲಿಯೂ ಕವಳ ಹಾಕುತ್ತ ಸಹಜವಾಗಿ ಹರಟೆವರು. ಅವರ ಪರಿಣಾಮವಾಗಿ ಸಣ್ಣಪ್ಪನ ಎರಡು-ಮೂರು ವರ್ಷದ ಬಾಕಿ ಸಾಲದ ದಸ್ತೈವಜು ಕೋರ್ಟಿಗೆ ಹಾಜರಾಗಿ, ಕೋರ್ಟಿನ ಮುದ್ರೆ, ನಂಬರು ಬಿದ್ದಿತ್ತು.

ಕೆಲದಿನಗಳ ಮೇಲೆ 'ಹೆಗಡೆಯವರು ಸಣ್ಣಪ್ಪನ ಮೇಲೆ ನಂಬು ಮಾಡಿದ್ದಾರೆ' ಎಂದು ಡಂಗುರವನ್ನು ಸಾರಿದಂತೆ ಊರಲ್ಲೆಲ್ಲ ಸುದ್ದಿ ತುಂಬಿ ಹೋಗಿತ್ತು.

ಸಣ್ಣಪ್ಪನಿಗೆ ಗಾಯದ ಮೇಲೆ ಬರೆ ಇಟ್ಟಂತಾಯಿತು. ಉಪಾಯ ಗಾಣದ ಸ್ಥಿತಿಯಲ್ಲಿ ಮನೆಗೆ ಬೆಂಕಿಬಿದ್ದು, ಎಲ್ಲವೂ ಬಟ್ಟಬಯಲಾದಂತಾಯಿತು. ನಿಂತ ನೆಲೆ ತಪ್ಪಿ, ಬಿದ್ದ ನೆಲೆ ಕೆರೆಯಾದಂತಾಯಿತು. ಅವನು, ಓಡಿಬಂದು ಹೇಳಿಕೊಳ್ಳುವ ನೋಡಿದರೆ — "ಹೆಗಡೆ....? ಪೇಟೆಗೆ ಹೋಗಿರುವ" ಎಂದರು. ಅಲ್ಲದೆ, "ಅದೇನು ಆಗುತ್ತದೆಂತ ಮಾಡಿದೆ ಸಣ್ಣಪ್ಪ? 'ಹೌದು, ಕೊಡಲಾಗಲಿಲ್ಲ ಇನ್ನು ಕೊಡುತ್ತೇನೆ' ಎಂದು ಹೇಳಿದರಾಯಿತು!" ಎಂದು ತಿರುಗಿ ಕಳಿಸುವ ಮಟ್ಟಿಗೆ ಉಪಾಯ ಹುಡುಕಿ, ಹೇಳಿ ಕಳುಹಿದರು

ಸಣ್ಣಪ್ಪ 'ಕಾಲಬದಲ' ಎಂದುಕೊಂಡು ತಿರುಗಿದ. ಆದರೆ ಪುನಃ ಪ್ರಯತ್ನ ಮಾಡಿದಾಗ ಸಹ ಉತ್ತರ ಅಷ್ಟೇ ಬಂದಿತು.

"ಎಲ್ಲಾ ಅಲ್ಲಿಯೇ ನೋಡಿಕೊಳ್ಳುವಾ, ಏನೆಂದು ನಾವು ಕೇಳುತ್ತಿರುವದು; ನೀನೂ 'ಈಗಿಲ್ಲ ಮುಂದೆ ನೋಡುವಾ ಕೊಡುತ್ತೇನೆ' ಎನ್ನುತ್ತಿರುವದು. ಹೀಗೇ ಎಷ್ಟು ದಿನ ಕಾಯಬೇಕು? ಅದು ಸರಿಯಾಗುವದಿಲ್ಲ......." ಎಂದು ಹೆಗಡೆ ಹೇಳಿದನು.

ಸಣ್ಣಪ್ಪನಿಗೆ ಮುಖದಮೇಲೆ ಹೊಡೆದಂತಾಯಿತು. ಅವನು ಯಾರಿಗೂ ಮುಖ ಕೊಟ್ಟು ಮಾತನಾಡುತ್ತಿದ್ದಿಲ್ಲ ತಾನೂ ಹೇಳಿಕೊಳ್ಳಲಾರ. ಮುಖ ವೆತ್ತದೆ ಬಂದು ಬಿದ್ದುಕೊಂಡ ಕಾದ ತಲೆಬುರುಡೆ ಎಷ್ಟು ಕೈ ಆಡಿಸಿದರೂ ಶಾಂತವಾಗಲಾರದಾಗಿತ್ತು.

ಆದರೆ, 'ಆದದ್ದಾಗಲಿ' ಎಂದು ದುಃಖಿಸುತ್ತಿರುವ ಸಣ್ಣಪ್ಪ ತನ್ನ ಪಕ್ಷಕ್ಕೆ ತಾನೇ ಸಣ್ಣಾಗತೊಡಗಿದ್ದ. ಎಲ್ಲಿ ನೋಡಿದರೂ 'ದೇಹಿ' ಎನ್ನುವ

ಭಾವದಿಂದ ಬಾಡಿದ ಮುಖದ ಸಣ್ಣಪ್ಪನನ್ನು ಪೇಟೆಯಲ್ಲಿ ಹೆಗಡೆ ಒಮ್ಮೆ ಕಂಡು, " ಉಂಡು ಆಗಿದೆಯೇನೋ ? " ಎಂದು ಮಾತ್ರ ಕೇಳಿದ್ದನಂತೆ !

೭

'ಇಷ್ಟೆಲ್ಲಾ ಮಾಡುವದು ಹೊಟ್ಟೆಗಾಗಿ—, ಗೇಣು ಬಟ್ಟೆಗಾಗಿ ' ಎನ್ನುವಂತೆ ಸಣ್ಣಪ್ಪನು ಈ ಸಾರೆಯ ಕೊನೆಯ ಕೊಯಿಲನ್ನು ಮಾತ್ರ ಮುಗಿಸಿದ್ದನು. ಅದಕ್ಕೂ ಮೊದಲೇ ಕೋರ್ಟು ಡಿಕ್ರಿಯಾಗಿ ಹೋಗಿದ್ದರಿಂದ ದುಃಖದ ಪ್ರವಾಹ ಒಮ್ಮೆ ಹಾದುಹೋಗಿ, ಸದ್ಯ ಶಾಂತತೆಯು ಸಣ್ಣಪ್ಪನ ಪಾಲಿಗಾಗಿತ್ತು.

" ಮಾಡುವದನ್ನು ಮಾಡಬೇಕಾಯಿತಲ್ಲ " ಎಂದು ನಿರಾಶೆಯಿಂದ ಕೆಲಸ ಮಾಡುತ್ತಿದ್ದ.

ಒಂದು ಸಂಜೆ ಆಚೆ ಮನೆಯವ ಬಂದು ಸಣ್ಣಪ್ಪನ ಕಿವಿಯಲ್ಲೇನನ್ನೋ ಉಸುರಿದ. ಗುಣು ಗುಣು ಹಾವಭಾವ. ಸಣ್ಣಪ್ಪ ನಿರಾಕರಿಸಿದ.

ಅವನು ಗಂಟುಮೋರೆ ಹಾಕಿಕೊಂಡು ನಡೆದ.

ಸಣ್ಣಪ್ಪ ಅಡಿಕೆಯನ್ನು ಒಣಗಿಸಿ ಅಟ್ಟದಮೇಲೆ ಇಟ್ಟಿದ್ದ. ಅದನ್ನು ಇಂದೋ ನಾಳೆಯೋ ಪೇಟೆಗೆ ಒಯ್ಯಬಹುದಾಗಿತ್ತು. ಅವನ್ನೆಲ್ಲ ಚೀಲಗಳಲ್ಲಿ ತುಂಬಿ ಜಗುಲಿಗೆ ತಂದಿಟ್ಟ. ತನ್ನ ಮನೆಯ ಎಲ್ಲ ಪಾತ್ರೆ-ಪಗಡಿಗಳನ್ನೂ ಜಗುಲಿಗೇ ಸೇರಿಸಿದ. ನೀರ ಹರಿಸಿ ಕಣ್ಣು ಬಾತಿತ್ತು. ರಾತ್ರಿ ನಿದ್ರೆ ದೂರ ಸರಿದಿತ್ತು.

ನಸುಕು ಹರಿಯುವದರೊಳಗೇ ಹೆಂಡತಿ, ಮಗನೊಂದಿಗೆ ಹೆಗಡೆ ಮನೆಗೆ ಬರುವಷ್ಟರಲ್ಲಿ ಆಳುಗಳು, ಗಾಡಿ, ಕೋರ್ಟು ಬೇಲೀಪ, ಮುಂತಾದ ಜಪ್ತಿಯ ಸಲಕರಣೆ ಸಿದ್ಧವಾಗಿ ನಿಂತಿತ್ತು.

ಸಣ್ಣಪ್ಪ ಹೋದವನೇ ಹೆಗಡೆಯ ಕಾಲಿಗೆ ಬಿದ್ದ. ಕಣ್ಣ ನೀರನ್ನು ಕ್ಕಳಿಸುವವರಂತೆ ಹೊಂಡವಾಗಿತ್ತು.

" ನಮ್ಮನೆ ಜಪ್ತಿಗಲ್ಲವ್ರೊ ಹೊರಟದ್ದು ? ಬೇಡ ಹೋಗುವದು ಬೇಡ. ಅಲ್ಲಿಯವರಿಗೆ ಹೋಗುವ ತ್ರಾಸನ್ನೇ ಕೊಡುವದಿಲ್ಲ. ಎಲ್ಲವನ್ನೂ ಜಗುಲಿಯ

ಮೇಲೆ ಹಾಕಿಟ್ಟು, ಬೇಗ ಹಾಕಿಕೊಂಡು ಬಂದಿರುವೆ. ಯಾವುದನ್ನೂ ಪರಾರಿ ಮಾಡಲಿಲ್ಲ. ಶಿಶುವಿಗೆ ಹಾಲು ಹೊಯ್ಯುವ ಹುಟ್ಟು ಸಹ ಅಲ್ಲೇ ಇದೆ. ತೆಗೆದುಕೊಳ್ಳಿ ಕೀಲಿ ಕೈ" ಎಂದು ಪಾದದಲ್ಲಿ ಕೀಲಿಕೈಯನ್ನು ಇಟ್ಟು ಮತ್ತೆ ತನ್ನ ದುಃಖವನ್ನು ನಿವೇದಿಸಿದ

"ನಾನು ಕೊಡಬಾರದೆಂದಲ್ಲ ಇಲ್ಲಿಯವರೆಗೆ ಕೊಡದಿದ್ದುದು. ವರ್ಷದ ಉತ್ಪನ್ನದ ಹಣ ವರ್ಷ ಉಣ್ಣುವದಕ್ಕೇ ಸಾಲುವದಿಲ್ಲ. ಮಳೆಗಾಲಕ್ಕೇ ತತ್ವಾರ. ಸಾಯಿಸಬೇಕೆಂದು ಹೊಳೆ ಆಚೆಗಿನ ದೇವರಾಣೆಯಾಗಿಯೂ ಇಲ್ಲ. ಆದರೂ........ನಮ್ಮನೆ ಜಪ್ತಿಗೆ ಹೊರಟಿರಿ? ಆಗಲಿ. ದುಡ್ಡು, ಮರ್ಯಾದೆ. ಏನೂ ಇಲ್ಲದ ನಮಗೇನು ಇದೆ ಇನ್ನು ? ನಾವಿದ್ದರೂ ಅಷ್ಟೇ, ಸತ್ತರೂ ಅಷ್ಟೇ! ನನಗಿದ್ದ ಜಮೀನಾದರೂ ಎಷ್ಟು ಅಲ್ಲಿ? ಒಂದು ನಾಲ್ಕೈದು ಬಣ್ಣ ತೋಟ ಸಂಗಡ ಒಂದು ಮನೆ. ಅದರಿಂದೆಲ್ಲಾ ಇನ್ನೇನು ಪ್ರಯೋಜನ ನನಗೇ ಹೀಗೆಲ್ಲಾ ಆದಮೇಲೆ? ಅವನ್ನೆಲ್ಲಾ ನೀವೇ ತೆಗೆದು ಕೊಂಡು ಬಿಡಿ. ಪೂರ್ಣ ಬರಕೊಟ್ಟು ಬಿಡುವೆ ನಾನು ನೀವು ಹೇಳಿದಂತೆ ನಿಮ್ಮನೆ ಸೋಗೆ ಬಾಚಿಕೊಳ್ಳುತ್ತ ಇರುತ್ತೇವೆ. ನನ್ನ ಹೆಂಡತಿ, ನಿಮ್ಮ ಮನೆ ಮುಸರೆ-ಗಿಸರೆ ತಿಕ್ಕುತ್ತ ಇರುತ್ತಾಳೆ. ಮಗ, ನಿಮ್ಮ ಮನೆ ದೇವರ ಪೂಜೆಗಾಯಿತು. ನೀವು ಉಪವಾಸ ಹಾಕುದಾದರೂ ಹಾಕಿ, ಹಾಗೇ ಕೊಳಸುವದಾದರೂ ಅಡ್ಡಿ ಇಲ್ಲ. ಅಂತೂ ನಿಮ್ಮ ಕಾಲುಬುಡಕ್ಕೆ ಸಾಯುವದೇ ಅನ್ಯಥಾ ಮಾರ್ಗವೇ ಇಲ್ಲ" ಎಂದು ಕೆಸರು ಹೂಡಿದ ಅಂಗಳದಲ್ಲೇ ಹೊರಳಿದ. ಅವನಂತೆ ಅವನ ಹೆಂಡತಿ, ಮಗನೂ ನಮಸ್ಕರಿಸಿದರು.

ಬಡತನ, ಆದ ಅಪಮಾನ ಸಣ್ಣಪ್ಪನ ವ್ಯಕ್ತಿತ್ವವನ್ನೆಲ್ಲ ಸುಟ್ಟು ತೆಗೆದಿತ್ತು. ಹಾಗಾಗಿ ಅವನಿಗೆ ಅವಮರ್ಯಾದೆ ಎನಿಸಲಿಲ್ಲ.

ಸುತ್ತ ಮನೆಯವರೆಲ್ಲ ನಿಂತು ನೋಡುತ್ತಿದ್ದರು. ಎಲ್ಲರ ದೃಷ್ಟಿಯೂ ಹೆಗಡೆಯ ಮೇಲಿತ್ತು. ಎಲ್ಲರ ಮುಖಗಳೂ 'ಅಯ್ಯೋ' ಎಂಬ ನೊಂದ ಹೃದಯದ ಭಾವವನ್ನು ತೋರಿಸುತ್ತಿದ್ದವು.

ಹೆಗಡೆ ಒಮ್ಮೆ ಸುತ್ತಲೂ ನೋಡಿದ. ಸ್ವಭಾವಕ್ಕನುಗುಣವಾಗಿ ಸರಕ್ಕನೆ ಕಾಲನ್ನು ಹಿಂತೆಗೆದುಕೊಂಡ.

'ಜಗತ್ತಿನಲ್ಲಿ ಎಲ್ಲವೂ ನಾವು ಕಂಡಂತೆಯೇ ಇರುವದಿಲ್ಲ' ಎಂಬ ಪ್ರಕೃತಿ ನಿಯಮಕ್ಕನುಸರಿಸಿ ಹೆಗಡೆಯ ಶುದ್ಧ ಒರಟುತನದ ಹಿಂದೆ ಮೃದುತನ ಅಡಗಿತ್ತು. ಆದರದು ಆಚ್ಛಾದಿತವಾಗಿತ್ತು, ಏಳಲಾರದಾಗಿತ್ತು.. ಅದೀಗ ಎಚ್ಚರಗೊಳ್ಳುವ ಕಾಲ ಸಹಜವಾಗಿ ಬಂದೊದಗಿತ್ತು. ಅಲ್ಲದೆ, ಎಲ್ಲರೂ ತನ್ನನ್ನೇ ನೆಟ್ಟ ನೋಟದಿಂದ ನೋಡುತ್ತಿರುವದು ಮಾರ್ಮಿಕವೆನಿಸಿತು. ಅಂತೆ, ಹೆಗಡೆಯ ಎದೆಗೆ ದುಃಖದ ಕಾವು ತಾಗಿತು. ತಾಗಿ ನೋವ ಕುದುರಿಸಿತು.

"ಬೇಲೀಪರೆ, ಬನ್ನಿ, ಒಳಗೆ ಹೋಗುವಾ" ಎಂದು ತಿರುಗಿ ಜಗುಲಿಗೆ ಹೋಗಿ ಕುಳಿತುಕೊಂಡ. ಜಪ್ತಿಯ ಕರಾಳ ಮುಖ ತಿರುಗಿ, ದಯೆಯ ಪ್ರಶಾಂತ ಮುಖಕ್ಕೆ ತಿರುಗಿತ್ತು.

ಹೆಗಡೆ, ಹೊರಬದಿಗೇ ನಿಂತ ಮನೆಯ ಹೆಂಗಸರಿಗೆ "ನಡೆಯಿರಿ ಒಳಗೆ ಬೇಗನೆ ಆಸರಿಗೆ ಮಾಡಿ" ಎಂದು ಆಜ್ಞಾಪಿಸಿದ. ಸಂಗಡ ಸಣ್ಣಪ್ಪನ ಹೆಂಡತಿಗೆ "ತಂಗಿ, ನೀನೂ ನಡೆ ಒಳಗೆ" ಎಂದು ಧ್ವನಿ ಬೆರೆಸಿದ.

೮

ಕಣ್ಣಮುಂದೆ ಹರಿದ ದಸ್ತೈವಜನ್ನು, ಡಿಕ್ರಿ ನಕಲನ್ನು ಕಂಡ ಬೇಲೀಪರು, "ಅಬಾ! ವೈರ ಅವೈರಕ್ಕೆ ಬಾಗುವದು ಸತ್ಯ. ಹಿಂಸೆ ಅಹಿಂಸೆಗೆ ಸೋಲುವದು ಸತ್ಯ. ಒರಟು ನಮ್ರತೆಗೆ ಕರಗುವದು ಸಾಧ್ಯ!" ಎಂದುಕೊಂಡರು.

ಅಂದು ಸಂಜೆ ಸೂರ್ಯನ ಕೆಂಡದರಿಧ ಮುಖ ಮುಳುಗಿತೆನ್ನುವಷ್ಟರಲ್ಲೇ ರಾಜಿ ಅರ್ಜಿಯನ್ನು, ಅಡಿಕೆ, ಬಾಳೆ, ಬಾಳೇಕಾಯಿಯ ಸಂಭಾವನೆಯನ್ನು ಹೊತ್ತು ತಂದ ಬೇಲೀಪರು ಕೋರ್ಟಿನ್ನು ಕಂಡು ಸಟ್ಟನೆ ನಿಂತರು.

"ಹಳ್ಳಿಯ ಒಂದು ಸಾಮಾನ್ಯ ಹೃದಯದಲ್ಲಿ ಹುದುಗಿದ್ದ ಸತ್ಯ ಶಹರದ ಕೃತ್ರಿಮತೆಯ ಜೀವನದಲ್ಲೆಲ್ಲಿ ಬರಬೇಕು? ಅಲ್ಲದೆ, ಸಹಜತೆಗೆ ತವರುಮನೆಯಾಗಿದ್ದ ಹಳ್ಳಿಯಲ್ಲಿ ನಡೆದಂತೆ ಹೃದಯದ ಸತ್ಯಪರಿವರ್ತನೆ, ಸರಿಯಾದ ನ್ಯಾಯ, –ಕಾಯದೆ ಕ್ರೂರ ಮುಖದಿಂದೆಲ್ಲಿ ಆಗಬೇಕು?" ಎಂದುಕೊಂಡರು. ಸಂಗಡ ನಗೆಯ ಗಾಲಿ ಮನಸ್ಸಿನಲ್ಲೇ ಉರುಳಿ ಓಡುತ್ತಿತ್ತು!

# ನೊಂದ ಹೃದಯ

ಏನೂ ತಿಳಿಯದ ಅವಳಿಂದ ಎಲ್ಲವನ್ನೂ ದೋಚಿಕೊಂಡ ಆ ಪ್ರಾಣಿ ದಾಮೋದರರಾಯ.

ಮರುದಿನವೇ ಅವಳಿಗೆ ಊಟಕ್ಕೆ ಬಹಿಷ್ಕಾರ. ಮನೆಯಿಂದ ಹೊರಗೆ ಹಾಕುವ ಸಂಭ್ರಮ. ಸಂಗಡ ದಾಮೋದರರಾಯನ ಕೋಪ. ಅವಳ ರೋದನ. ಮಕ್ಕಳ ಕಿರಲಾಟ.

ಆ ಕೇರಿಯಲ್ಲೆಲ್ಲೂ ಅವಳಿಗೆ ಒಂದು ತುತ್ತು ಅನ್ನ ದೊರಕಲಿಲ್ಲ. ಅದು ರಾಯನ ತಂತ್ರ. ಅವನ ಕಾಮಲಾಲಸೆಗೆ ಅವಳು ಒಪ್ಪಲಿಲ್ಲವೆಂದು.

* * * *

ದಾಮೋದರರಾಯ, ಮಂಜಪ್ಪ ಒಂದೆ ತಾಯಬಸಿರಿಂದೊಗೆದ ಹಿಟ್ಲರ್-ಚರ್ಚಿಲ್ಲರು; ಗುಣದಲ್ಲಲ್ಲಾ, ಹೊಡದಾಡುವದರಲ್ಲಿ. ಇವರ ತಂದೆ ಇವರಿಗೆ ಬಿಟ್ಟುಹೋದದ್ದು ಸಾಲದೊಂದಿಗೆ ಮನೆ, ಕಲಿಸಿದ್ದು ಇಬ್ಬರಿಗೂ ಮುಲ್ಕಿ.

ಇದ್ದದ್ದು ಪೇಟೆಯಲ್ಲೇ. ಅಣ್ಣ-ತಮ್ಮ ಜಗಳಾಡಿದರು; ಹೊಡೆದಾಡಿದರು. ದಾಮು ಮುಂಗೋಪಿ. ತಮ್ಮ ಕಮ್ಮಿ ಇರಲಿಲ್ಲ. 'ನಾನು ಇನ್ನು ಮನೆಗೇ ಬರುವದಿಲ್ಲ. ನೀನೇ ಇರು. ಎಲ್ಲವನ್ನೂ ನೋಡಿಕೋ' ಎಂದು ಹೊರಟು ಹೋದ ಮಂಜಪ್ಪ.

ಪೇಟೆಗೆ ಬಂದ ಹಳ್ಳಿಯ ಹೆಗಡೆಯವರೊಬ್ಬರೊಂದಿಗೆ ಮಂಜಪ್ಪ ಹೋಗಿ, ಎರಡು ತಿಂಗಳ ಅಲ್ಲಿ ಮಾಸ್ತರನಾಗಿ ಉಳಿದು, ಏನೋ ಕೆಟ್ಟ ಕೆಲಸದ ನಿಮಿತ್ತ ಬೈಯಿಕೊಂಡು ಬಂದ. ಆದರೆ ಎರಡು ತಿಂಗಳಿಗೆ ಊಟ-ಉಣಿಸು ಕಳೆದು ಹತ್ತು ರೂಪಾಯಿಗಳು ಸಿಗಲಿಲ್ಲವೆ?

* * * *

ಕಲಿತದ್ದು ಮುಲ್ಕಿಯಲ್ಲವೆ ದಾಮೂನು? ಅಲ್ಲಿ ಇಲ್ಲಿ ಕಾರಕೂನಿ ಮಾಡಿಕೊಂಡು, ಬಂದವರ ಸಂಗಡ 'ನೀನೇ ರಾಜ. ನೀನೇ ತೇಜ' ಎಂದು ಏರಿಸಿ ಮೋಸದಿಂದ ದುಡ್ಡು ಮಾಡಹತ್ತಿದ. ಅಂದಿನಿಂದ 'ದಾಮು' ಹೋಗಿ 'ದಾಮಣ್ಣ'ನಾದ.

"ನಾಳೆಯಿಂದ ಕೆಲಸಕ್ಕೆ ಬರಬೇಡ. ತಿಳಿಯಿತು ನಿನ್ನ ಕಳ್ಳತನ, ಕಪಟತನ. ಇಷ್ಟು ಸಣ್ಣ ವಯಸ್ಸಿನಲ್ಲೇ ಇಂಥ ಪಕ್ಕಾ ಕಳ್ಳನಾದಮೇಲೆ? ತೆಗೆದುಕೋ ನಿನ್ನ ಅರಿಷ್ಟ...." ಒಂದುನೂರಾ ಎಂಭತ್ತು ರುಪೈ! ಒಂದು ವರ್ಷದ ದುಡಿಮೆ.

* * * *

ಹುಲೇಹಳ್ಳಿ ಸಣ್ಣ ಪೇಟೆ. ಐದಾರು ಅಂಗಡಿ ಇದ್ದದ್ದು. ಸುತ್ತಲೂ ಅಡಿಕೆಯ ತೋಟ-ಅಡವಿ ಮಂಜಪ್ಪನ ವಸತಿ ಅಲ್ಲಿ. ಆತನಿಗೀಗ ಇಪ್ಪತ್ತನೆಯ ವರುಷ. ಅಲ್ಲಿಯೇ ಸಣ್ಣ ಕಿರಾಣಿ ಅಂಗಡಿ. ಕೈಯಲ್ಲಿ ಬೇಕಾದ ಹಾಗೆ ಕಾಸುಪುಡಿ ಕುಡಿಯುತ್ತಿದೆ. ದೂರದಲ್ಲಿರುವ ಪೇಟೆಯಿಂದ ಸಾಮಾನುಗಳನ್ನು ತರುವದು; ಆ ಹಳ್ಳಿಯಲ್ಲಿ ಒಂದಕ್ಕೆ ಎರಡರಷ್ಟು ದರದಲ್ಲಿ ಮಾರುವದು; ಆ ಮೇಲೆ ಪೆಟಿಯುವರೆಗೆ ಪೂರ್ಣ ಹಣ ಸಲ್ಲಿಸುವದು. ಇದು ಆತನ ರೂಢಿ.

'ಹಳ್ಳಿಯಿಂದ ಎಂಟು-ಒಂಭತ್ತು ಮೈಲು ನಡೆದೋ ಗಾಡಿಯ ಮೇಲೋ ಬರುವದಕ್ಕಿಂತ ಸ್ವಲ್ಪ ಹೆಚ್ಚು ಕಿಮ್ಮತ್ತು ಕೊಟ್ಟರೂ ಅಲ್ಲೇ ತೆಗೆದುಕೊಂಡರೆ ಸುಖ' ಎನ್ನುವದು ಆ ಸುತ್ತಲಿನ ಹಳ್ಳಿಯವರ ಮತ

ಆ ನಿರ್ಮಲ ಮನಸ್ಸಿನ ಹಳ್ಳಿಯವರು ಈ ಶಪತಿಯ ಮೋಸಕ್ಕೆ ಸಿಗುವದು ದೊಡ್ಡದೇ ? ಸರಿ, ಈಗ ಈತ ಸಾವುಕಾರ ಕೊಟ್ಟ ಸಾಲಕ್ಕಾಗಿ ಅವರ ಆಸ್ತಿ ಬರೆಯಿಸಿಕೊಂಡ.

ಕಪ್ಪಿದ್ದರೂ ತಾರುಣ್ಯಾವಸ್ಥೆಯಲ್ಲವೆ ? ತುಂಬಿ ಕಾಣುತ್ತಿದ್ದ. ಅದೇ ಊರಿನ ಮನೆತನಸ್ಥರೊಬ್ಬರ ಮಗಳು ಲಲಿತೆಯನ್ನು ಮದುವೆಯಾದ

* * * *

ಈಗ ದಾಮಣ್ಣ ಪೇಟೆಯ ಅಡಿಕೆ ದಲಾಲರಲ್ಲೊಬ್ಬ ಅಲ್ಲದೇ ಹಿರಿಯವರಲ್ಲೊಬ್ಬ. ಮೂರು ನಾಲ್ಕು ಜನ ಕಾರಕೂನರು ಬೇಕಾದರೂ ಒಬ್ಬನನ್ನೇ ಇಟ್ಟುಕೊಂಡು ಕೆಲಸ ಸಾಗಿಸುವ. ಮದುವೆಯಿಂದಾಗಿ ವರದಕ್ಷಿಣೆ ಹಣ ಸಿಕ್ಕಿತ್ತು. ಆ ಅಂಗಡಿ ಈ ಅಂಗಡಿ ಇಡುತ್ತ ಈಗ ದೊಡ್ಡವನಾಗಿದ್ದಾನೆ. ಸದಾ ಸಿಟ್ಟಿನಲ್ಲೇ ಇರುವ. ಮಾತನಾಡಿದರೆ ಮೈಮೇಲೆ ಹಾರುವ ಗುಣ. ಏನಾದರೂ ಬೇಡಲು ಬಂದವರು ಇವನನ್ನು ನೋಡಿಯೇ ಓಡುವರು. ಕೆಲಸಗಾರರಿಗಂತೂ ತಲೆ ಎತ್ತುವ ಹಾಗಿಲ್ಲ. ಮದುವೆಯಾದ ಮರುವರ್ಷದಲ್ಲೇ ಅವಳನ್ನು ಕಳಕೊಂಡ. ಹಂಕ ಚಿಕಿತ್ಸೆ ಬೇಡವೇ. ರೋಗ ರುಜೆ ಉಂಟಾದರೆ ? ಸರಿ. ಅಡಿಕೆ ಆರಿಸಲಿಕ್ಕೆ ಬರುವ ಬಡ ಹೆಂಗಳೆಯರ ಮಾನವೊಂದೂ ಉಳಿಯಲಿಲ್ಲ. ಎಲ್ಲರಿಂದಲೂ ಸುಖ ಅನುಭೋಗಿಸಿದ. ರೋಗ ಹಿಡಿಯಿತು. ಆಗ ಮಾತ್ರ ಕೆಲವು ಹಣ ಖರ್ಚು ಮಾಡಿಕೊಂಡು ಬದುಕಿಕೊಂಡ. ದೇಹ ಲಡ್ಡಾಯಿತು. ವಯಸ್ಸು ಕಳೆಯತೊಡಗಿತು. ಹಂಕತನವೇನೂ ಹೋಗಲಿಲ್ಲ. ಮೊದಲಿಗಿಂತ ಅಧಿಕವೇ. ಅದಕ್ಕೆ ಉದಾಹರಣೆ ಅವನ ಮೈಮೇಲಿನ ಹರಕು ಬಟ್ಟೆಗಳೇ !

ಗಾಡಿಯೊಂದು ಬರುತ್ತಿತ್ತು. ಮುಂದೆ ಹೋಗುತ್ತಿದ್ದ ದಾಮಣ್ಣ. ಗಾಡಿಯವ 'ಸರಿಯಿರಿ' ಎಂದ. ಈತ ತನ್ನ ಹಟ ಬಿಡಲಿಲ್ಲ, ಗಾಡಿ ಬದಿಗೇ ಹೋಗಲೆಂದು ಗಾಡಿಯವ ಆದಷ್ಟು ಬದಿಯಲ್ಲಿ ಹೊಡಕೊಂಡ. ಸ್ವಲ್ಪವಾದರೆ

ಇವನ ಕಾಲಮೇಲೆ ಚಕ್ರ ಉರುಳುತ್ತಿತ್ತು. ದಾಮಣ್ಣ ಗಾಡಿಯುವನನ್ನು ತರುಬಿ ಬೈದ, ಗಾಡಿಯನ್ನು ಇನ್ನೂ ಬದಿಗೆ ಒಯ್ಯಬೇಕಿತ್ತೆಂದು; ಗಾಡಿಯುವನು ಒಂದೇಟು ಬಾರಕೋಲಿಂದ ಬಾರಿಸಿ, ಗಾಡಿ ಓಡಿಸಿಕೊಂಡು ನಡೆದ. ದಾಮಣ್ಣ ಹೊಡೆತ ತಿಂದುದನ್ನು ಒಬ್ಬಿಬ್ಬರು ಕಂಡರು. ಆದರೆ ನಡೆದ ತಪ್ಪು-ಕೃತ್ಯ ದೊಡ್ಡವರದು, ಮುಚ್ಚಿಹೋಯಿತು. ಒಮ್ಮೆ, ಸ್ವಲ್ಪ ಜನ ನಗೆಯಾಡಿದರೇನು? ಆವನೀಗ ಧನಿಕ. ಎಷ್ಟು ಜನರ 'ಮನೆ ಮಂಜಾಣ' ಮಾಡಿದ್ದನೊ! ಎರಡು ಲಕ್ಷ ರೂಪಾಯಿ ಧನಿಕ. ಆದರೆ........?

* * * *

ಅಣ್ಣನಿಗಿಂತ ತಮ್ಮ ಹೊಲಸು ಚಟಗಳಲ್ಲಿ ಒಂದು ಕೈ ಮೇಲು. ಭಂಗೀ ಸಪ್ಪು ಸೇದುವ ಚಟವಿದ್ದದ್ದರಿಂದ ದಮ್ಮು ಹಿಡಿದಿದೆ. ಮೊದಲೇ ಅಶಕ್ತನಾಗುತ್ತ ಬಂದಿದ್ದ. ಈಗಂತೂ ಸಂಪೂರ್ಣ ಒಂದು ಗಂಡು, ಒಂದು ಹೆಣ್ಣು ಇವನಿಗೆ. ಪ್ರತಿದಿನ ಹೆಂಡತಿಗೆ ಹೊಡೆತವಿಲ್ಲದೇ ಇಲ್ಲ, ಬರೀ ಕ್ಷುಲ್ಲಕ ಕಾರಣಕ್ಕಾಗಿ.

'ಹೆಂಗಸೆಂದರೆ ದುಡಿಯುವ ಯಂತ್ರ ಗಂಡಸಿನ ಸುಖಕ್ಕಾಗಿ ಆದ ಒಂದು ವಸ್ತು' ಎಂದು ತಿಳಿದವರಲ್ಲೊಬ್ಬ ಮಂಜಪ್ಪ 'ಬೆಳಗಿನಿಂದ ಸಂಜೆಯವರೆಗೆ ಅಡಿಗೆ ಮನೆ. ಆ ಮೇಲೆ ಗಂಡನ ಬದಿ' ಇದು ಹೆಂಗಸರ ಬಗ್ಗೆ ಆವನ ಅಭಿಪ್ರಾಯ. 'ಅವರೂ ಮನುಷ್ಯರು' ಎನ್ನುವದು ಆವನಲ್ಲಿದ್ದಿಲ್ಲ. ಅದು—ಅವನೇ ಮನುಷ್ಯನಾಗಿ ಇರದಿದ್ದುದಕ್ಕಾಗಿ!

ದಮ್ಮು ವಿಪರೀತಕ್ಕೆ ಬಂದಕೂಡಲೇ ಪೇಟೆಗೆ ಬಂದು, ಸಣ್ಣ ಖೋಲಿ ಭಾಡಿಗೆಗೆ ಹಿಡಿದು, ಔಷಧಿ ಮಾಡಿಸಿಕೊಂಡ ಗುಣವಿಲ್ಲ. ಪುನಃ ಹಳ್ಳಿಗೇ ತಿರುಗಿದ. ಈಗಂತೂ ಹೆಂಡತಿಯನ್ನು ಕಂಡರೆ ವಿಷ ಕಾರುತ್ತಿದ್ದ. ನಾಲ್ಕೈದು ದಿನಗಳ ವರೆಗೆ ಕೋಣೆಯಲ್ಲಿ ಹಾಕಿ ಬೀಗ ಹಾಕುವದು; ನಿನ್ನ ಶಸಿ ನನಗೆ ತಾಗಿದೆ ಎನ್ನುವದು; ಅಚೆ ಈಚೆ ಮನೆಯವರು ಬಿಡಿಸಬಂದರೆ 'ನೀನು ಇವಳನ್ನು ಇಟ್ಟುಕೊಳ್ಳುತ್ತೀಯಾ?' ಎಂದುಬಿಡುತ್ತಿದ್ದ.

ಸುಡುಗಾಡಿನಲ್ಲಿ ಮಂಜಪ್ಪ ಬೂದಿಯಾಗತೊಡಗಿದ್ದ ಸುತ್ತಲೂ ಕೆಲ ಜನ ಊರವರು. ಬದಿಯಲ್ಲಿ ಒಂದೇಸವನೆ ತಲೆ ಬಡಿದುಕೊಳ್ಳುತ್ತಿ

ದ್ದಳು ಮಂಜಪ್ಪನ ಹೆಂಡತಿ. ಅವಳ ಸಮೀಪದಲ್ಲಿ ಹತ್ತು ವರ್ಷದ ಮಗ ತಂದೆಯ ಶವವು 'ಚಿಟ್ ಚಿಟ್' ಶಬ್ದ ಮಾಡುವದನ್ನು ಕಣ್ಣು ಕೆಂಪಗೆ ಮಾಡಿಕೊಂಡು ನೋಡುತ್ತಿದ್ದ. ತಂಗಿ ಆರು ವರ್ಷದವಳು ಅಳುತ್ತಿದ್ದಳು; ತಾಯಿ ಅಳುವದನ್ನು ನೋಡಿ.

'ಕೆಟ್ಟವರಿಗೆ ಬೆಟ್ಟವೆಲ್ಲಾ ಕಣ್ಣು' ಎಂತ. ಲಲಿತೆಗೆ ಆ ಊರಿನಲ್ಲಿ ಸಹಾಯಕರಿಲ್ಲ ಎಂದಲ್ಲ; ಅವಳೊಬ್ಬಳು ಸಿದ್ಧಳಾದರೆ ಅವಳ ಕುಟುಂಬವನ್ನೆಲ್ಲ ಸಾಗಿಸಲು ಮುಂದಾಗಿದ್ದಳು. 'ಎಷ್ಟಾದರೂ ಮನೆಯವರಲ್ಲವೆ? ಮೊದಲು ಬೇರೆಯಾಗಿದ್ದರೂ ಈಗಲಾದರೂ ತಮ್ಮ ಮೇಲೆ ದಯ ಹುಟ್ಟಿರಬಹುದು' ಎಂದು ಲಲಿತೆಯ ಮತ. ಅಂತೆಯೇ ಅವಳು ದಾಮಣ್ಣನ ಮನೆ ಸೇರಿದ್ದಳು.

* * * *

ಈಗ ಲಲಿತೆ ಭಿಕಾರಿ. ಮಗ ಮೋಟರ ನಿಲ್ದಾಣದಲ್ಲಿ ಕೂಲಿಮಾಡುವ ಅವನಿಗೀಗ ಹದಿಮೂರು ವರ್ಷ ಮಗಳನ್ನು ಅಲ್ಲೇ ಒಬ್ಬರ ಮನೆಯಲ್ಲಿ ಹುಡುಗರನ್ನಾಡಿಸುವದಕ್ಕೆಂದು ಇಟ್ಟಿದ್ದಳು. ಅವಳಿಗೆ ದಿನಕ್ಕೊಂದು ತುತ್ತು ಅನ್ನ. ವರುಷಕ್ಕೊಂದು ತುಂಡು ವಸ್ತ್ರ ಸಿಗುತ್ತಿತ್ತು. ಲಲಿತೆ ಅಲ್ಲಿ ಇಲ್ಲಿ ಕೆಲಸ ಮಾಡಿಕೊಂಡು ಕಾಲಕಳೆಯುವಳು ಒಂದು ದಿನ ಅನ್ನವಿದ್ದರೆ ಇತ್ತು; ಇಲ್ಲದಿದ್ದರೆ ಇಲ್ಲ. ಸೊರಗಿ ಕಡ್ಡಿಯಾಗಿದ್ದಾಳೆ ಮಗನು ನಿಲ್ದಾಣದಲ್ಲಿರುವ ಕೂಲಿಗಳ ಸಂಗಡ ದುಡಿಯುವದಲ್ಲದೇ ಸೇದುವ ಚಟವನ್ನೂ ಚನ್ನಾಗಿ ಅರಗಿಸಿಕೊಂಡಿದ್ದ. ಉಳಿದವಿನ್ನೂ ಸೇರಿದ್ದಿಲ್ಲ. ಅವನಿನ್ನೂ ಸಣ್ಣವ.

* * * *

ನಿಲ್ದಾಣದಲ್ಲಿ ದೊಡ್ಡದೊಂದು ಜನರ ಗುಂಪು. ಪುನಃ ಅದೇ ಪರಿಚಿತವಾದ ರೋದನ. ರೋದನದಲ್ಲಿ ಆ ವ್ಯಕ್ತಿ ತನ್ನ ಹಿಂದಿನ ಚರಿತ್ರೆಯನ್ನು ಹಲಬುತ್ತಿದ್ದಳು ತನ್ನನ್ನು ಕಷ್ಟಕ್ಕೆ ದೂಡಿದ ವ್ಯಕ್ತಿಯ ಕ್ರೂರತನವನ್ನು, ಹೇಸಿಕೆತನವನ್ನು ತೋಡಿಕೊಳ್ಳುತ್ತಿದ್ದಳು,

ಅವಳ ಮಗ ಅತೀವ ಮಳೆಯಿಂದುಂಟಾದ ನಡುಕದಿಂದ ಬೆರೆತು, ಸೆಟೆದುಹೋಗಿದ್ದ. ಟಿಕೆಟ್ ಆಫೀಸಿನ ಹೊರಕಟ್ಟೆಯಲ್ಲಿ ಮಲಗಿದ್ದನಾದ್ದ

ರಿಂದ ತೊಟ್ಟ ಹರಕು ಚಡ್ಡಿ, ಚಿಂದಿ ಅಂಗಿ ಒದ್ದೆಮುದ್ದೆಯಾಗಿಹೋಗಿತ್ತು. ಅವನಿಗೆ ಉಡಲು-ತೊಡಲು-ಹೊದೆಯಲು ವಸ್ತ್ರವಿಲ್ಲ! ಅವನು ದಿಕ್ಕಿಲ್ಲದ ಲಲಿತೆಯ—ಬಡವೆಯ ಮಗ.

ಈಗ ಅವಳನ್ನು ಸಂತೈಸುವವರಿಲ್ಲ. ಅವಳ ಹಾಳಾದ ಬಾಳನ್ನು ಏಳಿಸುವವರಿಲ್ಲ. ಮಗನ ಕಳಕೊಂಡ ತಾಯ್ಗರುಳಿಗೆ ಹನಿಮಾತ್ರವೂ ತನಿಸುಧೆಯನೀವರಿಲ್ಲ. ಸುತ್ತಲಿನ ಒಬ್ಬಿಬ್ಬರು ಹುಡುಗನ ಮೈಗೆ ಬಿಸಿ ಬೂದಿ ಹಚ್ಚಿ ತಿಕ್ಕಿದರು ಪ್ರಯೋಜನವಾಗಲಿಲ್ಲ ಇನ್ನಾರಿಗಾಗಿ ಅವಳು ಜೀವ ಹಿಡಿದಿರುವಳು ? ಬದುಕಿರುವಳು ?

* * * *

ಲಲಿತೆಯ ನೊಂದ ಹೃದಯದ ಶಾಪ ದಾಮಣ್ಣನಿಗೆ ತಟ್ಟಿತೋ ಇಲ್ಲವೋ! 'ತಟ್ಟಿದೆ' ಎಂದರೆ ಕೇಳುವವರಾರು ?

ಅದೂ ಅವಳು, ಅವಳ ಕರಳುಗಳು ದಾಮಣ್ಣನ ಸಾಗುತ್ತಿರುವ ಸಂಸಾರ ರಥದ ಗಾಲಿಯ ಅಡಿಯಲ್ಲಿ ಸಿಕ್ಕು, ನುಚ್ಚುನೂರಾಗುತ್ತಿರುವಾಗ—! ತಿಪ್ಪೆಯ ಗುಂಡಿಯ ಬದಿಯಲ್ಲಿ ಹುಳಹುಪ್ಪಡಿಗಳ ಆಗರವಾಗಿರುವಾ—!

ಆದರೆ........?

ದಾಮಣ್ಣನ ಸಂಸಾರ ರಥ ಕಡೆಗೂ ಏರುವವನಿಲ್ಲದ ಬರಡು ರಥವೇ ಎಂದು ಆ ಹೆಣ್ಣು ಹೃದಯ ಕ್ರೌರ್ಯದ ಕಾವಿನಿಂದ ನೊಂದು-ಬೆಂದು, ರೊಚ್ಚಿಗೆದ್ದು, ಕಡೆಗೆ ಅಲ್ಪ ಸಮಾಧಾನದಿಂದ ಉಳಿಯಿತು!

---

# ದೇವರು ಕ್ಷಮಿಸಿರುವ

★

"ಪಾಪ! ಅವಳ ಜೀವನದ ಗತಿ ಇನ್ನು ಮುಗಿಯಿತೆಂದೇ ಆಯಿತು. ಇನ್ನು ನಾಯಿಗಿಂತ ಕೀಳು ಅವಳ ಬಾಳು" ಕಳಕಳಿಯಿಂದ ನುಡಿದರು ಫಾದ್ರಿಗಳು.

ಅವರ ಪ್ರಿಯಶಿಷ್ಯನೋರ್ವ ಇತ್ತಲಾಗಿ ಊರಿನಲ್ಲಿ ನಡೆದ ಕಳವು, ಅತ್ಯಾಚಾರದ ವಿಷಯಗಳನ್ನು ತನಗೆ ತಿಳಿದಂತೆ ಹೇಳುತ್ತಿದ್ದ. ಮೂರು ನಾಲ್ಕು ಸುದ್ದಿ ಮುಗಿದು ನಿನ್ನೆ ಮೊನ್ನೆ ತರುಣಿಯೋರ್ವಳ ಮೇಲೆ ನಡೆದ ಅಮಾನುಷ ಅತ್ಯಾಚಾರದ ವಿಷಯ ಬಂದಿತ್ತು.

"ಅವಳನ್ನು ರಾತ್ರಿ ಮನೆಯಿಂದ ಯಾರೋ ಕೆಲವರು ಎತ್ತಿಕೊಂಡು ಹೋಗಿ, ಅವರಿಂದ ಎಷ್ಟು ಸಾಧ್ಯವಿದೆಯೋ ಅಷ್ಟು ಅತ್ಯಾಚಾರ ಮಾಡಿ, ಅಡವಿಯ ಮಟ್ಟಿಯೊಂದರಲ್ಲಿ ಒಗೆದಿದ್ದರಂತೆ ದನ ಕಾಯುವವರು ಕಂಡು ಸುದ್ದಿ ಹರಡಿದರು. ಈಗ ಅವಳನ್ನು ತಂದು ಆಸ್ಪತ್ರೆಗೆ ಸೇರಿಸಿದ್ದಾರೆ." ಎಂದು ವಿವರಿಸಿದ.

ಆದಕ್ಕೇ ಫಾದ್ರಿಗಳು “ ನಾಯಿಮುಟ್ಟಿದ ತಿನಸಿನಂತಾಯಿತು ಅವಳ ಗತಿ. ಅವಳ ಪಾಲಿಗೆ ಬಾಳು ಇನ್ನು ಹಾಳೇ ! ” ಎಂದು ಮತ್ತೆ ನುಡಿದರು.

“ ಮತ್ತೆ ಇನ್ನೊಂದು ಸುದ್ದಿ ಫಾದರ್ ನಮ್ಮ ಸಾವೇರ....” ಎಂದು ಅತ್ತಿತ್ತ ನೋಡಿದ. ತಮ್ಮ ಕಡೆಗೇ ಯಾರೊ ಬರುವಂತೆ ಕಂಡದ್ದರಿಂದ ಫಾದ್ರಿಗಳ ಕಿವಿಯಲ್ಲಿ ಏನನ್ನೋ ಉಸುರಿದ.

ಫಾದ್ರಿಗಳ ಮೋರೆ ವಿಲಕ್ಷಣವಾಯಿತು. ತುಂಬಿದಉಸುರಿನ ಹುಂಕಾರದೊಂದಿಗೆ ತಮ್ಮ ಕೊರಳಿಗಿದ್ದ ಸಿಲುಬೆಯ ಪ್ರತಿಮೆಯನ್ನು ಕೈಬೆಟ್ಟುಗಳಿಂದ ಆಡಿಸುತ್ತ ಕೆಳಮೋರೆ ಹಾಕಿದರು. ಕ್ಷಣಹೊತ್ತು ಅತ್ತಿಂದಿತ್ತ-ಇತ್ತಿಂದತ್ತ ತಿರುಗಿದಂತೆ ಮಾಡಿ, “ ಇನ್ನು ನೀನು ಹೋಗಬಹುದು ” ಎಂದು ನುಡಿದು ಮಂದಿರಕ್ಕೆ ನಡೆದರು.

* * * *

ಫಾದ್ರಿಗಳಿಗೆ ಮಕ್ಕಳೆಂದರೆ ಪ್ರೀತಿ. ಅದರಲ್ಲೂ ಬಡವ, ವಿನಯಶೀಲ ಸಾವೇರನನ್ನು ಕಂಡರೆ ಬಹು ಮಮತೆ. ಮಂದಿರಕ್ಕೆ ಪ್ರಾರ್ಥನೆಗೆಂದು ಬಂದ ಸಾವೇರನಿಗೆ ಒಮ್ಮೆ ಅವರು ಕೇಳಿದರು.

“ ಸಾವೇರ್ ನಿನಗೆ ನನ್ನಲ್ಲಿ ನಂಬಿಕೆ ಇದೆಯೇ ? ”

“ ಇದೆ ಫಾದರ್ ” ( Father )

“ ಈ ಮಾತನ್ನು ಸಂತೋಷವಾಗಿ ಹೇಳುತ್ತೀಯಾ ? ” ನಕ್ಕು ಕೇಳಿದರು ಫಾದ್ರಿಗಳು.

“ ಹೌದು ಫಾದರ್ ”

“ ಆಗಲಿ, ಸಂತೋಷ. ನಾಳೆ ಬರುತ್ತೀಯಾ ? ”

“ ಬಂದೇ ಬರುತ್ತೇನೆ ಫಾದರ್ ”

ಸಾವೇರ ಹೊರಟುಹೋದ. ಸಂತೋಷ, ನಂಬಿಕೆ ಮುಂತಾದವುಗಳ ಮಾತೆತ್ತಿ ಒಮ್ಮೆಲೇ ‘ ನಾಳೆ ಬರುತ್ತೀಯಾ ’ ಎಂದು ಕೇಳಿದ್ದರಿಂದ ಸಾವೇರನಿಗೆ ಏನೋ ಒಂದು ತರಹವಾಯಿತು. ಆದರೆ ಅದನ್ನೆಲ್ಲ ಕೂಲಂಕುಷ ವಿಚಾರಮಾಡುವ, ವಿಚಾರಮಾಡಿ ಒರೆಗಲ್ಲಿನ ಸಿದ್ಧಾಂತ ಮಾಡಿಕೊಳ್ಳುವ ವಯಸ್ಸಾಗಿರಲಿಲ್ಲ ಇನ್ನೂ ಹದಿಮೂರು.

ಸಾವೇರ ಬಡಹುಡುಗ. ತಂದೆ-ತಾಯಿಗಳೂ ಬಡವರು. ಅವರಿಗೆ ತಮ್ಮದೆಂದು ಯಾವ ಆಸ್ತಿಯೂ ಇರಲಿಲ್ಲ. ತಾಯಿ ಕಟ್ಟಿಗೆ ತರುವದು, ಅಡಿಕೆ ಆರಿಸಲು ಹೋಗುವದು, ಇಲ್ಲವಾದಲ್ಲಿ ಅಲ್ಲಿ-ಇಲ್ಲಿ ಪಡಿಚಾಕರಿಗೆ ಹೋಗುತ್ತಿದ್ದಳು. ತಂದೆ ಕಲ್ಲು ಕಟ್ಟುವದು, ಗಾರುಮಾಡುವದು, ಮುಂತಾದ ಕೆಲಸಗಳನ್ನು ಮಾಡುತ್ತಿದ್ದ. ಅಂತು ಅವರು ಹಾಗೂ ಹೀಗೂ ಇಡೀ ವರುಷ ಉಣ್ಣುತ್ತಿದ್ದರು; ಒಂದು ತುಂಡು ವಸ್ತ್ರ ಉಡುತ್ತಿದ್ದರು. ಅವರು ಅಲ್ಲಿ ಇಲ್ಲಿ ಬೇಡಿ-ಕಾಡಿ ಮಗನಿಗೆ ಶಾಲೋಪಯೋಗಿ ಪುಸ್ತಕಗಳನ್ನು ಒದಗಿಸುತ್ತಿದ್ದರು. ಇನ್ನು, ಮಗನಿಗೆ ಹೆಚ್ಚಿಗೆ ಬೇಕಾದ ಖರ್ಚಿಗೆಲ್ಲ—ಶಾಲೆಗೆ ಸೇರಿಸಲು, ವಿದ್ಯೆ ಕಲಿಸಲು ಕಾರಣರಾದ ಫಾದ್ರಿಗಳು ನೋಡಿಕೊಳ್ಳುತ್ತಿದ್ದರು. ಹಾಗಾಗಿ, ಸಾವೇರನ ತಂದೆ-ತಾಯಿಗಳು ಫಾದ್ರಿಗಳನ್ನು ಪ್ರತ್ಯಕ್ಷ ಏಸುವೆಂದೇ ತಿಳಿದಿದ್ದರು. ಮಗನಿಗೂ ಹಾಗೇ ಹೇಳುತ್ತಿದ್ದರು. ನಿಲುಗಡೆಯ ಪೂರ್ಣತೆಯನ್ನು ಹುಡುಕುವ ಎಳೆವಯಸ್ಸಿನ ಕುತೂಹಲಿನ ಸಾವೇರನ ಮನಸ್ಸಿನಲ್ಲಿ ಅದು ನಿಲ್ಲುತ್ತಿತ್ತು. ಆದುದರಿಂದ ಅವನು ದಿನವೂ ಪ್ರಾರ್ಥನಾಮಂದಿರಕ್ಕೆ ಹೋಗುತ್ತಿದ್ದ. ಎಲ್ಲೋ ಸಂಗಡಿಗರು ಸಿಕ್ಕು ಎಳೆದುಕೊಂಡು ಹೋದಾಗ ಮಾತ್ರ ಹೋಗುತ್ತಿದ್ದಿಲ್ಲ!

ಬರುತ್ತೇನೆಂದು ಹೇಳಿದಂತೆ ಸಾವೇರ ಮರುದಿನ ಪ್ರಾರ್ಥನಾಮಂದಿರಕ್ಕೆಂದು ಹೋದ. ಫಾದ್ರಿಗಳು ಹೊರ ಅಂಗಣದಲ್ಲಿ ಯೋಚಿಸುತ್ತ ನಿಂತಿದ್ದರು ಸಾವೇರನನ್ನು ಮುಗುಳು ನಗುತ್ತ ಸ್ವಾಗತಿಸಿದರು. ಅಭ್ಯಾಸ ವಿಷಯಗಳ ಕುರಿತು ಮಾತನಾಡಿದರು. ಒಳಗೆ ಕರೆದೊಯ್ದರು. ತಟ್ಟನೆ ನಿಂತರು. ಗಂಭೀರ, ಮಿದುನಗೆಯ ಭಾವ ಮೋರೆಯಲ್ಲಿ ನೆಲೆನಿಂತಿತು. ಆಗ ಮುನ್ನ ಕೇಳಿದಂತೆ ಕೇಳಿದರು.

“ ಸಾವೇರ್, ನಿನಗೆ ನನ್ನಲ್ಲಿ ನಂಬಿಕೆ ಇದೆಯೋ ? ”

“ ಇದೆ ಫಾದರ್ ”

“ ಹೋಗಲಿ ಸಾವೇರ್. ಈ ಸಿಲುಬೆಯಲ್ಲಿ ನಂಬಿಕೆ ಇದೆಯೋ ? ”

“ ಎಂದರೆ.... ಅರ್ಥವಾಗಲಿಲ್ಲವಲ್ಲ ಫಾದರ್ ”

“ ಅರ್ಥವಾಗಲಿಲ್ಲವೇ ಮಗು? ನೋಡು—ದೇವರಲ್ಲಿ ನಂಬಿಕೆ, ವಿಶ್ವಾಸ, ಪ್ರೇಮ, ಭಕ್ತಿ—ಇದೆಯೋ ಎಂದು. ಅರ್ಥವಾಯಿತೆ ? ”

“ ಓಹೋ ! ಅರಿತುಕೊಂಡೆ ಫಾದರ್ ”

“ ಹಾಗಾದರೆ ನೀನು ಯಾವಾಗಲೂ ನಿಜವನ್ನು ಹೇಳುತ್ತೀ ಎಂದು ನಂಬುತ್ತೇನೆ ! ”

“ ಅದ್ದಿ ಇಲ್ಲ ಫಾದರ್ ”

“ ಹಾಗಾದರೆ—ನೀನು ಜಾಕಿಯ ಪುಸ್ತಕವನ್ನೇಕೆ ತೆಗೆದೆ ? ”

“ ........................”

“ ಹೇಳು ಸಾವೇರ್, ಸುಮ್ಮನಿರುವೆಯೇಕೆ ? ”

“ ನನಗಿಲ್ಲವಾಗಿತ್ತು; ಅದಕ್ಕೇ ತೆಗೆದು ಅವರ ಬಾಯಿಂಡುಗಳನ್ನು ಕಿತ್ತೊಗೆದೆ ” ಸಾವೇರನ ಧ್ವನಿ ಕಂಪಿಸುತ್ತಿತ್ತು. ವೃದ್ಧ ಫಾದ್ರಿಗಳು ಸಾವೇರನನ್ನು ಹತ್ತಿರ ಎಳೆದುಕೊಂಡರು.

“ ದಿಟ ಹೇಳುತ್ತೇನೆಂದೆಯಲ್ಲ ! ಎಲ್ಲಿ ಹೇಳಿದೆ ? ”

“ ಹೇಳಿದೆನಲ್ಲ ಫಾದರ್ ”

“ ಸಾವೇರ್, ತೆಗೆದುಕೊಂಡು ಸುಳ್ಳು ಹೇಳಿದೆಯಂತೆ ‘ ಇಲ್ಲ ’ ಎಂದು ನೀನು ವಿದ್ಯಾರ್ಥಿಯೇ ? ಮಾನವನೇ ? ” ಧ್ವನಿ ಹೃದಯದ ಆಳದಿಂದ ಬರುತ್ತಿತ್ತು. ಗಂಭೀರವಾಗಿ, ಮೊನೆಯಾಗಿ. ತಂಬೂರಿಯ ಮಂದರಸ್ವರ ತಂತಿಯನ್ನು ನಾದಗೈದಂತೆ ಮನದ ಭಿತ್ತಿಯನ್ನು ಅಲುಗಿಸಿ, ಭಾವನೆಯನ್ನು ಎಚ್ಚರಗೊಳಿಸುತ್ತಲಿತ್ತು.

ಮಂದಿರ ತಿರುಧ್ವನಿಯನ್ನಿಯಿತು !

“ ವಿದ್ಯಾರ್ಥಿಯೆ ? ಮನುಷ್ಯನೆ ? ”

ಮಾತಿನ ಅರ್ಥದ ಮಾರ್ಮಿಕತೆ ಸಾವೇರನನ್ನು ಮುಟ್ಟದಿದ್ದರೂ, ಮಾತಿನ ಮೊನೆಯ ಮಾರ್ಮಿಕತೆ ಸಾವೇರನನ್ನು ಮುಟ್ಟಿತ್ತು, ಚುಚ್ಚಿತ್ತು.

ಈ ಬಾರಿ ಸಾವೇರ ಫಾದ್ರಿಗಳ ಕಾಲಿಗೆ ಬಿದ್ದ.

“ ಸುಳ್ಳು ಹೇಳಿದುದು ನಿಜ ಫಾದರ್. ಇನ್ನು ಹಾಗೆ ಮಾಡುವದಿಲ್ಲ ”

“ ದೇವರು ನಿನ್ನನ್ನು ಕ್ಷಮಿಸಿರುವನು ಮಗು. ಆದರೆ ನೀನಿನ್ನು ಹಾಗೆ ಮಾಡಲಾರೆಯಷ್ಟೇ ? ಸುಳ್ಳು ಹೇಳಲಾರೆಯಷ್ಟೇ ? ”

“ ಖಂಡಿತವಾಗಿಯೂ ಮಾಡುವದಿಲ್ಲ ”

“ ಖಂಡಿತವಾಗಿಯೂ ! ”

ಹರಿಯುತ್ತಿರುವ ಕಣ್ಣೀರನ್ನು ಫಾದ್ರಿಗಳು ಒರೆಸಿ ಸಾವೇರನನ್ನು ಹರಿಸಿ ಕಳುಹಿದರು.

—ಹೀಗೆ ಫಾದ್ರಿಗಳು ಒಂದಲ್ಲ ಹಲವು ರೀತಿಯಿಂದ ಸಾವೇರನನ್ನು ಕಟೆದು ಶುದ್ಧ ಮೂರ್ತಿಯನ್ನಾಗಿ ಮಾಡಲು ಯತ್ನಿಸುತ್ತಿದ್ದರು. ಅವರಿಗೆ ಸಾವೇರನನ್ನು ಬಡವನೊಬ್ಬನನ್ನು ಮನುಷ್ಯನನ್ನಾಗಿ ಮಾಡಬೇಕೆಂಬ ಹಂಬಲ.

ಮತ್ತೆ ಕೆಲವು ತಿಂಗಳ ಕಳೆದ ಮೇಲೆ ಅವರು ಸಾವೇರನಿಗೆ ಕೇಳಿದರು.

"ಸಾವೇರ್, ವಿದ್ಯಾರ್ಥಿಯಾದೆಯಾ ?"

" ಆಗುತ್ತಿದ್ದೇನೆ ಗುರುಗಳೇ " ಎಂದು ವಂದಿಸಿದ.

" ವಿದ್ಯಾರ್ಥಿಯಾಗುತ್ತಿ ಸಾವೇರ್, ಹೆದರಬೇಡ. ಆದರೆ........ ಸಾವೇರ್, ಶಾಲೆಗೆ ವೇಳೆಯಾಯಿತು ನಡೆ. " ಎಂದು ಅವನನ್ನು ಕಳುಹಿದರು.

" ಆದರೆ....ಮಾನವನಾಗಬೇಕಾದರೆ– ಆ ಹಾದಿಯಲ್ಲಿ ಬರುವ ಸಂಕಟಗಳನ್ನು ಎದುರಿಸುವ ಲೋಹದ ಕಟೆದ ಗಟ್ಟಿಯಾದ ಮೂರ್ತಿಯಾಗಬೇಕಾದರೆ—ಇನ್ನೂ ಬಹಳಷ್ಟಿದೆ ಸಾವೇರ್. ಲೋಹವು ಕಾದುಕಾದು, ಕೆಂಪಗಾಗಿ, ಸುತ್ತಿಗೆಯ ಅನೇಕ ಬಡಿತಗಳನ್ನು ತಿಂದು, ಮಣಿದು ಸಲಕರಣೆಯಾಗಬೇಕಾಗುತ್ತದೆ ! " ಎನ್ನುತ್ತ ಕೊರಳಿಗಿದ್ದ ಸಿಲುಬೆಯ ಪ್ರತಿಮೆಯನ್ನು ಕೈಯಿಂದ ತಿಕ್ಕತೊಡಗಿದರು.

* * * *

ಸತ್ತ ತಂದೆ ತಾಯಿಗಳ ಅಂತಿಮ ಛಾಯಾ ಚಿತ್ರಕ್ಕೆ ಸಹಿತ ಸಾವೇರನಲ್ಲಿ ಹಣವಿದ್ದಿಲ್ಲ. ಅದು ಅವರಲ್ಲಿ ಸಾಮಾನ್ಯ ರೂಢಿಯಾಗಿದ್ದಿತಾದ್ದರಿಂದ ತೆಗೆಯಿಸಲೇ ಬೇಕಾಗಿತ್ತು. ಆಗ ಫಾದ್ರಿಗಳು ತಾವೇ ಕೊಡಿಸುತ್ತೇವೆಂದು ಛಾಯಾಚಿತ್ರ ತೆಗೆಯಿಸಿದ್ದರು.

ಸಾವೇರನಿಗೀಗ ಹದಿನೆಂಟನೆಯ ವರುಷ. ಅವನ ವಿದ್ಯಾರ್ಥಿ ಜೀವನ ಕಳೆದು ಎರಡು ವರ್ಷಗಳು ಸಂದಿವೆ. ವಿದ್ಯಾರ್ಥಿ ಜೀವನ ಸಂದಂದಿನಿಂದ ಸಾವೇರ ಫಾದ್ರಿಗಳ ಬಳಿಗೆ ಹೋಗುವದನ್ನು ಕಡಿಮೆ ಮಾಡಿದ್ದನು. ಕಡೆಕಡೆ

ಹೋಗುತ್ತಲೇ ಇರಲಿಲ್ಲ. ಎಷ್ಟೆಂದರೂ ಅವನು ಒಬ್ಬಂಟಿಗ. ಸ್ವತಂತ್ರ. ಅವನ ಗುಡಿಸಲು ಅವನನ್ನು ಳಿದು ಸುಮ್ಮನೆ ಉಳಿದಿತ್ತು. ಅವನು ಊರ ಮೇಲೇ ! ಅವನನ್ನು ಊರ ಪುಂಡರು ತಮ್ಮೆಡೆಗೆ ಆಗಲೇ ಎಳೆದುಕೊಂಡಿದ್ದರು.

ಫಾದ್ರಿಗಳು ಅನೇಕ ಸಾರೆ ಅವರಿವರ ಹತ್ತಿರ ಸಾವೇರನಿಗೆ ಕರೆಯ ಕಳುಹಿದರು. ಅವನು ಸಿಗುತ್ತಿದ್ದಿಲ್ಲ. ಎಲ್ಲಿರುತ್ತಿದ್ದನೋ !

"ಹುಂ, ಕಬ್ಬಿಣಕ್ಕೆ ಉರಿ ತಾಗಲಿ !" ಎಂದುಕೊಂಡು ಅವರು ಸುಮ್ಮನುಳಿಯುತ್ತಿದ್ದರು. ಆದರೆ ಅವರಿವರ ಬಾಯಿಯಿಂದ ಸಾವೇರನ ಬಗ್ಗೆ ಕಟುಮಾತುಗಳನ್ನು ಕೇಳಿದಾಗ ಅವರಿಗೆ ಬಹು ಸಂಕಟವಾಗುತ್ತಿತ್ತು. ಸಾವೇರನ ತಂದೆ-ತಾಯಿಗಳ ಚಿತ್ರ ಅವರ ಬಳಿಯಲ್ಲೇ ಇತ್ತು. ಅದನ್ನು ಕಂಡಾಗ ಒಮ್ಮೊಮ್ಮೆ ಅವರು,

"ಸಾವೇರ್, ನೀನು ಮನುಷ್ಯನಾಗುವಿ, ಆಗುತ್ತೀ ಎಂಬ ಭರವಸೆ ಇದೆ ನನಗೆ" ಎಂದು ತಮ್ಮಷ್ಟಕ್ಕೆ ಹೇಳಿಕೊಳ್ಳುತ್ತಿದ್ದರು. ಆ ಹೇಳಿಕೆ ಅವರ ಆತ್ಮವಿಶ್ವಾಸವನ್ನು ಧೃಡಪಡಿಸುತ್ತಿತ್ತು.

* * * *

ಸಾವೇರ ಇಷ್ಟರಲ್ಲಿ ಒಂದೆರಡು ಸಾರೆ ಕಚೇರಿಯ ಪಂಜರವನ್ನು ಕಂಡು ಬಂದಿದ್ದ. 'ದೇವರಾಣೆ ಮಾಡಿ ಖರೇ ಹೇಳ್ತೇನೆ' ಎಂದು ಹೇಳಿಸುವ ರೂಢಿ ಎಂದು ಅರಿತಿದ್ದ. ಹೊರತೂ ಆ ಮಾತಿಗೆ—ಪ್ರತಿಜ್ಞೆಗೆ ಬೆಲೆಯನ್ನೇ ಕೊಡಲಿಲ್ಲ. 'ದೇವರಾಣೆ ಮಾಡಿ ಖರೇ ಹೇಳ್ತೇನೆ' ಎಂಬ ಮೊದಲ ಪ್ರತಿಜ್ಞೆಯಿಂದ ಸುಳ್ಳು ಹೇಳುತ್ತ 'ದೇವರಾಣೆಯಾಗಿಯೂ ಸುಳ್ಳನ್ನೇ ಹೇಳಿದ್ದೇನೆ' ಎಂದು ಮನಸ್ಸಿನಲ್ಲೆಂದುಕೊಂಡು ಮುಗಿಸುತ್ತಿದ್ದ. ಅಂತೂ ಲಂಚ, ವಕೀಲಿ, ಮುಂತಾದವುಗಳ ವರಪ್ರಸಾದದಿಂದ ಎರಡು ಸಾರೆಯೂ ತಪ್ಪಿಸಿಕೊಂಡಿದ್ದ. ಈಗ ಸಾವೇರನ ಕೈ ಕಾಸ ಕುಣಿಸುತ್ತಿತ್ತು. ಸಂಗಡ ವಯಸ್ಸೂ ಅದಕ್ಕೆ ತಾಳ ಹಾಕುತ್ತಲಿತ್ತು.

ನೆರೆ ಗುಡಿಸಲಿಗೆ ಅವರ ಸಂಬಂಧಿಕರಲ್ಲೊಬ್ಬಳು ತರುಣಿ ಬಂದಿದ್ದಳು ಅದನ್ನು ತಿಳಿದು, ಏನೋ ಗುಂಗನ್ನು ಮೆಲುಕು ಹಾಕುತ್ತ ತನ್ನ ಗುಡಿಸಲಿನಲ್ಲೇ ಇತ್ತಲಾಗಿ ಸಾವೇರ ಇರುತ್ತಿದ್ದ. ಒಮ್ಮೆ, ಸುಮ್ಮನೆ ಮಲಗಿದಾಗ—

ಅವನಿಗೆ ತನ್ನ ತಂದೆ-ತಾಯಿಗಳ ನೆನಪು ಬಂದಿತು. ಅಂದೇ ಹಣವನ್ನು ಕೊಟ್ಟು ಕಳುಹಿ ಫಾದ್ರಿಗಳಿಂದ ಛಾಯಾಚಿತ್ರ ತರಿಸಿದ. ಅಂದು ಸಾವೇರನ ಗುಡಿಸಲಿನಲ್ಲಿ ನಾಲ್ಕು ಮೇಣಬತ್ತಿಗಳು ಉರಿದವು. ನಾಲ್ಕಾರು ದೂಪದ ಕಡ್ಡಿಗಳು ಸುವಾಸನೆ ಬೀರುತ್ತ ಕದಡಿದ ಮನವ ಸುತ್ತಿ, ಮಂತ್ರ ಮುಗ್ಧತೆಗೆ ಎಳೆದವು.

ತಂದೆ-ತಾಯಿಗಳ ಅಂತಿಮ ಛಾಯಾಚಿತ್ರವನ್ನು ನೋಡುತ್ತ ನೋಡುತ್ತ ಸಾವೇರನಿಗೇನೇನೋ ಎನಿಸಿತು. ‘ ಊಹುಂ ’ ಎಂದು ಎದೆಯನ್ನು ಚಚ್ಚಿಕೊಳ್ಳುತ್ತ ಅತ್ತಿತ್ತ ನೋಡಿದ. ಏನೇನನ್ನೋ ನೆನಪುಮಾಡಿಕೊಂಡ. ಆದರೂ ಸಹಜವಾಗಿ ದಿಟ್ಟಿ ಛಾಯಾಚಿತ್ರದ ಕಡೆಗೇ ತಿರುಗಿತು. ಹಾಗೇ ತನ್ನಿರವನ್ನೊಮ್ಮೆ ಮರೆತ.

“ನಿರ್ಗತಿಕನಾಗುವೆಯಲ್ಲ ಸಾವೇರ್ ! ಇನ್ನು ನಿನ್ನ ಸಲಹುವರಾರು ? .... ...ಗುರುಗಳು ನಿನ್ನನ್ನು ರಕ್ಷಿಸುವರು ಅವರ ಅಪ್ಪಣೆಯಂತೆ ವರ್ತಿಸು. ನಿನಗೆ ದೇವರು ಒಳ್ಳೇಯದನ್ನು ಮಾಡುವನು ... .. ಮರೆಯಬೇಡ ಸಾವೇರ್” ಎಂದು ತಾಯಿ ತನ್ನ ಕೈ ಹಿಡಿದುಕೊಂಡು ಕಡೆಯದಾಗಿ ಹರಸಿ ಹೇಳಿದುದು ನೆನಪಾಯಿತು. ಅದು ಹೃದಯವನ್ನು ಕದಡಿಬಿಟ್ಟಿತು. ಅಂತಃ ಮಥನದಿಂದ ಕದಡಿದ ಭಾವನೀರು ನೊರೆಗಟ್ಟಿ ಹೊರಚೆಲ್ಲತೊಡಗಿತು. ಹೊರಚೆಲ್ಲಿ ಮೈಯ ತಿಳುವಿಗೆ ಎಳೆಯಿತು. ಆಗ ಮನಸ್ಸು ಹಲವ ಹಲವರಿಯ ತೊಡಗಿತು

“ ಗುರುಗಳು........! ಛೀ. ಇನ್ನು ಮಾಡುವದಿಲ್ಲ ” ಎಂದು ಗೋಗರೆಯಿತು.

•

ಮರುದಿನ ಸಾವೇರನನ್ನು ಪ್ರಾರ್ಥನಾಮಂದಿರದಲ್ಲಿ ಕಂಡ ಗುರುಗಳು.

“ಹೋಗುವಾಗ ಸಿಕ್ಕುಹೋಗು ! ” ಎಂದರು. ಕಲಿತ ಕಪಟ ಕಾಲನ್ನು ಪೇಟೆಯೆಡೆಗೆ ಎಳೆದರೆ, ವಿನೀತ ಹೃದಯ ‘ಅಷ್ಟೂ ಮನಸ್ಸಿನ ಹಿಡಿತವಿಲ್ಲವೇ ನಿನಗೆ ? ಒಮ್ಮೆ ಸಿಕ್ಕುಹೋಗಪ್ಪಾ ’ ಎಂದು ಬೇಡಿಕೊಳ್ಳುತ್ತಿತ್ತು.

“ಸಾವೇರ್, ಚಂದಾಗಿರುವೆಯಾ ? ” ಮೊಳಗುವ ಮಂದಿರದಲ್ಲಿ ಬೀಸು ಹೆಜ್ಜೆ ಇಡುತ್ತ, ನಿಧಾನವಾಗಿ ಬರುತ್ತ ಕೇಳಿದರು.

“.........ಇದ್ದೇನೆ ”

" ನಮ್ಮನ್ನೆಲ್ಲ ಮರೆತರೂ ಈ ಮಹಾಪುರುಷನನ್ನು ಮರೆತಿಲ್ಲವಲ್ಲ! ಅದೇ ಆನಂದದ ವಿಷಯ " ಎಂದು ಏಸುವಿನ ಮೂರ್ತಿಯನ್ನು ತೋರಿಸಿ, ದೃಷ್ಟಿಸಿದರು. ಹಾಗೇ ಸಾವೇರನ ಕೈಯನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು. ಕೇಳಿದರು—

" ಸಾವೇರ್, ನಾಲ್ಕೈದು ವರ್ಷಗಳ ಹಿಂದಿನದೊಂದು ದಿನ ನೆನಪಿದೆಯೇ ? "

" ಯಾವ ದಿನ ಗುರುಗಳೇ ? " ಕಲಿತ ಕಪಟ ಗುಟುಕರಿಸಿತು.

" ನೆನಪಿಲ್ಲವೇ ? ಹೋಗಲಿ ಬಿಡು. ಏನು ಮಾಡುತ್ತಿರುವೆ ಈಗ ? "

" ಏ.........ನಿ.........ಲ್ಲ, ಸಹಜ ಇದ್ದೇನೆ "

" ಸಹಜ ಇದ್ದೀಯಾ ? " ಮಾತು ಮೊನೆಯಾಗಿತ್ತು. ಮತ್ತೆ ಮೃದುವಾಗಿ—

" ಬಾ, ಸಾವೇರ್ " ಎಂದು ಕರೆದು, ಅವನನ್ನಪ್ಪಿದರು.

ಈಗ ಮಾತ್ರ ಸಾವೇರನ ಇಡೀ ದೇಹ ಕಂಪಿಸತೊಡಗಿತು. ಅಲ್ಲೇ ಕುಸಿದುಬೀಳುವಂತಾಯಿತು ಅವನಿಗೆ. ಫಾದ್ರಿಗಳ ರೂಪು ಮಂಜಿನಂತೆ ಸೇರಿ ಮರೆಯಾದಂತೆ ಅವನಿಗೆ ಕಂಡಿತು !

" ಸಾವೇರ್, ಬಹು ಹೆದರಿದೆಯಲ್ಲಾ ! ಏನಾಯಿತು ? "

" ಏ............ಏನಿಲ್ಲ "

" ತಿಳಿಯಿತು ಸಾವೇರ್, ಹೆದರಬೇಡ " ಎಂದು ಸಂತೈಸಿದರು. ಸ್ವಲ್ಪ ತಡೆದು,

" ಸಾವೇರ್, ನಿನಗೆ ನನ್ನಲ್ಲಿ ನಂಬಿಕೆ ಇದೆಯೇ ? " ಕೇಳಿದರು.

ನಾಲ್ಕೈದು ವರ್ಷಗಳ ಹಿಂದಿನದೊಂದು ದಿನದ ನೆನಪನ್ನು ಹೃದಯದ ಭಾವತಂತಿ ಮಿಡಿದು ಎಚ್ಚರಿಸಿತು !

" ಹ್ಞ.........ಹ್ಞಾ ! ಇದೆ ಗುರುಗಳೇ "

" ಹಾಗಾದರೆ ನೀನು ಸುಳ್ಳು ಹೇಳುವದಿಲ್ಲ ? "

ಸಾವೇರ ಮಾತನಾಡಲಿಲ್ಲ !

" ನಿನಗೆ ನಿನ್ನ ತಂದೆ-ತಾಯಿಗಳ, ನಿನ್ನ ಗುರುಗಳ, ನಿನ್ನ ದೇವರ ನೆನಪಾಗುವದಿಲ್ಲವೆ ? "

" ಆಗುತ್ತದೆ "

" ಹಾಗಾದರೆ— ನಿನ್ನ ಕೃತ್ಯಗಳಿಗೂ ಅವುಗಳಿಗೂ ಹೋಲಿಸಿದೆಯಾ ? ಅವರೆಲ್ಲ ನಿನ್ನ ಸಲುವಾಗಿ ಎಷ್ಟು ಕಷ್ಟ ಪಟ್ಟಿರುವರೆಂದು ಅರಿತಿರುವೆಯಾ ? "

" ಅರಿ....ತಿ....ರು....ವೆ "

" ಹಾಗಾದರೆ—ನೀನೀಗ ಮಾಡುತ್ತಿರುವದೇನು ? "

ಸಾವೇರ್ ಉಸಿರೆತ್ತಲಿಲ್ಲ. ತಲೆ ತಗ್ಗಿಸಿದನು.

ಫಾದ್ರಿಗಳು ಒಮ್ಮೆಲೇ ಕೇಳಿದರು.

" ಮೂಕನಾದೆಯಾ ? ಮೂಕನಾಗು ಸಾವೇರ್, ಮೂಕನೇ ಆಗು ! ಆದರೆ ಇದೊಂದನ್ನರಿತಿರು ! ಈ ಜಗತ್ತಿನಲ್ಲಿ ನೀನೇಕೆ........ಒಂದು ಕ್ರಿಮಿ ಕೀಟಕ ಸಹಿತ ತಿಂದು ಬದುಕುತ್ತದೆ; ಅಂತೇ ಕುಂಟ ಕುರುಡರು ಸಹ ತಿಂದು ಬದುಕುತ್ತಾರೆ. ಅವುಗಳು ಬದುಕುವದು ಕೊಳಚೆಯಲ್ಲಿ; ಇವರು ಬದುಕುವದು ಸ್ವಚ್ಛತೆಯ ರಾಜ್ಯದಲ್ಲಿ ? ಮಾನವತೆಯ ಮಡಿಲಲ್ಲಿ. ಅಂತೆ ನೀನು ಬದುಕಿದಂತಾಯಿತೆ ? ನೀನೂ ಕ್ರಿಮಿಕೀಟಕವೇ ? ಕೊಳಚೆಯಲ್ಲಿ ಬಿದ್ದು ಒದ್ದಾಡುವ ಹೊಲಸು ಪ್ರಾಣಿಯೆ ? ಸಾವೇರ್, ಇಂದು ಹುಟ್ಟಿ ನಾಳೆ ಹೇಳ ಹೆಸರಿಲ್ಲದಂತಾಗುವ ಜೀವಿಯೋ ನೀನು ? ಅಲ್ಲ. ಮನುಷ್ಯನಾಗ ತಕ್ಕವ ! ಆ ಶಕ್ತಿಯುಳ್ಳವ. ನಿನ್ನ ಪ್ರಯತ್ನದಿಂದ ಯಾವ ಮಹತ್ಕಾರ್ಯ ವನ್ನಾದರೂ ಸಾಧಿಸಬಲ್ಲವ. ನಿನ್ನ ಕೃತ್ಯದಿಂದ, ತಾಳ್ಮೆಯಿಂದ, ವರ್ತನೆ ಯಿಂದ, ತ್ಯಾಗದಿಂದ, ಕಷ್ಟದಿಂದ ಬದುಕುಮಾಡಿ, ಜೀವನವ ಗೆದ್ದು, ನಿನ್ನ ಹೆಸರನ್ನು ಆ ದೇವದೇವನ ಚಿರಂಜೀವಿತವಾದ ಇತಿಹಾಸದ ಪುಟಗಳಲ್ಲಿ ಅಜ ರಾಮರವಾಗಿ ಉಳಿಸಿಕೊಂಡು ಮೆರೆಯಬಲ್ಲವ ! "

ಫಾದ್ರಿಗಳು ಹೇಳುತ್ತ ದೇವರ ಗದ್ದುಗೆಯ ಮೆಟ್ಟಿಲನ್ನು ಹತ್ತಿದರು. ಒಂದು ಕಾಲನ್ನು ಮೆಟ್ಟಿಲ ಮೇಲಿಟ್ಟು ಸಾವೇರನ ಕಡೆಗೆ ಬೊಟ್ಟು ಮಾಡಿ ಮತ್ತೆ ಕೇಳತೊಡಗಿದರು.

ಸಾವೇರ ತಗ್ಗಿದ ತಲೆಯನ್ನು ಎತ್ತಲಿಲ್ಲ. ಮೈಯನ್ನು ಸಹ ಸ್ವಲ್ಪವೂ ಅಲುಗಿಸಲಿಲ್ಲ. ಪ್ರತಿಷ್ಠಿತ ಶಿಲಾಮೂರ್ತಿಯಂತಾಗಿದ್ದ. ಆದರೆ ಒಳಮನ ಗಾಳಿಯಂತೆ ಫಾದ್ರಿಗಳ ಹೇಳಿಕೆಯ ಸುತ್ತ ತಿರುಗುತ್ತಿತ್ತು.




ಚಿತ್ರಕಾರ: ಶ್ರೀ. ವೀ. ತಿ. ಶೀಗೇಹಳ್ಳಿ, ಶಿರಸಿ.

**ಪಾದ್ರಿಗಳು ಏಸುವಿನ ಮೂರ್ತಿಯನ್ನು ತೋರಿಸಿ ದೃಷ್ಟಿಸಿದರು.**

" ಸಾವೇರ್, ನಿನ್ನಲ್ಲಿ ನೀನು ಸಂತೋಷದಿಂದಿರುವೆಯಾ ? ನಿನ್ನ ಆತ್ಮದಲ್ಲಿ ನಿನ್ನ ಶುದ್ಧ ರೂಪು ಮೂಡಿಸಿಕೊಂಡಿರುವೆಯಾ ? ಇಲ್ಲ. ಮೂಡಿಸಿಕೊಳ್ಳಬೇಕು. ಬದುಕಿನಲ್ಲಿ ಕಠಿಣತರ ಕಷ್ಟಗಳು, ಬಡತನ, ಇವು ಬರುವದು ನಿನಗೊಬ್ಬನಿಗಲ್ಲ ! ಎಲ್ಲರಿಗೂ; ಈ ಜಗತ್ತಿನ ಪ್ರತಿ ಜೀವಕೋಟಿಗೂ. ಆದರೆ ಅವುಗಳನ್ನೆಲ್ಲ ಜಯಿಸಿ, ಪರಿಶುದ್ಧ ಹೃದಯದ ಕುಲಿಮೆಯಲ್ಲಿ ಆತ್ಮಸಮೇರಣಕ್ಕೆ ಪುಟವಿಕ್ಕಿಕೊಂಡು, ದೇವನ ಉನ್ನತ ವೇದಿಕೆಗೆ ಸೇರಬೇಕು. ಆಗ ನಿನಗೆ ಸುಖ ಶಾಂತಿಯೆಂಬುದರ ಕಲ್ಪನೆ ಬಂದೀತು ! ಆಗ ನಿನ್ನ ' ಇನ್ನೂ ಬೇಕು, ಮತ್ತೂ ಬೇಕು ' ಎನ್ನುವ ದಾಹ ಹಿಂಗೀತು ! ಸಾವೇರ್, ನೀನು ಬಡವ. ಬೇಕೆಂಬ ಆಶೆಯನ್ನು ಬೆಳೆಸುತ್ತ ಹೋದರೆ ನಿನಗದರ ತುದಿಗಾಣಿಸುವದಶಕ್ಯ. ಆದುದರಿಂದ ತಾಳ್ಮೆಯು, ಸದ್ಗುಣಗಳ, ನ್ಯಾಯದ ಹಾದಿಯಲ್ಲಿ ನಡೆ. ಆಗ ಬರುವ ಮನಸ್ಸಿನ ಅತೀವ ಕ್ರೂರಭಾವವನ್ನು ಹತೋಟಿಯಲ್ಲಿಟ್ಟುಕೊಂಡು ತೃಪ್ತಿಬಡುತ್ತ ನಡೆ. ನಿನ್ನ ಧ್ಯೇಯ ನಿಜಮಾನವನಾಗುವದಿರಲಿ ! ಆ ಧ್ಯೇಯದ ಎಡಬಲಕ್ಕೆ, ಸಂಕಟಕ್ಕೆ ಎಂದಿಗೂ ನೋಡದಿರು, ಹೆದರದಿರು. "

ಫಾದ್ರಿಗಳು ಮಾತಿನ ಓಘಕ್ಕೆ ಧ್ವನಿಯ ಏರಿಳಿತವನ್ನು ಬೆರೆಸುತ್ತ ಗದ್ದಿಗೆಯ ಒಂದೊಂದೇ ಮೆಟ್ಟಲನ್ನು ಏರುತ್ತಿದ್ದರು. ಮಾತು ಅದಾವುದೋ ಉಜ್ವಲ ಶಕ್ತಿಯಿಂದೊಡಗೂಡಿ ಬಂದಂತಿತ್ತು. ಅಲ್ಲದೆ ಪ್ರತಿವಾಕ್ಯವೂ ಸಾವೇರನನ್ನು ಮುಟ್ಟಿ ಅವನ ಹೃದಯವನ್ನು ಕಲಕುತ್ತಿತ್ತು. ಸಾವೇರನಿಗೆ ನಿಂತನೆಲೆಯೇ ಅಲುಗುವಂತಾಯಿತು. ಅವನ ತಲೆಯಮೇಲೇನೋ ಭಾರವಾದ ವಸ್ತುವು ಇರುವಂತೆ ಭಾಸವಾಗತೊಡಗಿತು. ಆದರೆ ಯಾವುದಕ್ಕೂ ಅವನು ಮೈ ಅಲುಗಿಸಲಾರದಾಗಿದ್ದ, ಕೈ ಎತ್ತಲಾರದಾಗಿದ್ದ.

ಸಾವೇರ ಹೇಗೋ ಮೋರೆ ಎತ್ತಿ ನೋಡಿದ. ದೃಷ್ಟಿ ಫಾದ್ರಿಗಳ ಕಾಲವರೆಗೆ ಮಾತ್ರ ಹರಿಯಿತು. ಮುಂದೆ ಹರಿಯಲಿಲ್ಲ.

ಫಾದ್ರಿಗಳು ಒಂದು ಕ್ಷಣ ಏಸುವಿನ ಮೂರ್ತಿಯನ್ನು ನಿಟ್ಟಿಸಿದರು. ಮರುಕ್ಷಣ ಕಳಕಳಿಯ ಧ್ವನಿಯಲ್ಲಿ ಸಾವೇರನನ್ನು ಕರೆದರು.

"ಮಗು, ಸಾವೇರ್, ನೀನು ಅನ್ಯಾಯದ ಹಾದಿಯನ್ನು ಈಗ ತುಳಿದಿರುವೆಯೆಂದು ತಿಳಿದಿರುವೆ. ಆದರೆ ನನ್ನ ಆತ್ಮವಿಶ್ವಾಸ ನಿನ್ನನ್ನು ಸತ್ಯ




ಚಿತ್ರಕಾರ: ಶ್ರೀ. ವೀ. ತಿ. ಶೀಗೇಹಳ್ಳಿ, ಶಿರಸಿ.

ಪಾದ್ರಿಗಳು ಏಸುವಿನ ಮೂರ್ತಿಯನ್ನು ತೋರಿಸಿ ದೃಷ್ಟಿಸಿದರು.

ಶುದ್ಧ ಮಾರ್ಗಕ್ಕೆ ಹಚ್ಚುವೆನೆಂಬ ಭರವಸೆಯುಸೇಯುತ್ತಿದೆ. ಅಂತೂ ನೀನು ತಪ್ಪು ಹಾದಿಯನ್ನು ಬಿಟ್ಟು ಬಿಡುತ್ತಿ ಎಂದು ನಂಬುವೆ. ಸಾವೇರ್, ನೀನು ಉಪಯುಕ್ತ ದೀಪ ! ಮನೆಗೆ ಹತ್ತಿದ ಕಿಡಿಯಲ್ಲ, ತಿಳಿದಿರು ! ನಿನ್ನೊಬ್ಬನ ಸದ್ವರ್ತನೆಯಿಂದ ಇಳಿಮುಖವಾಗುತ್ತಿರುವ ಸಮಾಜ, ಆಸರನಿತ್ತು ನಿಲ್ಲಿಸಿ ದಂತೆ ನಿಂತೀತೆಂದು ತಿಳಿ. ಕಡೆಗೆ ಅದು ಏರಿ ತನ್ನ ಸ್ಥಾನಕ್ಕೆ ತಿರುಗುವದರಲ್ಲಿ ಭರವಸೆಯನ್ನಿಡು............... ಆದಿಲ್ಲವಾದಲ್ಲಿ........... ಸಾವೇರ್, ನಿನ್ನನ್ನೇ ನಂಬಿ ಬದುಕುತ್ತಿರುವ ನನ್ನ ಸಲುವಾಗಿಯಾದರೂ ಬಿಡುವದಿಲ್ಲವೇ ?"

ಫಾದ್ರಿಗಳ ಮುಖ ಬೆವರಸುರಿಸುತ್ತಿತ್ತು. ಕಣ್ಣು ಹನಿಯ ತಟಕು ತ್ತಿತ್ತು. ಅವರು ಗದ್ದುಗೆಯನ್ನೇರಿ ಮೂರ್ತಿಯ ಬದಿಗೆ ನಿಂತಿದ್ದರು. ಒಂದು ಕೈಯನ್ನು ಎದೆಗೆ ಆನಿಸಿದ್ದರು. ಇನ್ನೊಂದು ಕೈಯನ್ನು ಸಾವೇರನತ್ತ ಎತ್ತಿ ಹಿಡಿದಿದ್ದರು.

ಸಾವೇರ ತಟ್ಟನೆ ಮುಖವೆತ್ತಿ ನೋಡಿದ !

ಏಸುವಿನ ಮೂರ್ತಿಯ ಬಳಿಯಲ್ಲಿ ಫಾದ್ರಿಗಳು !

ಸಾವೇರನಿಗೆ ವಿಲಕ್ಷಣ ಅನುಭವವಾಯಿತು ! ಅವನ ಎಳೆತನದ, ಸಂಸ್ಕಾರಹೊಂದಿದ ಗುಣ ಮರುಕಳಿಸಿ ಮೇಲೆ ಬಂದಿತ್ತು. ಕಣ್ಣು ಬಟ್ಟಲಿ ನಂದದಿ ಅಗಲವಾಗಿ ನೀರಹಿಡಿಯಲು ಯತ್ನಿಸುತ್ತಿತ್ತು. ಸದಸದ್ವಿವೇಕ ತಂದೆಯ, ತಾಯಿಯ, ಗುರುಗಳ, ತನ್ನಂತೆ—ತನಗಿಂತು ಮಿಗಿಲು ಬಡತನದಲ್ಲಿ ಜೀವಿರುವವರನ್ನು ನೆನಸಿಕೊಂಡು ಮನಸ್ಸಿಗೇನನ್ನೋ—ಆಣತಿಯನಿತ್ತಿತು. ಸಾವೇರನ ದೇಹಭಾರ ಫಾದ್ರಿಗಳ ಕಾಲಮೇಲೆ ಮವಡಿಸಿತ್ತು.

ಎಷ್ಟು ಪ್ರಯತ್ನಿಸಿದರೂ ಸಾವೇರನ ಅಳುವನ್ನು ನಿಲ್ಲಿಸಲಾಗಲಿಲ್ಲ. ಬಹುವಿಧವಾಗಿ ಫಾದ್ರಿಗಳು ಸಂತೈಸಿದರು.

" ಸಾವೇರ್, ನಿನ್ನನ್ನು ದೇವರು ಕ್ಷಮಿಸಿರುವ. ಇನ್ನು ನೀನು ಅಪ ರಾಧಿಯಲ್ಲ. ಹೋಗು ಸಾವೇರ್, ಮಾನವನಾಗು ! " ಎಂದು ದೊಡ್ಡದಾಗಿ ಹರಸಿ ಕಳುಹಿದರು.

* * * *

ತಿಂಗಳು ಕಳೆದೊಂದುದಿನ—ಫಾದ್ರಿಗಳು ಮುಚ್ಚಂಜೆಯ ಸನಿಹಕ್ಕೆ ಪ್ರಾರ್ಥನಾಮಂದಿರದ ಹೊರ ಬಯಲಿನಲ್ಲಿ ಶಿಷ್ಯನೊಂದಿಗೆ ಮಾತಾಡುತ್ತ ತಿರು

ಗುತ್ತಿದ್ದರು. ಅವನು ಇತ್ತಲಾಗಿ ನಡೆದ ವಿಶೇಷ ಘಟನೆಯೊಂದನ್ನು ಕುರಿತು ಹೇಳುತ್ತಿದ್ದನು.

" ಒಮ್ಮೆ ಹೇಳಿದ್ದೆನಲ್ಲಾ ಫಾದರ್, ಸಾವೇರನೂ ಆ ಹೆಣ್ಣಿನ ಅತ್ಯಾಚಾರದ ಖಟ್ಲೆಯಲ್ಲಿದ್ದಾನೆಂದು ಸುದ್ದಿ ಬಿದ್ದಿದ್ದನ್ನು ! ಅದೇ ಸಂಶಯದ ಮೇಲೆ ಅವನನ್ನು ಹಿಡಿದದ್ದರಂತೆ ! ಆದರೆ, ಅವನ ಜವಾನಿಯ ಮೇಲಿಂದಲೂ, ಅಂದು ಡಿಸೋಜಾರವರ ಮನೆಯಲ್ಲೇ ಇದ್ದನೆಂಬ ನಿರ್ಧಾರ ಸಾಕ್ಷಿಯ ಮೇಲಿಂದಲೂ, ಅವನು ನಿರಪರಾಧಿಯೆಂದು ನಿರ್ಧಾರವಾಯಿತಂತೆ. ಅಲ್ಲದೆ ಅವನು ' ನನ್ನ ಗುರುಗಳ ಪಾದ ಸಾಕ್ಷಿಯಾಗಿಯೂ... ............ ' ಎಂದು ಪ್ರತಿಜ್ಞೆ ಮಾಡುತ್ತ ಅಳುತ್ತಿದ್ದನಂತೆ ! ಮಹಾ ವಿಚಿತ್ರ " ಎಂದು ಬೆರಗುಗಣ್ಣಿನಿಂದ ಫಾದ್ರಿಗಳ ಮುಖ ನೋಡತೊಡಗಿದ.

ಫಾದ್ರಿಗಳು ಕೈ ಕಟ್ಟಿಕೊಂಡು ಆಕಾಶವನ್ನು ನೋಡುತ್ತ ನಗುತ್ತಿದ್ದರು. ' ಹೌದೇನು ? ' ಎಂಬ ನುಡಿ ಮೇಲುನಗೆಯ ಹೊನಲಿನಲ್ಲಿ ಹರಿದಿತ್ತು.

" ನಿನ್ನನ್ನು ದೇವರು ಕ್ಷಮಿಸಿರುವ ಸಾವೇರ್. ಇನ್ನು ನೀನು ಮಾನವನಾಗುವಿ ! " ಎಂದು ಒಮ್ಮೆಲೇ ನುಡಿದು ಮಂದಿರದತ್ತ ನಡೆದರು.

ಕೈಯ ಅಂಗಣದಲ್ಲಿ ಬೆರಳುಗಳ ತಾಳಲಯಕ್ಕೆ ತಕ್ಕಂತೆ ಅವರ ಕೊರಳಿನ ಸಿಲುಬೆಯು ಮೂರ್ತಿ ಕುಣಿಯುತ್ತಿತ್ತು !

# ಹರಸಿದಳು !

ಮಲಗಿದ ಹರಕು ಗೋಣೀಪಾಟನ ತಲೆಯ ಬದಿಗಿದ್ದ ಗೂಡಿನಿಂದ ಕೋಳಿಹುಂಜ, ಕಡೆಯ ಜಾಮದಲ್ಲಿ ಕೂಗಿದಾಗ ಹೊಡೆದೆಬ್ಬಿಸಿದಂತಾಯಿತು. ಮುನ್ನಿನ ದಿನ ಹುಣ್ಣಿಮೆ. ಆದುದರಿಂದ, ತಂಗದಿರನ ಬೆಳಕು ನಸು ಶೀತಲ ಪ್ರಕೃತಿಯೊಂದಿಗೆ ಇನ್ನೂ ಇತ್ತು. ಏಳಬೇಕೆಂದು ಮಗ್ಗುಲು ಮುರಿದೇಳು ವಾಗ ಹಿಂದೆಯೇ ಹಾಸಿಗೆಗೆ ಜಗ್ಗಿದಂತಾಗುತ್ತಿತ್ತು. ಮೈ 'ಹಂದು'ವದು ಬೇಡವಾಗಿತ್ತು. ಕೈ ಮುಂಧುಮಾಡಿ ಏಳುವೆನೆಂದರೆ 'ನೋವೇ ತುಂಬಿದ ಬಾಳಿನಲ್ಲಿ, ಬೆಳಗಿನ ಜಾವದ ಸಮಸ್ತ ಬಧ್ಧತೆಯನುಳಿದು, ಮತ್ತೆ ನೋವು ತಂದುಕೊಂಡು ಕೊರಗಿ ಅಳಲೇಕೆ ?' – ಎನ್ನುತ್ತಿತ್ತು ಮನಸ್ಸು. ಜೀವ ನದ ಆಗು–ಹೋಗುಗಳ ಪರಿಣಾಮಗಳನ್ನು ಲೆಕ್ಕಿಸುವ ವಯಸ್ಸಲ್ಲದಿದ್ದರೂ, 'ಇಷ್ಟೆಲ್ಲ ಕಷ್ಟವೇ ತಮ್ಮೆಲ್ಲರ ಹಣೆಯ ಬರಹವೆ ?' ಎಂಬ ಉರಿ ಎದ್ದು, ದೇಹದ ಚೈತನ್ಯವನ್ನೆಲ್ಲ ಅಡಗಿಸಿದಂತಾಗುತ್ತಿತು. ಹಾಗಾಗಿ, ನೋವುಗೊಂಡ ಮನಸ್ಸು ಉಳಿದೆಲ್ಲವನ್ನು ಕ್ಷಣಿಕವಾಗಿ ಮರೆಸಿ, ಹಾಸಿಗೆಗೆ ದೇಹವನ್ನು ಒರಗಿ ಸಿತು. ಹಾಗೆಯೇ ನಿದ್ರೆ ಆವರಿಸಿತು !

ಕೋಳಿ ಕೂಗಿದಾಗಲೇ ' ಸಂಕ್ರಿ ' ಎದ್ದಳು. ಗಂಡ ' ನಾಗ, ' ಚಾನೀರು ಕುಡಿದ ಹೊರತು, ಹುರುಪುಗೊಂಡು ಕರಡಕೊಲ್ಲಿಗೆ ಹೋಗಲಾರ ನೆಂದು ಅವಳಿಗೆ ತಿಳಿದೇ ಇತ್ತು. ಅವರು ದಿನ ಎರಡುಬಾರಿ ಕರಡದ ಹೊರೆ, ಕಟ್ಟಿಗೆ ಹೊರೆಗಳನ್ನು ಹೊತ್ತು ತಂದು, ವರ್ತನೆ ಮನೆಗೆ ಮಾರಿ, ಬರುವ ಹಣ ದಲ್ಲಿ ಅವರ ಎಂಟು ತಿಂಗಳ ಜೀವನ ಸಾಗಬೇಕಾಗಿತ್ತು. ಸಂಕ್ರಿ, ಮುನ್ನಿನ ದಿನ ಮಗಳು ತಂದ ಕಟ್ಟಿಗೆಯ ಜಗ್ಗುಗಳಿಂದ ಒಲೆಯನ್ನು ಹೊತ್ತಿಸಿದಳು. ಅದೇ ರೇಶನ್ ಕಾಲ ಇಲ್ಲವಾಗಿ, ಐದಾರು ದಿನ ಕಳೆದಿತ್ತು. ಆದುದರಿಂದ, ಇದ್ದ ಅಲ್ಪ-ಸ್ವಲ್ಪ ರೊಕ್ಕದಲ್ಲೇ " ಒಂದಿನಾದ್ರೂ ಮನೆತಾವ್ ದೋಸೆ ಮಾಡಿ, ತಿಂದ್ಬಿಡಾಣ ಗಡದ್ದು " ಎಂದು ಉದ್ದು, ಅಕ್ಕಿಯನ್ನು ನಾಗ ತಂದಿದ್ದ. ಅದನ್ನು ಹಿಂಬದಿಗೆ ಒಳಕಲ್ಲಿಗೆ (ತಿರುವುವಕಲ್ಲು) ಹಾಕಿ, ಸಂಕ್ರಿ ತಿರುವ ತೊಡಗಿದಳು.

ಸಂಕ್ರಿ, ದಿನಾ ಗಂಡನಿಗೆ ಚಹ ನೀರು ಕೊಟ್ಟನಂತರ ಗಂಜಿಮಾಡಿ ಬಡಿಸಿ, ಮುಂದಾಗಿ ಕಳುಹಿಸುತ್ತಿದ್ದಳು. ಹಿಂದಿನಿಂದ ತಾನು, ಮಗಳು ಗಂಜಿ ಕುಡಿದುಕೊಂಡು ಹೊರಡುತ್ತಿದ್ದರು. ಮಗಳು ಸಣ್ಣವಳಾದರೂ ' ಊಟಕ್ಕ್ ಮುದ್ದು, ಕೆಲಸಕ್ಕಲ್ಲಣ ! ' ಎನ್ನುತ್ತಿದ್ದರು ಅವರು. ತಂದೆ-ತಾಯಿ ಕೊಯಿದ ಕರಡದ ಸಿವುಡುಗಳನ್ನು ಮಗಳು ಒಂದುಗೂಡಿಸಿ ಇಡುತ್ತಿದ್ದಳು. ಸ್ವಲ್ಪ ಬಿಡುವಾದಾಗ ಅವಳು ಕರಡದ ಮೇಲೇ ಕುಳಿತು, ಕರಡದ ಕಡ್ಡಿಯನ್ನು ಬಾಯಿಯಲ್ಲಿ ಕಚ್ಚುವದು, ಗಂಟು ಹಾಕುವದು ಮಾಡುತ್ತ— ಎಳೆವಯಸ್ಸಿಗೆ ತಕ್ಕಂತೆ ಆಡುತ್ತಿದ್ದಳು, ಅದಾದರೂ ಹೆಚ್ಚುಹೊತ್ತು ನಡೆಯದು. ಸ್ವಲ್ಪ ಸಮಯಕ್ಕೇ ' ಚಂದ್ರೂ............ಽ, ಕುಂತ್ಯಾ ? ಪೆಂಡಿ ಹಾಕು ' ಎಂದು ತಂದೆ ಕೂಗುತ್ತಿದ್ದ. ಸಾಧಾರಣ ಆಗ ನಡುಹೊತ್ತು ಏರಿ, ಬಿರುಬಿಸಿಲು ಹೊಡೆಯುತ್ತಿತ್ತು. ಅವಳ ಕೆದರಿದ ತಲೆಯ ಕೂದಲಿನೊಂದಿಗೆ ಧೂಳು, ಕರಡದಕಡ್ಡಿ, ಸುಂಗುಗಳು ಸಹಿತ ಬಿಸಿಲನ್ನು ತಡೆದುಕೊಳ್ಳಲು ಯತ್ನಿಸುತ್ತಿದ್ದವು. ಆಗ ನಾಗ-ಸಂಕ್ರಿ ಹೊರೆ ಬಿಗಿಯುತ್ತಿದ್ದರು. ಚಂದ್ರುಗೂ ಸಣ್ಣ ಹೊರೆಯನ್ನು ಕಟ್ಟಿ ಕೊಡುತ್ತಿದ್ದರು. ಒಂದೊಂದು ದಿನ ಅವಳು, ಮನೆಗೆಂದು ನಾಲ್ಕು ಹಿಡಿ ಕಟ್ಟಿಗೆ-ಜಗ್ಗುಗಳನ್ನು ಕೂಡಿಸಿ ತರುತ್ತಿದ್ದಳು. ಅವರು ಹೊತ್ತು

ತಂದ ಹೊರೆಗಳನ್ನು ಬೇಕೆಂದು ಹೇಳಿದವರ ಮನೆಗೆ ಹಾಕುವವರೆಗೆ ಮಧ್ಯಾನ್ಹ ವಾಗುತ್ತಿತ್ತು. ಎಂದರೆ, ಸುಮಾರು ಒಂದು-ಒಂದೂವರೆ ಘಂಟೆಯಾಗುತ್ತಿತ್ತು. ನಂತರ ಮನೆಗೆ ಹೋಗಿ ಗಂಜಿ ಕುಡಿದು, ಮಗಳು ಬೇಡಿತಂದ ಅಡಿಕೆಯನ್ನು ಸಣ್ಣ ಎಲೆಯ ಚೂರಿನೊಂದಿಗೆ ಮೆಲುಕುತ್ತ, ಪುನಃ ತಮ್ಮ ಕೆಲಸಕ್ಕೆ ಹೊರಡುತ್ತಿದ್ದರು. ಆಗ ಮಗಳು ಹೊರಡಬೇಕಾಗಿದ್ದಿಲ್ಲ. ಅವಳು ಅಡಿಕೆಯ, ಪೇಟೆಯ ಕಡೆಗೆ ಬೇಡಲು ಹೊರಡಬಹುದಾಗಿತ್ತು. ಬೇಕಾದರೆ, ಆಡಲೂ ಬಹುದಾಗಿತ್ತು.

ಗಂಡ-ಹೆಂಡತಿ ಮತ್ತೆ ಎರಡು ಹೊರೆ ತಂದು ಹಾಕಿ, ಹಣ ತೆಗೆದು ಕೊಂಡು ಬರುತ್ತಿದ್ದರು. ಆದರಲ್ಲಿ ಕಷ್ಟವನ್ನು ಮರೆಸುವ ಕುಡಿತಕ್ಕಾಗಿ ಕೆಲವನ್ನು ನಾಗ ಇಟ್ಟುಕೊಂಡು, ಉಳಿದ ಹಣವನ್ನು ಮನೆಖರ್ಚಿಗೆಂದು ಸಂಕ್ರಿಯ ಕೈಯಲ್ಲಿಟ್ಟುಬಿಡುತ್ತಿದ್ದ. ಒಮ್ಮೊಮ್ಮೆ ಅವನು ಕೇಳಿದ ಪರಿಚಿತರೊಡನೆ—

'ಆದಾ! ಇಲ್ಲಿದ್ರೆ ಆದೀತಾ ಒಡ್ಯಾ? ಊಹುಂ, ನಮಗದು ಬೇಕೇ ಬೇಕು ನಿಮ್ಮ ಹಾಂಗೆ! ಕಷ್ಟಾವಾಡಿ ತಿನ್ನಬೇಕ್ ನೋಡಿ! ಅದು.........
ಜೀವ್-ಹೆಣಾ ಆದ್ಮೆಲ್ಲಾ ಮರ್ಸತ್ತೈತಿ'

—ಎಂದು ಎನ್ನುತ್ತಿದ್ದ. ಹಾಗೆಂತ ಅವನು ಕೇರಿಯ ಇತರರಂತೆ ಅನಾಹುತ ಮಾಡುವಷ್ಟು ಕುಡಿಯುತ್ತಿದ್ದಿಲ್ಲ. ಉಂಡು, ಬಳಿಕ ಕುಡಿದು ಮಲಗಿದರೆ, ಬೆಳಗಿನ ಕೋಳಿಯ ಕೂಗಿಗೇ ಎಚ್ಚರ. ಇದು ಅವರ ನಿತ್ಯದ ನಿಯಮ. ಇದರಲ್ಲಿ ಕಾಲಕ್ಕೆ ತಕ್ಕಂತೆ ಸ್ವಲ್ಪ ಸ್ವಲ್ಪ ವ್ಯತ್ಯಾಸವಾಗುತ್ತಿತ್ತು. ಎಂದರೆ, ಒಂದೊಂದು ಸಾರೆ ಸ್ವಲ್ಪ ಕಷ್ಟ; ಮತ್ತೊಂದು ಸಾರೆ ಹೆಚ್ಚೆಚ್ಚು ಕಷ್ಟ.

ಸಂಕ್ರಿಗೆ ಬೀಸಿ ಮುಗಿಯುತ್ತ ಬಂದಂತೆ, ತಿಂಗಳಿನ ಬೆಳಕಿಗೆ ಎಳೆಯ ಅರುಣನ ಹೊಂಬೆಳ್ಳಿಯ ಬೆಳಕು ಕೂಡುತ್ತ ಬಂದು, ಸಮರಸವಾಗಿ ಬೆಳ್ಳಗಾಯಿತು. ನುಣ್ಣಗಾದ ದೋಸೆಯ ಹಿಟ್ಟನ್ನು ತೆಗೆದುಕೊಂಡು, ಕಲ್ಲಿಗೆ ನೀರನ್ನು ಹೊಯ್ಯುವಾಗ,— ಅಲ್ಲಿಯ ವರೆಗೂ ಮಗಳು ಎದ್ದು ಬಾರದಿದ್ದುದನ್ನು ನೆನಪಿಗೆ ತಂದುಕೊಂಡು ಗಾಬರಿಯಾದಳು.

ಅಣ್ಣಾಜಿ ಶೇಟ ಇವರ ಹಿಂದಿನವರು. ಅನೇಕ ವರ್ಷಗಳ ಹಿಂದೆ ಯಾಲಕ್ಕಿ ವ್ಯಾಪಾರಕ್ಕಾಗಿ ಉತ್ತರ ಕನ್ನಡ ಜಿಲ್ಲೆಗೆ ಬಂದಿದ್ದರಂತೆ. ಬಂದವರು, ವ್ಯಾಪಾರದಲ್ಲಿ ಬಹಳೇ ಲಾಭ ಪಡೆದರಂತೆ ಆನಂತರ 'ಕಾನಡೀ ಲೋಕ ಠೀಕ ಆಹೇತ್' ಎಂದುಕೊಂಡು, ಇಲ್ಲೇ ವ್ಯಾಪಾರ ಮಾಡುತ್ತ ಉಳಿದು, ಸ್ವಂತ ಮನೆ, ಸಾಕಷ್ಟು ಹಣ, ಅಡಿಕೆ ಯಾಲಕ್ಕಿ-ಕಾಳು ಮೆಣಸುಗಳ ದಲಾಲಿ ವ್ಯಾಪಾರದ ಅಂಗಡಿ ಇಟ್ಟುಕೊಂಡು ಸುಖವಾಗಿ ಉಳಿದರಂತೆ. ಅವರ ಮಗ ತಿರುಮಲ ಶೆಟಿ. ಅವರು, ಆದಷ್ಟು ಸತ್ಯ-ನಿಶ್ವಾಸಗಳಿಂದ ನಡೆದು, ಗಿರಿಯ ತಿಮ್ಮಪ್ಪನಷ್ಟು ಹೆಸರಾಗಿ, ಕಡೆಗೆ ದಿವಾಳಿ ತೆಗೆಯುವಷ್ಟಾಗಿ, 'ನನ್ನಲ್ಲಿಷ್ಟಿದೆ ಭಾಯೀ. ರೂಪಾಯಿಗೋಂದಾಣೆಯಂತೆ ತೆಗೆದುಕೊಂಡು ನನ್ನನ್ನುದ್ಧರಿಸಿ' ಎಂದು ಕೇಳಿಕೊಂಡು, ಅಂಗಡಿಯ ದೀಪವನ್ನು ಆರಿಸದಂತೆ ಉರಿಸುತ್ತ ಬಂದರು. ಈಗ ಆರು ವರ್ಷಗಳ ಹಿಂದೆಯೇ ತಮ್ಮ ಕಾಲ ಮುಗಿಸಿ ನಡೆದರಂತೆ.

ಅವರ ಮಗ ಅಣ್ಣಾಜಿ ಶೇಟ. ದೇಹಕಿಟಿಕಿಟಿ. ಉದ್ದ ಆಳು. ಅದಕ್ಕೆ ವಿರುದ್ಧವಾಗಿ ಸಣ್ಣ ಮನಸ್ಸು ನಾಟಕದಲ್ಲಿ ಜಪಾನಿನ ಕ್ರೂರ ಮನುಷ್ಯನ ಪಾತ್ರ ಬರೆದುಕೊಳ್ಳುವಾಗ ಮೂಗಿನ ಪಕ್ಕದಲ್ಲಿ, ಹುಬ್ಬಿನ ಮೇಲೆ ಬಣ್ಣದ ಎಳೆ ಎಳೆದು, ನೆರಿ ಎಬ್ಬಿಸುತ್ತಾರೆ. ಅಂತಿರುವ ಮುಖ. 'ನಿನ್ನದಲ್ಲಾ ಎಂದರೆ, ಕೆನ್ನೆಗೆ ಏರಿಸಿಬಿಟ್ಟೇನು' ಎನುವ ಉಚ್ಚ ಸ್ವಭಾವ. ಆದರೂ ದಲಾಲಿ ಮತ್ತು ಕತ್ತಲೆ ವ್ಯಾಪಾರದಲ್ಲಿ ತಮ್ಮ ಚಾಕಚಕ್ಯತೆಯಿಂದ ಮೊದಲಿನ ಇಮ್ಮಡಿ ಗಳಿಸಿದ್ದರು. ಅಲ್ಲದೆ, ವ್ಯವಹಾರವನ್ನು ದೊಡ್ಡದಾಗಿ ಬೆಳೆಸಿಕೊಂಡಿದ್ದರು.

ಒಂದು ದಿನ— ಎಂದಿನಂತೆ ಅಣ್ಣಾಜಿ ಅಡಿಕೆಯನ್ನು ಮಾರಾಟ ಮಾಡಲು ರಾಶಿ ಹಾಕಿಸುತ್ತಿದ್ದರು. ಆಗ ನಾಲ್ಕೈದು ಅಡಿಕೆ ಹಾರಿ, ಮನೆಯ ಮುಂದಿನ ಡಾಂಬರ ರಸ್ತೆಯಲ್ಲಿ ಬಿದ್ದಿತ್ತು. ಯಾವ ಕಿಮ್ಮತ್ತಿಗೆ ಮಾರಾಟವಾದೀತೆಂಬ ಯೋಚನೆಯಲ್ಲಿದ್ದುದರಿಂದ, ಅಡಿಕೆ ರಸ್ತೆಗೆ ಹಾರಿಬಿದ್ದಿದ್ದರ ಕಡೆಗೆ ಅವರು ಲಕ್ಷ್ಯ ಕೊಡಲಿಲ್ಲ.

"ಸ್ವಾಮೀ, ಒಂದಡಿಕೆ ಕೊಡೀ"

ಬೇಡಿಕೆ ಮುಂದು ಮಾಡಿದ ಪುಟ್ಟ ಕೈಯ್ಯದಾಗಿತ್ತು.

"........................"

ಚಿಂದಿಯನ್ನುಟ್ಟ ಹುಡುಗಿ ಮೊದಲಿಗಿಂತ ಅಧಿಕ ದೈನ್ಯತೆಯಲ್ಲಿ 'ಒಂದಡಿಕೆ ಕೊಡೀ' ಎಂದು ಬೇಡಿದಳು. ಅವಳ ಮೈ ಧೂಳಿನಿಂದ ತುಂಬಿತ್ತು. ಛಳಿಯ ದಿನವಾದ್ದರಿಂದ ಮೈ ಹುರುಬುರುಕಾಗಿತ್ತು. ಎಣ್ಣೆ-ನೀರು ಕಾಣದೇ ತಲೆಗೂದಲು ಜಡೆಗಟ್ಟುವದರಲ್ಲಿತ್ತು.

ಅಣ್ಣಾಜಿಯವರು ಯಾರೆಂದು ಗಮನಿಸಲೇ ಇಲ್ಲ ವ್ಯಾಪಾರದ ವಿಚಾರದಲ್ಲೇ ಸಂಪೂರ್ಣ ತಲ್ಲೀನರಾಗಿದ್ದರು. ಮತ್ತೆ ಮತ್ತೆ ಕೇಳುವ ತನಕ ಮೋರೆ ಎತ್ತಿ ನೋಡಿ, ಹೆಣ್ಣು ರೂಪವೆಂದು ಅರ್ಧಮರ್ಧ ತಿಳಿಯುವದರೊಳಗೇ 'ಹೋಗತ್ತಲಾಗಿ' ಎಂದು ಘರ್ಜಿಸಿದರು. ಹುಡುಗಿ ಥಕ್ಕನೆ ನಡುಗಿ ಹೊರಟಳು. ಹಾಗೇ ಆಚೆ–ಈಚೆ ಬದಿಯ ಕಾಲುವೆ ಇಳಿದು, ಅಲ್ಲಿ–ಇಲ್ಲಿ ಬಿದ್ದ ಅಡಿಕೆಯನ್ನು ಹೆಕ್ಕಿಕೊಳ್ಳುತ್ತ ಒಂದೆರಡು ಮನೆದಾಟಿ ಮುಂದೆ ಹೋದಳು. ಪುನಃ ಹಿಂತಿರುಗಿದಳು. ಅಣ್ಣಾಜಿಯವರ ಮನೆಯ ಮುಂದಿನ ರಸ್ತೆಯ ಮೇಲೆ ಬಿದ್ದ ಅಡಿಕೆ ಅವಳನ್ನು ಕರೆಯುತ್ತಿತ್ತು. ಹೆಕ್ಕಿಕೊಳ್ಳಲು ಕೈ ಹಾಕಿದಳು.

'ಹಲ್ಕಟ್ ಹುಡ್ಗೀ'

ಹಿಂದಿನಿಂದ ಕೂಗುತ್ತ ಬರುವದನ್ನು ಹುಡುಗಿ ಕಂಡಳು. ಓಡಿದಳು. ಬಂದವರು ಅಣ್ಣಾಜಿಯವರೇ ಆಗಿದ್ದರು. ನಾಲ್ಕೈದು ಮನೆ ಕಳೆಯುವದರೊಳಗೇ ಅವಳ ತಲೆಗೂದಲನ್ನು ಹಿಡಿದು ಜಗ್ಗಿದರು. ದರದರ ರಸ್ತೆಯ ಮೇಲೆ ಎಳೆಯುತ್ತ ಬಂದರು. ಎಳೆಯುವಾಗ ಹುಡುಗಿಯ ಕಾಲು ತಪ್ಪಿತು. ಅಡ್ಡ ಬಿದ್ದಳು. ಅವರು ಸಿಟ್ಟಿನಿಂದ ತಮ್ಮ ಶಕ್ತಿಮೀರಿ ಜಪ್ಪಿದರು, ಗುದ್ದಿದರು, ಒದ್ದರು. ಆದರೂ ಅವರ ಸಿಟ್ಟಿಗೆ 'ನಿಲಕಾಲ' ಸಿಧ್ದಿಲ್ಲ.

ಮಧ್ಯಾನ್ಹದ ಬಿಸಿಲು ಕಾದು ಕಾಲಿಡದಂತಾದ ಡಾಂಬರ ರಸ್ತೆ, ಬಿಗಿಯಾದ ಹಿಡಿತ, ದರದರ ಎಳೆತ, ಧಬಧಬ ಹೊಡೆತದ ನೋವನ್ನು ತಡೆಯಲಾರದೆ ಹುಡುಗಿ,

'ಅಯ್ಯೋ, ನಾ ತಗಂಡಿಲ್ಲಾ. ಅಲ್ಲೇ ಬಿಟ್ಟೇದೆ. ದಮ್ಮಯ್ಯಾ. ನನ್ನ ಕಾಲು..........ಅಯ್ಯೋ ನನ್ನ ತಲೆ. ಅಯ್ಯಯ್ಯೋ ಇನ್-ಮಾಡೂದಿಲ್ಲಾ. ಅಯ್ಯವ್ವಾ ನನ್ನ ಕಿವೀ' ಎಂದು ಒದರುತ್ತಿದ್ದಳು.

ಆದರೆ ಅವರಿಗೆ ಇದು ಕೇಳಿಸದು. ಅವರಿಗೆ ಆವರಿಸಿತ್ತು ಸಿಟ್ಟು. ಎಳೆಯುವಾಗ ಹುಡುಗಿ ಏಳುವ ಪ್ರಯತ್ನ ಮಾಡುತ್ತಿದ್ದಳು. ಹಾಗಾಗಿ ಕೆಳ ಪಕ್ಕದ ಕಾಲನ್ನು ಪದೇಪದೆ ಮುಡಿಸಬೇಕಾಗುತ್ತಿತ್ತು; ಮುಡಿಸಿಕೊಳ್ಳುತ್ತಿದ್ದಳು. ಎಳೆಯುವಾಗ ಏಳಲಾಗುತ್ತಿದ್ದಿಲ್ಲ ಅವಳ ಚಿಂದಿ ಲುಂಗ ಮತ್ತೆ ಹರಿದು ಹುಡಿಯಾಯಿತು. ಮೊಳಕಂಡೆ ಸುಲಿದು ರಕ್ತ ಸೋರತೊಡಗಿತು. ರಸ್ತೆಗೆ ತಲೆಯ ಪಕ್ಕ ಹೊಸೆದು ಕಿವಿ ಹರಿಯಿತು. ಕಿವಿಗೆ ಹಾಕಿದ ಒಂಟೆ ಹಿಸಿದು ಬಿತ್ತು.

'ಅಯ್ಯಯ್ಯೋ, ನನ್ನ ಕಿ............ಒಂಟೀ............'

ನೆಲ ಬಾಯ್ಬಿಡುವಂತೆ ಒದರಿದಳು. ರಸ್ತೆಯಲ್ಲಿದ್ದ ಜನರೆಲ್ಲ ನೋಡುತ್ತ ನಿಂತಿದ್ದರು. ಅವಳ ಕರುಣಾಜನಕ ದೃಶ್ಯ ಅವರ ಹೃದಯದ ಅದಾವುದೋ ತಂತಿಯನ್ನು ಹಿಡಿದು ಜಗ್ಗುತ್ತಿತ್ತು. ಕಠಿಣ ಹೃದಯದವರೆನ್ನಿಸಿಕೊಂಡವರು ಸಹ 'ಅಯ್ಯೋ' ಎಂದು ಮರುಕಗೊಳ್ಳುವಂತಾಯಿತು.

ಅಂಗಡಿಯ ಬಾಗಿಲ ಬಳಿಯ ಕಲ್ಲಿನ ಮೇಲೆ ಎಳೆದು, ಜಜ್ಜಿದರು ಹುಡುಗಿಯನ್ನು.

'ಕೈ ಮುಗೀತೆ. ದಮ್ಮಯ್ಯಾ, ನಾ............ಇಲ್ಲ'

ನೋವು ತಡೆದುಕೊಳ್ಳಲಾರದಾಗಿದ್ದಳು. ಕಣ್ಣು ಕತ್ತಲೆಗಟ್ಟಿ ಬರುತ್ತಿತ್ತು. ಆದರೂ ಬೇಡಿಕೊಂಡಳು ಅಳುತ್ತ.

ದಯೆ ಅವರ ಹೃದಯದಿಂದ ದ್ರವಿಸಲಿಲ್ಲ. 'ಭೋಸಡಿ' ದುರುದುರು ನೋಡುತ್ತ ಕೂಗಿದರು. ಹಣೆಯ ಮೇಲಿನ ನರಗಳು ಉಬ್ಬಿ ನಿಂತವು.

ಹುಡುಗಿ ಗಡಗಡ ನಡುಗಿದಳು. ರಕ್ತ ಕಿವಿಯಿಂದ, ಕಾಲಿನಿಂದ ಸೋರುತ್ತಿತ್ತು. ಅಂತೂ ಇಂತೂ ಹುಡುಗಿ ಎದ್ದು ಕುಂಟುತ್ತ ಮನೆಗೆ ಓಡಿದಳು. ದಾರಿಯ ಮೇಲೆ ಅಲ್ಲಲ್ಲಿ ಅವಳ ಎಳೆ ಜೀವದ ರಕುತ ಹನಿಹಾಕುತ್ತಿತ್ತು. ಕೇರಿಯ ಜನ ತಮಗೆ ತಿಳಿದ ಪ್ರಕಾರ ಉಪಚಾರ ಮಾಡಿ, ಮನೆಯ ಹೊರಸಿನ ಮೇಲೆ ಅವಳ ಹರಕು ಗೋಣೀಪಾಟನ್ನು ಹಾಸಿ ಮಲಗಿಸಿದರು. ಆಗಾಗ ನೋವಿ ಒತ್ತಿ ಬರುತ್ತಿತ್ತು. 'ಅವ್ವಾ, ಅವ್ವಾ' ಎಂದು ತಾಯಿಯನ್ನು ನೆನೆಯುತ್ತಿದ್ದಳು.

ತಂದೆ-ತಾಯಿ ಸುದ್ದಿ ಮುಟ್ಟಿ ಓಡಿಬಂದರು. ತಾಯಿಯ ಹೃದಯ ತಳಮಳಗೊಂಡು ಮಿಡುಕುತ್ತಿತ್ತು. ಮನೆ ಕಾಣುವದರೊಳಗೇ ಅವಳ ತಾಯ್-ನಲ್ಮೆ 'ಚಂದ್ರೂ' ಎಂದು ಧ್ವನಿ ಹೊರಡಿಸಿತು. ಮಗಳ ಪ್ರತಿಸ್ವರ ಬರುವದರೊಳಗೇ ತಾಯಿ ಮಗಳ ತಲೆಯನ್ನು ತೊಡೆಗೆ ಏರಿಸಿಕೊಂಡಿದ್ದಳು. ಏನಾಯಿತೆಂದು ಅವಳಿಗೆ ತಿಳಿಯದಿದ್ದರೂ ಕಂಗಾಲಾದ ಅವಳ ಎದೆ ಕಣ್ಣೀರ ದೂಡಿ, ಕಣ್ಣಚು ಒದ್ದೆಯಾಯಿತು. ಆದರೆ ನಾಗ ಮಾತ್ರ ವಿಷಯವನ್ನು ಸಾವಕಾಶ ತಿಳಿದುಕೊಂಡ.

ಅಣ್ಣಾಜಿಯವರ ಮನೆಗೆ ನಾಗ-ಸಂಕ್ರಿ ಮಗಳನ್ನೆತ್ತಿಕೊಂಡೇ ಬಂದರು. ಹಾದಿಯಲ್ಲಿ ಸಹ ಹೃದಯ ಹಿಡಿತಕ್ಕೆ ನಿಲ್ಲದು. ಏನೇನೋ ಹಲಬುತ್ತ ಬಂದರು. ಅಣ್ಣಾಜಿಯವರ ಮನೆಯ ಎದುರಿಗೇ ನಿಂತು,

'ಇಷ್ಟ ಸಣ್ಣ ಹುಡ್ಗೀಗೆ ಇಷ್ಟೆಲ್ಲಾ ಶಿಕ್ಷೆ ಕೊಡಾಕೆ ನಿಮ್ಮ್ ಪುಣ್ಯಾತ್ಮರ ಹಸ್ತಾನಾದ್ರೂ ಹೇಗ್-ಮುಂದ್‌ವರಿತೋ !'

ಎಂದು ನಾಗ ಕೇಳಿದರೆ, 'ನಿಮ್ಗೆ ಮಕ್ಳುಮರೀನೇ ಇಲ್ವೆ ?' ಹೆತ್ತ ಕಳ್ಳು ಅನುಭವಾನೇ ಇಲ್ವೆ ? ಅಥವಾ ಏನ್ ಕಲ್ಲು ಕೊಯ್ದು, ಬೇಲಿಮೇಲ್ ಇಡ್ತೀರಾ ?

ಎಂದು ಸಂಕ್ರಿ ಸಜಲನಯನಳಾಗಿ ಕೇಳಿದಳು.

ದಿನದ ಅನ್ನ ದಿನ ಹುಡುಕಿ ತಿನ್ನುವ ಅವರಿಗೆ ವಾರಗಟ್ಟಲೆ ಶುಶ್ರೂಷೆಗೆಂದು ಕುಳಿತಿರುವಂತಾಯಿತು. ಕುಳಿತುಣ್ಣಲಾಗುವದಿಲ್ಲ. ಇತ್ತ ಆರೈಕೆ ಮಾಡದಿದ್ದರೂ ನಡೆಯದು ಅದಕ್ಕೇ ಸಂಕ್ರಿ,

'ಕೂತ್ವೀ ಅಂತ ತಿಳೀರಿ. ಆಗ ನಿಮ್ಮಂತ ದೊಡ್ಮನಸ್ರು, ಮಾಡಿದ ತಪ್ಗೇ ಅಂತ ಪುಕ್ಕಟೇ ಹಣ ಕೊಡತೀರಾ ! ಅದೇನಿಲ್ಲಾ ತಪ್ಪು ಅಂತ ಯಾರಾರು ಹೇಳ್ತಾರ್ ? ' ಎಂದು ಕೇಳಿದಳು.

ಅಲ್ಲದೆ ಅವರು ಕೆಲಸಕ್ಕೆ ಹೋಗದೆ ಮನೆಯಲ್ಲಿ ಕುಳಿತರೆ ಅನ್ನಕ್ಕೆ ಗತಿ? ಅವರು ದುಃಖಪಡಬೇಕಾಯಿತು. ಉಪವಾಸವಿರಬೇಕಾಯಿತು. ಸಂಗಡ ಒಂಟಿ ಕಳೆಯಿತು. ಅದರಿಂದ ಅವರಿಗೆ ಮತ್ತಷ್ಟು ದುಃಖವಾಯಿತು.

'ಒಂಟೀ ಕಳೀತು. ನಿಮ್ಗದು ಮೂರ್-ಕಾಸೀನ ಒಡ್ವೆಯಾದ್ರೂ ನಮ್ಗದೇ ದೊಡ್ಡ ಭಂಗಾರಾಗಿತ್ತು. ಅದನ್ನಾದ್ರೂ ಇನ್ನು ಕೊಳಾಕಾದಿತಾ ?

ಹೊಟ್ಟೇಗೆ ಇಲ್ಲದೋರು ನಗ ಎಂದಾರಾ ಕೊಂಡಾರಾ ? ಇದರ್ದೆಲ್ಲಾ ದುಃಖಾ ನಿಮಗದ್ಯಾ ? ಒಂದರಹನಿ ಕನಿಕರ ಆದ್ಯಾ ?....ಆಗ್ಲಿ. ನಿಮ್ಮ ಹೊಟ್ಟೆ ತಣ್ಣಗಿರ್ಲಿ ' ಎಂದು ದುಃಖದಿಂದ ಹೇಳಿ ಹೊರಟರು.

ಅಣ್ಣಾಜಿಯವರು ಹುಳ್ಳಹುಳ್ಳಗಾದ ಮೋರೆಯನ್ನು ನಗುತ್ತಿರುವಂತೆ ಮಾಡಿಕೊಂಡರು. ಕರುಣೆಗಾಗಿ ಮಾನವನ್ನು ಮೀಸಲಿಡಲು ಅವರು ಒಪ್ಪ ಲಿಲ್ಲ. ಅದಕ್ಕೇ ' ನಾಯಿ ಬೊಗಳಿದರೆ ದೇವಲೋಕ....ಏನೋನೋ ಅಂತಾ ರಲ್ಲ ! ಹಾಗೇ ' ಎನ್ನುತ್ತ ಮತ್ತೊಂದು ಕವಳ ಬಾಯಿಗೆ ತುರುಕಿಕೊಂಡರು.

*          *          *          *

ತಾಯಿ ಸಂಕ್ರಿ ಜಗುಲಿಯ ಹೊರಸಿಗೆ ಬಂದಳು. ಬರುವಾಗ ಮುನ್ನಿನ ದಿನ ನಡೆದ ದುಃಖ ದೃಶ್ಯವನ್ನು ಕಣ್ಣಾರೆ ಕಾಣುತ್ತ, ಕಣ್ಣೊರಸಿಕೊಳ್ಳುತ್ತಿದ್ದಳು. ಅವಳ ಪ್ರತಿ ಒಂದು ಮುಂದಿನ ಹೆಜ್ಜೆ ಕಷ್ಟ ಪ್ರತಿಛಾಯೆಯಾಗಿತ್ತು. ಮಗಳು ಹೊದ್ದ ಚಿಂದಿಯನ್ನೆತ್ತುವಾಗ ಅವಳ ಕೈ ಹೆದರುತ್ತಿತ್ತು. ಪಕ್ಕನೆ ಅವಳ ಕೈ ಮಗಳ ಕೆನ್ನೆಗೆ ತಗುಲಿತು. ವ್ಯೈ—ಮೊಕ ಬಾತಿತ್ತು. ಸುಡುಸುಡು ಸುಡುತ್ತಿತ್ತು.

' ಇನ್ನೊಂದು ತಿಂಗ್ಳು ಆರೈಕೆ ಮಾಡ್ಬೇಕಾತು. ಔಷ್ತಿಗಾದ್ರೂ ದುಡ್ಡೆಲಿಂದಾ ತರಾಣ ? ಒಬ್ರು ಮನ್ಸ್ಯಾಗೇ ಕೂತಿರ್ಬೇಕಾತು ' ದೇವ್ರೇ ! ಕಷ್ಟಾನೇ ನಮ್ಮ ಪಾಲೀಗಾ ? '

ಮೇಲೆ ನೋಡಿ ಮೋರೆ ಇಟ್ಟಳು. ಸಂಗಡಲೇ ಅಣ್ಣಾಜಿಯವರ ನೆನಪಾಯಿತು. ಏನು ಮಾಡಿದರೂ ಉಪಾಯಗಾಣದೇ

' ನಾಕ ಮಕ್ಳ ತಂದೆಯಾಗಪ್ಪಾ ! ' ಎಂದು ದುಃಖಮಯ ಕಾವಿನಿಂದ ಹರಸಿದಳು....!

---

# ಹರಿದ ಸೆರಗು

ವಿಚಾರಸರಣಿ ಜಡೆಯನ್ನು ತಿರುವಿತಿರುವಿ ಹೆಣೆಯುತ್ತಿದ್ದಂತೆಯೇ ಸಾಗುತ್ತಿತ್ತು. ತಂಗಿ ಸರೋಜಾಳ ಜಡೆ ಹೆಣೆಯುತ್ತ ಶಾಂತಿ ಸದ್ದಿಲ್ಲದೆ ಕಣ್ಣೀರಿಳಿಸುತ್ತಿದ್ದಳು. ಸರೋಜಾ ಹದಿನಾಲ್ಕರಲ್ಲಿದ್ದಳು. ಅವಳ ಮದುವೆ ನೆರಮನೆಯ ನೀಲಕಂಠನೊಡನೆ ನಿಶ್ಚಯವಾಗಿತ್ತು. ಶಾಂತಿಗೀಗ ತನ್ನ ಹದಿನಾಲ್ಕನೆಯ ವಯಸ್ಸಿನಲ್ಲಾದ ಘಟನೆಗಳ ಕಡೆಗೆ ಮನಸ್ಸು ಹರಿದಿತ್ತು. ಸರೋಜಾ, ಕೂದಲು ಬಾಚಿಸಿಕೊಳ್ಳುತ್ತ ಅಕ್ಕನೊಡನೆ ಅವಳ ಸುಖದುಃಖದ ಸಂಗತಿಯನ್ನು ಪುನಃ ಕೇಳುತ್ತಿದ್ದಳು. ಆ ಸಂಗತಿಯನ್ನು ಇಲ್ಲಿಯ ವರೆಗೆ ಹತ್ತು ಹದಿನೈದು ಸಾರೆ ಕೇಳಿರಬಹುದು. ಅದೂ ಅಕ್ಕನ ಬಾಯಿಂದಲೇ! ತಂಗಿಗಾದರೂ ತನ್ನ ಹಾಗಾಗದೇ ಸುಖದಲ್ಲಿರಲೆಂಬ ಹಿರಿಬಯಕೆಯಿಂದ ಅವಳು ಬೇಸರಪಟ್ಟುಕೊಳ್ಳದೆ ಹೇಳುತ್ತಿದ್ದಳು ಅವಳು ಅಳುತ್ತಿದ್ದರೂ ಸಮಾಧಾನದಿಂದ ಹೇಳುತ್ತಿರುವಂತೆ ತೋರಿಸಿಕೊಳ್ಳುತ್ತಿದ್ದಳು. ಆದರೂ ಕದಡಿದಬಗೆಯು ಬೇಗುದಿಯೆಂದು ತಂಗಿಗೆ ಅರಿವಾಗದಿರಲಿಲ್ಲ. ಅಲ್ಲದೆ, ಅದೇನು ಅವಳಿಗೆ ಹೊಸದಾಗಿ ತಿಳಿಯುವದಾಗಿತ್ತಿಲ್ಲ.

*  *  *  *

ಸಣ್ಣ ಶಿಶುವಿರುವಾಗ ಬಹುಶಾಂತಳಾಗಿರುತ್ತಿದ್ದರಿಂದಲೇ 'ಶಾಂತಿ' ಎಂದು ಅವಳಿಗೆ ನಾಮಕರಣವಾಗಿತ್ತು. ಶಾಂತಿ, ಬೇಸರಿಲ್ಲದೆ ದುಡಿದು, ಸರಿಯಾಗಿ ತಿಂದುಂಡು ಬೆಳೆದವಳಾದ್ದರಿಂದ ರಕ್ತ ತುಂಬಿ, ಬಿಳುಪಿನ ಮೈಬಣ್ಣದ ಮೇಲೆ ನಸುಗೆಂಪಿನ ಛಾಯೆಯಿದ್ದು, ಸುಂದರಳಾಗಿ ಕಾಣುತ್ತಿದ್ದಳು. ಆ ಸುಂದರತೆ ಇನ್ನೊಮ್ಮೆ ನೋಡಬೇಕೆಂದು ಕಾಣುತ್ತಿತ್ತೇ ಹೊರತು ಹುಚ್ಚು ವಿಚಾರ ಹುಟ್ಟಿಸುವಂಥದ್ದಿರಲಿಲ್ಲ.

ಅವಳು ಬೆಳೆದ ಹಾಗೆ ಅವಳಲ್ಲಿ ತಾಳ್ಮೆಯು 'ಹಂತ'ವೂ ಏರುತ್ತ ಬಂದಿತು. ಮೋರೆಯ ಮೇಲದು ಎದ್ದು ಕಾಣುತ್ತಿತ್ತು. ಆದಕ್ಕೇ— .

"ಏನ್ ತಾಳ್-ಮ್ಮೆ ಕೂಸೀಗೆ ! ಇನ್ಯಾರೀಗ್—ಸಿಗsವs ! ಇನ್-ಯಾರ ಹಣೇಲ್-ಬರದ್ದs !" ಎನ್ನುತ್ತಿದ್ದರು ಊರಲ್ಲಿಯ ವಯಸ್ಸಾದ ಹೆಂಗಸರು.

* * * *

ನಡುಬಿಸಿಲಲ್ಲಿಯೇ ಬೆಟ್ಟಳ್ಳಿ ಶಾನುಭೋಗರ ಮನೆಗೆ ಬಂದರು ಸಣ್ಣೀ ಮಾಸ್ತರರು.

"ಎಂತಕೋ ಈ ಬದೀಗ್-ಬಹಾಳ್-ಸುಳೀತ್ರಪ ಮಾಸ್ತರ್ರು !" ಶಾನುಭೋಗರ ಮನೆ ಬಿಟ್ಟೀಆಳು ಮಂಜಪ್ಪ ರಾಗ ಎಳೆದ. ಅದು ಜಗುಲಿಯಲ್ಲಿದ್ದ ಶಾನುಭೋಗರಿಗಾಗಲೀ, ಮೆಟ್ಟಲನ್ನೇರುತ್ತಿದ್ದ ಮಾಸ್ತರರಿಗಾಗಲೀ ಕೇಳಿಸಲಿಲ್ಲ.

'ಶಾನುಭೋಗರು ಗೌರವಸ್ಥ ಮನೆತನದವರು. ಬಹು ವಿನಯಶೀಲರು. ಆಡಿದ ಮಾತಿಗೆ ತಪ್ಪದವರು' ಎಂದು ಪ್ರಸಿದ್ಧರಾಗಿದ್ದರು. ಅವರನ್ನು ಸುತ್ತಮುತ್ತ ಹಳ್ಳಿಗಳಿಗೆಲ್ಲ ಪಂಚಾಯತಿಗೆ ಕರೆದೊಯ್ಯುತ್ತಿದ್ದರು. ಶಾನುಭೋಗರು ಎಂದು ಅವರಿಗೆ ಕರೆಯುತ್ತಿದ್ದರೂ, ಅವರ ಮನೆತನ ಮೊದಲು 'ಹೆಗಡೇರ ಮನೆತನ'ವೇ ಆಗಿತ್ತಂತೆ ಆದರೆ, ಇವರ ತಂದೆ 'ಶಾನುಭೋಗಕಿ' ಮಾಡಿದ್ದರಿಂದ ಇವರಿಗೂ ಶಾನುಭೋಗರು ಎನ್ನುತ್ತಿದ್ದರು.

ಶಾನುಭೋಗರು ಮಾಸ್ತರರ ಸಂಗಡ ಗಪ್ಪ ಹೊಡೆದದ್ದಾಯಿತು. ಹೊತ್ತು ಮಧ್ಯಾಹ್ನ ಏಳು ತಾಸಾದರೂ ಮಾಸ್ತರರು ಹೊರಡುವ ನಮೂನೆ ಕಾಣದಿರಲು ಶಾನುಭೋಗರು,

"ಮಾಣೀ, ಮಾಸ್ತರ್ರೀಗೆ ಮೀಯಲಿ ಅಂಗೋಸ್ತ್ರಾ ತಂದಕೊಡು" ಎಂದು ಆಜ್ಞಾಪಿಸಿದರು. ಮಾಸ್ತರರು ಬಹಳ ಭಿಡೆ ಮಾಡಿಕೊಂಡಂತೆ ನಟಿಸಿದರೂ ಒಂದು ಹಂಡೆ ನೀರನ್ನು ಮಿಂದು, ಸಂಧ್ಯಾವಂದನೆ ಮುಗಿಸಿ, ಊಟಕ್ಕೆ ಕುಳಿತರು. ಬಡಿಸಲು ಶಾಂತಿ ಬಂದಿದ್ದಳು. ಮಾಸ್ತರರು ಅವಳನ್ನೇ ನೋಡುತ್ತ ಊಟಕ್ಕೆ ತೊಡಗಲೂ ಮರೆತಿದ್ದರು. ಶಾನುಭೋಗರು,

"ಮಾಸ್ತರ್ರೀ, ಕೂತಬಿಟ್ರಲೀ!" ಅನ್ನ ಪಾಲುಮಾಡುತ್ತ ಕೇಳಿದರು. ಮಾಸ್ತರರು ಬಿಚ್ಚಿದ ತಮ್ಮ ಅರೆನರೆತ ಜುಟ್ಟವನ್ನು ತೀಡಿಕಟ್ಟುತ್ತ,

"ಇದ್ ನಿಮ್-ಮಗಳೇನ್ರಾ? ಆಕ್ನಾ ನೋಡಿದ್ನೇ ಇಲ್ಲಲ್ರಾ!" ಚಕಿತರಾದಂತೆ ನಟಿಸಿದರು. ಶಾನುಭೋಗರು ನಗುತ್ತ—

"ನೋಡ್ಲೇ ಏನ್ರಾ? ಮರತ್ಹೋಗೇಜು ಹೇಳಿ" ಎಂದರು.

"ಮರೆಯಲೆಂತಾ ಮರೀತು....ಮತ್ತೆಲ್ಲಾದ್ರೂ ನಿಶ್ಚಯಾಜಽ?" ನಡುವೆ ಬೆದರಿಸಿದರು ಮಾಸ್ತರರು.

"ಈಗೇನ್-ಆ ಜಿಲ್ಲೆ....ಈಗೆಷ್ಟ್ ವಯಸ್ಸಾತು ಮಾಡ್ರೀ ಮಾಸ್ತರ್ರೀ? ಮಾಣೀ ಹದಿಮೂರು ತುಂಬಿ ಹದಿನಾಲ್ಕರಲ್ಲಿದ್ದು ಯಾರೇ ಸುಖದಲ್ಲಿ ಬೆಳದ್ದಕ್ಕೆ ಎತ್ತರಾಗಿ, ಮೈತುಂಬ್-ಕ್ಯಂಡು ಇದ್ದು ಹೇಳ್ಕೆಽ?" ಎಂದು ತಂದೆಯಾಗಿ ಹೆಮ್ಮೆಯಿಂದ ನುಡಿದರು ಶಾನುಭೋಗರು.

ಅಂತೂ ಮತ್ತೆ ನಾಲ್ಕೈದು ತಿಂಗಳೊಳಗೆ ಕನಿಷ್ಠ ಏಳೆಂಟುಸಾರೆಯಾದರೂ ಶಾನುಭೋಗರ ಮನೆಯ ಊಟಕ್ಕೆ ಮಾಸ್ತರರು ಹಾಜರಿದ್ದರು.

* * * *

ಕೊರಸೆಯನ್ನು ಹಳ್ಳಿಯ ಲೆಕ್ಕದಲ್ಲಿ ಹಿಡಿದರೂ ನಾಲ್ಕೈದು ಅಂಗಡಿಗಳಿದ್ದವು. ನಡೆವಳಿ ಎರಡೂ ನಮೂನೆಯದು ಇತ್ತು. ಎರಡು ಚಹದಂಗಡಿ, ಎರಡು ಕಿರಾಣಿ ಅಂಗಡಿ, ಒಂದು ಬೀಡಿ ಅಂಗಡಿ ಎಲ್ಲವೂ ಒಂದೇ ಕಡೆಗಿರದೆ ಬೇರೆಬೇರೆ ಕಡೆಗಿದ್ದವು ಆ ಎರಡು ಕಿರಾಣಿ ಅಂಗಡಿಗಳಲ್ಲಿ ಒಂದು ಸಣ್ಣೀ ಮಾಸ್ತರರದು ಅದು ಅವರ ತಂದೆ ಇಟ್ಟದ್ದು. ಸಣ್ಣೀ ಮಾಸ್ತರರಿಗೆ ವಯಸ್ಸು ನಲವತ್ತೆರಡರ ಸುಮಾರಾಗಿತ್ತು. ದೇಹ ಕಿಟಕಿಟ ಸುಕ್ಕುಗಟ್ಟಿದ ಮೋರೆ. ಆದರೂ "ಗಟ್ಟೀ ಇದ್ರೀ ಮಾಸ್ತರ್ರು!" ಎನ್ನಿಸಿಕೊಂಡಿದ್ದರು

ಊರ ಪುಂಡ ಹುಡುಗರಿಂದ. ಮುದುಕಿಯಂತೆ ಕಾಣುತ್ತಿದ್ದ ಅವರ ಹೆಂಡತಿಗೆ "ಮೊನ್ನೆ ಮೂರ್-ತಿಂಗ್ಳಾಗಿ ಹೋತದು !" ಎಂದು ಊರಿನ ಹೆಂಗಳೆಯರು ಅನ್ನುತ್ತಿದ್ದರು. ಮಾಸ್ತರರಿಗೆ "ಟ್ರೇನಿಂಗ್ ಆಜಿಲ್ಲೆ" ಎಂದು ಊರವರಿಗೆಲ್ಲ ತಿಳಿದಿತ್ತು. ಆದರೂ ಅವರು ಚಿಟ್ಟಳ್ಳಿ ಮಾಸ್ತರರಾಗಿದ್ದರು. ಮೇಲ್ಗ-ಸುಬು ಮಾಸ್ತರಿಕೆಯಾದರೂ ತಂದೆಗಳಿಸಿಟ್ಟ ಜಮೀನಿನ ತುಂಡೊಂದು ಇತ್ತು. ಅಂಗಡಿಯನ್ನು 'ರಂಗಾಣಿ' ನಡೆಯಿಸಿಕೊಂಡು ಹೋಗುತ್ತಿದ್ದ. ರಂಗಾಣಿ ಮಾಸ್ತರರಿಗೊಬ್ಬನೇ ಮಗ. ಮುದ್ದಿನಿಂದ ಆ ಹೆಸರನ್ನು ಇಟ್ಟಿದ್ದರು. ಅದಕ್ಕೇ ಅವನು ಊರಿಗೆಲ್ಲ ರಂಗಾಣಿಯಾಗಿದ್ದನು. "ರಂಗಾಣಿ ಮೇಟ್ರಿಕ್-ನಲ್ಲಿ ಮೂರ ಸರ್ತಿ ಲಗಾಟಿ ಹೊಡದ್ನಡೋ !" ಎಂದು ಊರಿನ ಹುಡುಗರು ಎದುರಿಗೇ ಗೇಲಿಮಾಡಿದರೂ ನೊಣ ಝಾಡಿಸಿಕೊಂಡಹಾಗೆ ಸುಮ್ಮನುಳಿಯುತ್ತಿದ್ದ. ಅವನು ಕೊಬ್ಬಿನಿಂದ ಧಪ್ಪಧಪ್ಪವಾಗಿ ಕಾಣುತ್ತಿದ್ದ. ಒಮ್ಮೊಮ್ಮೆ "ಎದ್ರೆ ಕೆಟ್ಟಿ ನೋಡು !" ಎಂದು ತನ್ನ ಭುಜವನ್ನು ತಾನೇ ತಟ್ಟಿಕೊಳ್ಳುತ್ತಿದ್ದ. ಅವನು ಇಡೀ ದಿನ ಕುಳಿತೇ ಇದ್ದರೂ ಏನು ತಿಂದರೂ ಕರಗಿಸುತ್ತಿದ್ದ. ಅವನಿಗೆ ಮತ್ತಾವ ಕೆಲಸವಿಲ್ಲದಿದ್ದರೂ ಅಂಗಡಿಗೆ ಸಾಮಾನಿಗೆಂದು ಬಂದ ಒಕ್ಕಲಿಗ ಹೆಂಗಸರ ಎದೆಯನ್ನು ನೋಡಿ, ಅವರೆದುರಿಗೆ ಗೇಲಿಮಾಡುವ ಕೆಲಸವಿದ್ದೇ ಇರುತ್ತಿತ್ತು. ಅವರು ಎದುರಿಗೆ 'ಒಡೆಯ' ಎಂದು ಸುಮ್ಮನುಳಿದರೂ ಹಿಂದುಗಡೆ "ನಾಯಂಬ್ಡಾರಿಗೆ" ಎಂದುಕೊಳ್ಳುತ್ತಿದ್ದರು.

*    *    *    *

"ತಂಗೀ ಶಾಂತಿ, ನಿನ್ನ ಕೇಳಿಬಿಡsನ ಹೇಳ್-ಬಂದಿ ಹ್ಯಾಂಗೆ ? ಎಂಗಕ್ಕೆಲ್ಲಾ 'ಅಕ್ಕು' ಹೇಳ್-ಕಾಣ್ತಪ !" ಎಂದು ಸಣ್ಣೀಮಾಸ್ತರರು ಊಬಿಸಿ ಉಬ್ಬಿಸಿದ ಗಾಳಿ ಬಿಟ್ಟರು ಶಾನುಭೋಗರು. ಮಾಸ್ತರರು ಮಾತುಮಾತಿನಲ್ಲಿ ವಚನ ತೆಗೆದುಕೊಂಡಿದ್ದರು. "ನಿನ್ಮಗನಿಗೆ ಎನ್ನ ಮಗಳ್ನ ಕೊಡ್ತ್ನಪ" ಎಂದು.

ಶಾಂತಿ ತಲೆತಗ್ಗಿಸಿದಳು, ಮಾತನಾಡಲಿಲ್ಲ.

"ಕೂಸು ನಾಚ್ಗೆ ಮಾಡ್ಕ್ಯತ್ತು. ವಯಸ್ಸಿನ್ನೂ ಸಣ್ದಲ್ದs !" ಎಂದುಕೊಂಡರು. ಮತ್ತೊಮ್ಮೆ "ನಾಚ್ಕೆ ಮಾಡ್ಕ್ಯಳಡs" ಎಂದು ಕೇಳಿದಾಗ

" ನಿಂಗೇ ನೋಡಿ ಮಾಡಿದ್ರಾತಲೀ. ನಿಂಗs ಏನ್ ಎನ್ನ ಹಾಳೀಗ್ ಮಾಡ್‌ತ್ರs ? " ತಂದೆಯನ್ನು ಪೂರ್ಣ ನಂಬಿರುವ ಶಾಂತಿ ಸಣ್ಣ ಧ್ವನಿಯಲ್ಲಿ ಉಸುರಿದಳು. ಅದೇಕೋ ಅವಳಿದೆ ನಡುಗುತ್ತಿತ್ತು. ಮಾತು ಕಟ್ಟಿದಂತಾಗುತ್ತಿತ್ತು. ಸುಯಿಲೊಂದು ಹೋದಮೇಲೆ ಸ್ವಲ್ಪ ಸುಧಾರಿಸಿಕೊಂಡಳು.

* * * *

'ಹತ್ತು ಸುಳ್ಳು ಹೇಳಿ ಒಂದ್-ಮದ್ವೆಮಾಡ್ಬsವಡ!' ಎನ್ನುವಂತೆ ಶಾಂತಿಯನ್ನು ತಮ್ಮ ಮಗನಿಗೆ ಮದುವೆ ಮಾಡಿಸಿಕೊಂಡು ಬಂದರು ಸಣ್ಣೀ ಮಾಸ್ತರರು. ಶಾಂತಿ ಗಂಡನ ಮನೆಗೆ ಬಂದು, ಗಂಡನೊಡನೆ ಪಶು ಜೀವನ ಸಹಿಸಹತ್ತಿ ಒಂದೆರಡು ತಿಂಗಳುಗಳಾದವು ಮರುದಿನ ದೊಡ್ಡ ಹಬ್ಬ. ಶಾಂತಿಯ ತಂದೆ ಹಬ್ಬಕ್ಕೆ ಕರೆಯಲು ಬಂದಿದ್ದರು ಮಾನಮರ್ಯಾದೆ, ಊಟಉಪಚಾರವೆಲ್ಲ ಆದಮೇಲೆ ಮಾತಿಗಾರಂಭವಾಯಿತು. ಸೆರೆನೋಡಿ ಉಳಿ ಹಾಕುತ್ತಿದ್ದ ಮಾಸ್ತರರು,

ಎನ್ಮನೆ ಅದೂ ಮನೇಲಿಲ್ಲ. ಹಬ್ಬ ಮರ್ದಿವ್ಸ ಗಂಡಹೆಂಡ್ತಿ ಬಂದ್-ಬಿಡ್ರ—ಹಬ್ಬಾಗಿ ದೇವ್ರೀಗೆ ನೇವೇದ್ಯಕ್-ಮಾಡ್ದಿದ್ರೆ ಬತ್ರs? ಮನೇಲ್ಯಾದ್ರೂ ಬೇಕಾತಲೀ !" ಎಂದು ಹಾರಿಸಿಯೇ ಬಿಟ್ಟರು.

ಶಾನುಭೋಗರಿಗೆ ಇತ್ತಲಾಗಿ ಮಾಸ್ತರರ ಮಗನ ಸುದ್ದಿಯೆಲ್ಲ ತಿಳಿದಿತ್ತು. " ಆದ್ಮೇಲಾಟಿ ಪ್ರಯೋಜನೇನು ? " ಎಂದೂ, " ಅದೇನ್ ಸರೀ ಅಕ್ಕು " ಎಂಬ ಒಂದು ಬಗೆಯ ಭರವಸೆಯಿಂದಲೂ ಸುಮ್ಮನುಳಿದಿದ್ದರು. ತಂದೆಗೆ ಹಾಸಿಗೆ ಹಾಸಿಕೊಡಲು ಹೋದ ಶಾಂತಿ ಸದ್ದಿಲ್ಲದೆ ಕಣ್ಣೀರು ಹಾಕಿದಳು. ತಂದೆ—

" ಮೊದ್ಲು ಗೊತ್ತಿಲ್ದೇ ಹೋತು. ರಂಗಾದ್ರೂ ಸರೀ ಇದ್ನs ? " ಅನುಭವದ ನುಡಿಯಿಂದ ಕೇಳಿದರು.

" ಹುವ್....ಇದ್ನs "

ಎಂದು ಸೆರಗನ್ನು ಕಣ್ಣಿಗೊತ್ತಿಕೊಂಡಳು. ಅದರರ್ಥ ಶಾನಭೋಗರಿಗೆ ತಿಳಿಯದಿರಲಿಲ್ಲ.

* * * *

“ ತಮ್ಮಾsರಂಗಾಣೀ, ಇವತ್-ನೀನೇ ಅಂಗಡಿಲ್ಲಿ ಮನಕ್ಕಂಬ್ದೇಂತ್ ಕಾಣ್ತೋ! ಎಂಗೆಂತಕ್ಕೋ ಜ್ವರ ಬಂದ್ಹೋತರ! ಅಂಗ್ಡಿಲ್ಯಾರಾದ್ರೂ ಇಲ್ದಿದ್ರೆ....ಬೂದಗಳವು ಆಗ್ಹೋಕಲs !” ಎನ್ನುತ್ತ ಮಾಸ್ತರರು ಕೆಮ್ಮುವ ನೆವ ಮಾಡಿಕೊಂಡು, ತಲೆತಗ್ಗಿಸಿ ನಕ್ಕರು.

“ ಅಪ್ಪ ಹೇಳಿದ್ಮೇಲೆ ಆಪೀಲೇ ಇಲ್ಲೆ ” ಎಂದು ತಿಳಿದ ರಂಗಾಣಿ.

“ ಅಡ್ಡೀ ಇಲ್ಲs ” ಎಂದು ಅಂಗಡಿಗೆ ತೆರಳಿದ, ಮಲಗಲು, ಕಾಯಲು, ಶಾಂತಿಗಿದು ತಿಳಿದಿರಲಿಲ್ಲ ಅವಳು ಗಂಡ ಬರುತ್ತಾನೆಂದು ಕೋಣೆಯ ಅಗಳಿ ಹಾಕಿಕೊಳ್ಳದೆ ಮಲಗಿದ್ದಳು. ಅವಳಿಗೆ ಜೊಂಪು ಮಾತ್ರ ಹತ್ತಿತ್ತು. ಭಾರವಾಗಿ ಕೈಯನ್ನು ಎದೆಯಮೇಲೆ ಇಟ್ಟ ಹಾಗಾಯಿತು. ಸಟ್ಟನೆ ಎದ್ದು,

“ ಯಾರು ? ” ಎಂದಳು.

“ ನಾ....ನು ” ಧ್ವನಿ ನಡುಗುತ್ತಿತ್ತು. ಧ್ವನಿಯ ಗುರುತು ಅವಳೆದೆಯನ್ನು ನಡುಗಿಸಿತು. ಮಾವ ಬುಸುಬುಸು ಶ್ವಾಸಬಿಡುತ್ತಿದ್ದ.

“ ಮಾವ....ಅಯ್ಯಯ್ಯೋ ! ” ಚೀರಿದಳು.

ಮನೆಯಲ್ಲಿ ಯಾರೂ ಇಲ್ಲವೆಂದು ಮಾವನಿಗೆ ತಿಳಿದಿತ್ತು. ಆದರೆ ‘ ಆಚೆಯ ಮನೆಯವರಿಗೆ ತಿಳಿದರೆ ? ’ ಎಂದು ಹೊರಬದಿಗೆ ಜಾರಿದ. ಬಾಗಿಲ ಅಗಳಿ ಹಾಕಿಕೊಂಡು ತುಂಬ ಅತ್ತಳು ಶಾಂತಿ. ಗಂಡನಿಗಿದನ್ನು ತಿಳಿಸಿದರೆ ತನ್ನ ಮೇಲೇ ಸಂಶಯಪಟ್ಟಾನೆಂದು ತಿಳಿಸಲಿಲ್ಲ. ಮರುದಿನವೂ ಗಂಡ ಅಂಗಡಿಗೆ ತೆರಳಿದ. ಇವಳು ಅಗಳಿ ಹಾಕಿಕೊಂಡೇ ಮಲಗಿದ್ದಳು. ನಿದ್ದೆ ಹತ್ತಲಿಲ್ಲ. ಸ್ವಲ್ಪ ಸಮಯದ ನಂತರ—

“ ಶಾ....ಂತಿ ” ಹಗುರ ಧ್ವನಿ ಕೇಳಿಸಿತು. ಅದು ಮಾವನ ಧ್ವನಿಯೆಂದು ಚನ್ನಾಗಿ ತಿಳಿದಳು ಅವಳು. ಬಹಳ ಸಾರೆ ಏನೇನೋ ಹೇಳಿ ಕರೆದ ಮಾವ. ಅವಳು ಮಾತನಾಡಲೂ ಇಲ್ಲ. ತುಟಿ ವಡೆಯಲೂ ಇಲ್ಲ. ಕಡೆಗೆ ಹಲ್ಲು ಕಡಿದ ಶಬ್ದ ಕೇಳಿಸಿತು. ಶಾಂತಿ ನಡುಗಹತ್ತಿದಳು. ಅಂದೂ ಬೆಳಗಿನ ವರೆಗೆ ಕಣ್ಣವೆ ಮುಡಿಯಲಿಲ್ಲ ಶಾಂತಿ.

* * * *

“ ಶಾಂತೀ, ಗದ್ದೀಗೆ ನೀರಹೊಯ್ಯಲೆ ಈರಿ ಕರ್ಕಂಡ್ ಹೋಗು ! ” ಎಂದರು ಸೊಸೆಗೆ ಮಾವ. ಶಾಂತಿ “ ಈರಿ ಸಂಗ್ತೀಗೆ ಇರ್ತಲಿ ” ಎಂದು

" ಹುಂ " ಎಂದಳು. ನಸುಕಿನ ಐದು ಗಂಟೆಗೇ ಈರಿಯನ್ನು ಸಂಗಡ ಕರೆದುಕೊಂಡು ನಡೆದಳು ಗದ್ದೆಗೆ. ಕಾಯಿಸಲ್ಪಡದ ಹಿತ್ತಲಿಗೆ ನೀರು ಕಾಣಿಸಲು ಮತ್ತೊಂದು ಹತ್ತು ನಿಮಿಷಗಳೊಳಗೇ ಬಂದ ಮಾವ.

" ಈರೀ, ಮನೀಗ್ ಹೋಗಿ ಇನ್ನೊಂದ್ ಕೊಡ ತಕಂಡು ಬಾ. ಮರ್ತೇ ಬಂದ್ಬಿಟ್ಟೆ" ಎಂದು ಈರಿಯನ್ನು ಕಳುಹಿದರು. ಶಾಂತಿಗೆ ಓಡಿ ಹೋಗುವಂತಾಯಿತು. ಮಾವ ಹತ್ತಿರ ಬಂದು ಶಾಂತಿಯ ಸೆರಗನ್ನು ಹಿಡಿದರು.

" ಥೂ....ಇದೆಂತಾ ನಮೂನ್ಯೇನs" ತಿರಸ್ಕಾರಯುಕ್ತವಾಗಿ ಅಂದಳು. ಮಾತಾಡಿದ್ದೇ ತಪ್ಪಾಯಿತು. ' ಥೂ ಎಂದರೆ ಇತ್ತಿತ್ತ ಬಾ ' ಎಂದ ಹಾಗಾಯಿತು. ಕೈಯನ್ನು ಹಿಡಿದು ತನ್ನೆಡೆಗೆ ಎಳೆಯಹತ್ತಿದ. ಕೊಸರಿಕೊಳ್ಳ ಹತ್ತಿದಳು. ಮತ್ತೂ ಗಟ್ಟಿಯಾಗಿ ಎಳೆಯತೊಡಗಿದ. ಶಾಂತಿಯೂ ಧೃಡ ಕಾಯಳಾಗಿದ್ದಳು ರೋಗರುಜೆ ತಿನ್ನದೆ. ತಪ್ಪಿಸಿಕೊಳ್ಳಲು ಅತ್ತಿಂದಿತ್ತ ಜಗ್ಗಾಡು ವದನ್ನೇ ಮಾಡುತ್ತಿದ್ದಳು. ಈರಿಗೆ ಮಾವನ ಹೊಳವು ಮೊದಲೇ ತಿಳಿದಿತ್ತು. ಏಕೆಂದರೆ ಅವಳೂ ಇದೇ ರೀತಿ ಮಾವನ ರುಚಿ ಒಮ್ಮೆ ಅರಿತಿದ್ದಳು. ಕೊಡ ತೆಗೆದುಕೊಂಡು ಲಗುಬಗೆಯಿಂದ ಬರುತ್ತಿರುವ ಅವಳು ದೂರದಿಂದ ಕಂಡಳು.

" ಹೈ ! ಹೈ ! ಸುಟ್ಟು ಹೋರಿ ಹಿಡ್ಲ ಬದೀಗೇ ಬರ್ತೈಪ ! ನಿನ್ ಮೊಕಾ ಸುಟ್ಟುಹೋಗ್ಲಿ ! " ಎಂದು ಹೋರಿಯನ್ನು ಅಟ್ಟಿದಂತೆ ಮಾಡಿದಳು. ಮಾವ ಕೈಬಿಟ್ಟ. ಹೀಗೇಯೇ ಮಾವ ಹೋಗಲಾರದ ಜಾಗದಲ್ಲಿ ಸಹ ಹೋಗಿ ಪ್ರಯತ್ನಪಟ್ಟ. ಶಾಂತಿಯೂ ಅಳುಕಲಿಲ್ಲ. ತಾಳ್ಮೆಗೆಟ್ಟು ಕೋಲಾಹಲ ಮಾಡಲಿಲ್ಲ. ಸಹಿಸಿದಳು. ಇನ್ನಿಲ್ಲದ ತಾಳ್ಮೆಯಿಂದ ಸಹಿಸಿದಳು. ವಿಫಲನಾಗುತ್ತ ಬಂದ ಮಾವ ಪ್ರತೀಕಾರಕ್ಕೆ ಸಿದ್ಧನಾದ. 'ಕೂತಿದ್ದು ತಪ್ಪು. ನಿಂತಿದ್ದು ತಪ್ಪು' ಎಂದವಳ ಗಂಡನಿಂದ ಹೇಳಿಸತೊಡಗಿದ. ಇಲ್ಲದ ಸುದ್ದಿಯನ್ನು ಹುಟ್ಟಿಸಿ ಊರಲ್ಲೆಲ್ಲ ಸಾರಹತ್ತಿದ.

" ಎಮ್ಮನೆ ಮಾಣೀಗೂ ಬುದ್ಧಿಲ್ಯ ! ಆಗ ಹೀಂಗೇ ಹೇಳ್-ಗೊತ್ತಿದ್ರೆ ಆ್ಲ್ಲಿ ಎಂತ ಮಾಡ್ಸಗ್ಯಂಡು ಬರ್ತಿದ್ನs ಎಮ್ಮನೆ ಮಗಂಗೆ ? ಎಂತಾ ಹೇಳsದೂ ಆ ಬೀರ ಇದ್ನಲೀ....ಅವನ್ನೇಯೋ...." ಎಂದು ತನ್ನ ಮನೆತನದ ಲಕ್ಷ್ಯ

ವಿಲ್ಲದೆ ಎನ್ನುತ್ತಿದ್ದ. ಈ ಸುದ್ದಿ ನೇರವಾಗಿ ರಂಗಾಣಿಗೆ ತಲುಪುತ್ತಿತ್ತು. ಅದರದಕ್ಕೆ ವಿಷಗಳಿಗೆ ಇನ್ನೂ ಬಂದಿದ್ದಿಲ್ಲ.

ಶಾಂತಿಯ ಅತ್ತೆ ನೆಂಟರ ಮನೆಯಲ್ಲೇ ಕಾಲವಾದಳು, ವಾತರೋಗ ದಿಂದ ಅತ್ತೆಯ ಉತ್ತರಕ್ರಿಯೆಯ ಅಡಿಗೆಗೆ ಕಾಯಿಪಲ್ಲೆ ತರಲು ಗದ್ದೆಗೆ ಈರಿಯೊಂದಿಗೆ ಶಾಂತಿ ಹೋಗಿದ್ದಳು. ಮೂರು ಬುಟ್ಟಿಯಷ್ಟನ್ನು ಇಬ್ಬರಿಂದ ತರಲು ಸಾಧ್ಯವೆ? "ಒಡತೀ, ಅವ್ರ ಕರೀಲಾ?" ಈರಿ ಕೇಳಿದಳು.

"ಹೂಂ, ಕರೀಯೋ. ತಂದು ಕೊಡ್ಲಿ" ಸಹಜವಾಗಿ ಶಾಂತಿ ಹೇಳಿ-ದಳು. ಸಮಯ ಹುಡುಕುತ್ತಲೇ ಇರುವ ಮಾವ ಇದನ್ನು ಕೇಳಿ, ಮಗನನ್ನು ಕರೆದುಕೊಂಡು ಬಂದು ಅಡಗಿ ನಿಂತ. ಈರಿ ಬೀರನನ್ನು ಕರೆದು ತಂದಳು. ಬೀರ ಈರಿಗೆ ಒಂದು ಬುಟ್ಟಿಯನ್ನು ಎತ್ತಿದ. ಅವಳು ಹೊತ್ತುಕೊಂಡು ಮುಂದಾದಳು. ಬೀರ ಒಡತಿಗೆ ಬುಟ್ಟಿ ಎತ್ತಿದ. ಅದನೇ ಉದಾಹರಣೆಗಾಗಿ ತೋರಿಸುವದಿತ್ತು ಮಾವನು ಮಗನಿಗೆ. ಶಾಂತಿ ಬುಟ್ಟಿ ಹೊತ್ತುಕೊಂಡು ಬರುವಾಗ ಮಧ್ಯದಲ್ಲಿಯೇ ಧೊಪ್ಪನೆ ಮುಕ್ಕುರುಸಿ ಬಿದ್ದಳು; ಗಂಡನು ಕಾಲ ಗಂಟಿನ ಮೇಲೆ ಅಡ್ಡ ಬಡತಿಗೆ ಹೊಡೆದದ್ದರಿಂದ.

"ಅಯ್ಯೋ" ಎಂದು ಕೂಗಿದಳು ಶಾಂತಿ.

"ಮಾಡಿದ್ದಲ್ಲೇ ಕೂಗ್ತೀ?" ದೊಣ್ಣೆಯಿಂದ ಹೊಡೆಯಹತ್ತಿದ.

"ಅಣ್ಣ ಎಂತಾ ಮಾಡ್ದಿ ಈಗss" ಎಂದು ಶಾಂತಿ ಮಾತು ಮುಗಿಸು ವದರೊಳಗೇ "ಮತ್ತಿನ್ನೇ ಕೇಳ್ತಿ ರಂಡೇ ಬೀರನ್ನ..."

"ಅಯ್ಯೋ! ನಿಂಗs ದಮ್ಮಯ್ಯಾ. ಬುಟ್ಟಿ ಎತ್ತಿಕೊಟ್ಟ ವಜ್ಜ ಹೇಳಿ. ಅಷ್ಟೆಯಾ" ಎಂದಳುತ್ತ ಗಂಡನ ಕಾಲು ಹಿಡಿದಳು. ಆದರೂ ದನ ಬಡಿತ ಅಂದವಳಿಗೆ ತಪ್ಪಲಿಲ್ಲ. ಹೇಗೇಯೋ ಒಂದಿಲ್ಲೊಂದು ಕಾರಣದಿಂದ ದಿನವೂ ಅವಳಿಗೆ ಹೊಡೆತವಿದ್ದೇ ಇರುತ್ತಿತ್ತು ಇತ್ತಲಾಗಿ.

ಮೈನುಗ್ಗಾಗಿತ್ತು ಹೊಡೆತ ತಿಂದು ಒಂದು ದಿನ. ಮರ್ಯಾದೆಗಾಗಿ ಎದ್ದು ಅಡಿಗೆ ಮಾಡಿ ಬಡಿಸುತ್ತಿದ್ದಳು. ಸಾರು ಸರಿ ಆಗಿಲ್ಲವೆಂದು ಕೊಂಕು ನುಡಿದ ಮಾವ. ಗಂಡ ಎಂಜಲು ಕೈಯಲ್ಲೇ ಕೆನ್ನೆಗೆ ಹೊಡೆದ. ವಿಷಗಳಿಗೆ ಕಾಲಿಟ್ಟಿತು! ಅಂದು ರಾತ್ರಿ ಬಹಳ ತ್ರಾಸಾದ್ದರಿಂದ ನರಳುತ್ತಿರುವ ಶಾಂತಿ ಗಂಡನ ಪಶುವೃತ್ತಿಗೆ ಆತಂಕ ಮಾಡಿದಳು. ಅದಕ್ಕಾಗಿ ಮೈಮುಖನೋಡದೇ

ಒದ್ದು ಒದ್ದು ಹೊರಗೆ ತಂದನು, ಕೂದಲನ್ನು ಹಿಡಿದೆಳೆಯುತ್ತ. ಶಾಂತಿ ಮಾತ ನಾಡಲಿಲ್ಲ. ಉಸಿರೆತ್ತಲಿಲ್ಲ ಕೂಡ. ಆದರೆ ಎಳೆದು ತರುವಾಗ ಬಾಗಿಲ ಕೆಳ ಚೌಕು ಪಟ್ಟೆ ಹಣೆಗೆ ತಾಗಿ, ಕೊಯ್ದಂತಾಗಿ ರಕ್ತ ಸೋರಹತ್ತಿತು.

“ ಹನೀನೂ ದಯಾಕರ್ಣೇನೆ ಬತ್ತಿಲ್ಯs ? ” ದೈನ್ಯದಿಂದ ಕಲ್ಲೂ ಕರಗುವಂತೆ ಕೇಳಿದಳು.

“ ಕರುಣೆ ? ನಿನ್ಗೆ ಕರುಣೇ ಮಾಡ್ತಿ ರಂಡೇ! ಕರ ತಿಂದು, ಮರೀ ತಿಂದು ಹೆಬ್ಬುಲಿಯಾದೆ ಅಲ್ದs ? ನಿನ್ಗೆ ಅಣ್ಣ ಬೇಡಾದಿ ಅಲ್ದs ? ಎಲ್ಲಾ ಬಿಟ್ಟು ಅಪ್ಪನ ಕೋಣೆ ಬಾಗ್ಲ ತಟ್ಟಿದ್ನಡ ! ” ಎಂದು ಕಾಲು ಕೈಗಳನ್ನು ಕಟ್ಟಿದ. ಹೊರಗೆ ಕೂಡ್ರಿಸಿ ಕೂದಲ ತುದಿಯುನ್ನೂ, ಸೆರಗಿನ ತುದಿಯುನ್ನೂ ಕಟುಕರಿಗಿಂತ ಮಿಗಿಲಾಗಿ ಕತ್ತರಿಸಿದನು. ಕಟ್ಟಿದ ಹಗ್ಗ ಬಿಚ್ಚಿ,

“ ಹೋಗು, ಎಲ್ಲಿಗೆ ಹೋಗ್ತೆ ಹೋಗು ! ಅಲ್ಲಿದ್ರೆ ಆ ಮಿಂಡ ಬೀರನ್ನೇ ಕೂಡ್ಕ್ಯಂಡ್ ಹೋಗು ! ಹಾಳಾಗಿ ಹೋಗು ! ಇನ್ನೆನ್ಗೂ ನಿನ್ಗೂ ಏನೂ ಸಂಬಂಧಿಲ್ಲೇ ” ಎಂದು ಕೂಗಿದನು. ಅಷ್ಟಾದರೂ ಶಾಂತಿ ಗಂಡನ ಕಾಲುಗಳನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದಳು ಅಲ್ಲೇ ಅವಳಿಗೆ ಬವಳಿ ಬಂದಂತಾಯಿತು. ಕುಂಕುಮ ಅಳಿಸಲು ಗಂಡ ಹಣೆಗೆ ಕೈ ಇಕ್ಕಿದಾಗ ಕೈ ಹಿಡಿದು,

“ ಆದ್ರನಾದ್ರೂ ಸರಿಯಾಗಿ ಬಿಟ್ಕೊಡೀ ” ಎಂದು ಅಳುತ್ತ ಬೇಡಿಕೊಂಡಳು. ಅಂದು ರಾತ್ರಿಯೇ ತಂದೆಯ ಮನೆಯಲ್ಲಿ ಹೆಣ್ಣು ಮಕ್ಕಳಿಗಿದ್ದ ಏಳುಮೆಟ್ಟಿನ ಜಾಗ ತುಂಬಿಕೊಂಡಿತು. ಶಾನುಭೋಗರು ಒಮ್ಮೆ ಉರಿದೆದ್ದು ಒಮ್ಮೆ ಕೂಗಿ ಅತ್ತು,

“ ಗಂಡ್ಮಕ್ಳಂತೇ ಆತು ಬಿಡು. ನಿನ್ನೊಬ್ನ ಕೈ ಬಿಡ್ತ್ನಿಲ್ಲೆ ” ಎಂದು ಮೋರೆ ತೊಳೆಯಲು ನಡೆದರು ನಸುಕಾದ್ದರಿಂದ.

ಮಾವ ಮರುದಿನ

“ ಎನಗೊತ್ತೇ ಇಲ್ಲೆ ! ರಾತ್ರೆ ಬೆಳಗಪ್ಪದ್ರೊಳಗೆ ಹೀಂಗೆಲ್ಲಾ ಆಜು ಹೇಳಿ ಯಾರೀಗ್-ಗೊತ್ತು ? ಅಣ್ಣ ಆವರಿಗೂ ಹೇಳಿ ನೋಡ್ದೆ ಎನ್ ಕೈಲಪ್ಪಷ್ಟು. ಅವೆಂತಾ ಎನ್ನ ಮಾತು ಕೇಳ್ತ್ನs ? ಆದರೊಳ್ಗೂ ಗಂಡಂಗೇ

ಬೇಡಾನ್ಮೇಲೆ ನಮ್-ಕೈಲೆಂತಾ ಮಾಡಕ್ಕಾಗ್ತ ? ಎಂದು ವ್ಯಸನಪಟ್ಟವರಂತೆ ನಟಿಸಿದರು.

ಇದಾದ ನಾಲ್ಕೈದು ತಿಂಗಳಿಗೆ ನಿಜವಾಗಿಯೂ ಅವರು ಅಳುವಂತಾಯಿತು. ಸುಳಿದು ಬಿಟ್ಟ ಬಸವನಂತಾದ ರಂಗಾಣಿ ರೋಗ ಹಿಡಿಸಿಕೊಂಡು, ಪೇಟೆಯ ಆಸ್ಪತ್ರೆಯಲ್ಲೇ ಮರಣ ಹೊಂದಿದ ಸುದ್ದಿ ಶಾಂತಿಗೂ ತಲುಪಿತು. ಅವಳು ನಾಲ್ಕೈದು ದಿನಗಳವರೆಗೆ ಮೂಲೆಗೆ ಮೂಲೆಯಾಗಿದ್ದಳು. ಏನಿಲ್ಲದಿದ್ದರೂ ಕುಂಕುಮ ಬಟ್ಟೊಂದರ ಮೇಲೆ ವಿಶ್ವಾಸವಿಟ್ಟು ಬದುಕಿದ ಅವಳಿಂದ ಅದನ್ನೂ ಕಸಿದುಕೊಂಡುಹೋಯಿತು ಆ ಸುದ್ದಿ! ಅವಳ ನೀಳವಾದ ಕೂದಲುಗಳ ಬಗ್ಗೆ ಕೆಲವರು ಕಟುಮಾತನಾಡಿದರು. ಆದರೆ, ಶಾನುಭೋಗರು ಅದಕ್ಕೆ ಒಪ್ಪಲಿಲ್ಲ. ಅಷ್ಟೇ ಅಲ್ಲ ಆ ವಿಷಯ ತೆಗೆದವರಿಗೆ ಕಟುವಾಗಿ ಮಾತನಾಡಿದರು. ಶಾಂತಿ ಅದರ ಬಗ್ಗೆ ಏನನ್ನೂ ಹೇಳಲಿಲ್ಲ. ಬೆಂಕಿ ಹತ್ತಿದ ಗುಡಿಸಲಿನೊಳಗಿನ ಕೈಗೂಸಾಗಿದ್ದಳು.

* * * *

ಕುಂಕುಮವಿಲ್ಲದ ಹಣೆ, ಸಹಜವಾಗಿ ಗಂಟು ಹಾಕಿಕೊಂಡ ಮುಡಿ, ಸದಾ ಅಧೋಮುಖಿಳಾಗಿ ಚಿಂತಿಸುತ್ತಿರುವ ಮುಖ, ಇವು 'ಅವಳು ಶಾಂತಿಯೇ?' ಎಂಬ ಸಂದೇಹಕ್ಕೆ ತುಂಬ ಸಹಕಾರಿಯಾಗಿದ್ದವು. ಆದರೆ ಅವಳ ತುಂಬಿದ ತಾರುಣ್ಯವನ್ನು ನೋಡಿ ಅವಳ ತಂದೆ ಮರಮರನೆ ಮರುಗುತ್ತಿದ್ದರು. ಅವಳು ಗಂಡನು ಹರಿದ ಸೀರೆಯ ಸೆರಗನ್ನು ಹೊಲಿದುಕೊಳ್ಳದೇ ಜೋಪಾನದಿಂದ ಉಟ್ಟುಕೊಂಡು ತಿರುಗುವಾಗ ತಂದೆಯ ಕರಳು ಕಿವುಚಿದಂತಾಗುತ್ತಿತ್ತು. ಮರೆಗಟ್ಟುತ್ತಿತ್ತು. ಕಣ್ಣು ಕತ್ತಲೆಗಟ್ಟಿ ಅಲ್ಲೇ ಬೀಳುವಂತಾಗುತ್ತಿತ್ತು.

* * * *

ತಂಗಿಗೆ ತನ್ನ ಬಗೆ ತಿಳಿಸುತ್ತ ಶಾಂತಿ "ಎಂತದೇ ಅಪ್ರೂ ಮದ್ವೆಯಾದುವಲ್ಲ್ದ? ಹೆಣ್ಣಾಗಿ ಹುಟ್ಟಬಾರ್ದೇ...ಹುಟ್ಟಬಾರಾ! ಎಲ್ಲಾ ಸರೀ ಇದ್ರೇ ಆತು. ಇಲ್ದಿದ್ರೆ..." ಎಂದು ಬಿಕ್ಕಹತ್ತಿದಳು. ತಂಗಿಯೂ ದನಿ ಬೆರಸಿದಳು. ಅಷ್ಟರಲ್ಲಿ ತಂದೆ ಕೆಮ್ಮಿದ ಸದ್ದು ಕೇಳಿಸಿತು ಇಬ್ಬರೂ

ಕಣ್ಣೊರಸಿಕೊಂಡರು. ಇತ್ತಿತ್ತಲಾಗಿ ಶಾನುಭೋಗರು ಮಗಳ ಚಿಂತೆಯಿಂದ ನೆಲಸಮವಾಗಿದ್ದರು. "ಕೈಯಾರೆ ಆನೇ ಕೊಂದ್ಹಾಂಗಾತಲೀ" ಎಂದು ದಿನವೂ ಹತ್ತು ಸಾರೆ "ಹುಶ್ಯೋ" ಎಂದುಕೊಳ್ಳುತ್ತಿದ್ದರು.

"ತಂಗೀ ಶಾಂತಿ, ಅಣ್ಣ ಎಂತದೋ ಕೇಳsವು ಹೇಳ್-ಮಾಡಿದ್ದೀ ಕೇಳs ?"

"ಹೂಂ, ಕೇಳs ಅದ್ಕೆಲ್ಲಾ ಎನ್ನ ಕೇಳsವನs !"

"ತಂಗೀ, ಈಗೆಲ್ಲಾ ಬದಿಗೂ ಪುನರ್ವಿವಾಹ ಆಗ್ತs...." ಮುಂದುವರಿಸಿದರು ಶಾನುಭೋಗರು.

"ಅಪ್ಪಯ್ಯಾss" ಮೊರೆ ಇಟ್ಟಳು ಶಾಂತಿ, ಆದರೂ ಶಾನುಭೋಗರ ಪುನರ್ವಿವಾಹದ ಒಳಿತನ್ನೂ, "ಎನ್ನಾಲಪ್ಪಲ್ಲೀವರೀಗ್-ಅಡ್ಡೀ ಇಲ್ಲೆ ನಾಳಂಗೇ" ಎಂದೂ, ಮೊದಲೊಮ್ಮೆ ತಾನು ಮಾಡಿದ ತಪ್ಪನ್ನು ಕ್ಷಮಿಸಿ ಪುನಃ ಮದುವೆಯಾಗಿ ಸುಖದಲ್ಲಿರಬೇಕೆಂದು ಒತ್ತಾಯ ಪಡಿಸಿದರು. ಹೇಳುವಾಗವರು ಮುಂದೆ ಮುಕ್ಕರಿಸುತ್ತಿದ್ದರು.

"ನೀ ಕಿರಿಯಾ ಆದ್ರೂ ಅಡ್ಡೀ ಇಲ್ಲೆ ...ಸೆರಗೊಡ್ಡೀ ಅಣ್ಣ ಹೇಳ್ದಾಂಗೇ ಮಾಡು ಆಗ್ದs ?" ಪಂಜೆಯ ಸೆರಗು ಮುಂದುಮಾಡಿ ಕೇಳಿದರು.

ತಂದೆಯ ಕಾಲುಗಳ ಮೇಲೆ ತಲೆಯನ್ನಿಟ್ಟು ಶಾಂತಿ ಮೇಲ್ಮೋರೆಮಾಡಿ

"ಅಪ್ಪಾ! ಅವ್ಕೆಲ್ಲಿದ್ರೂ ಖರೇ ಸಂಗ್ತಿ ತಿಳೀಗು ಮತ್ತೊಂದ್ ಲೋಕದಲ್ಲಿದ್ರೂ ಅಲ್ಲಾದ್ರೂ ಸುಖದಲ್ಲಿರ್ಲೀ! ಆ ಮತ್‌ಮದುವೆಯಾದ್ರೆ ಅಲ್ಲಿ 'ಅವ್ರ' 'ಹುಶ್ಯೋ!' ಬಿಂದ್ಕಂಡು ಬೇಯುಗ್ಗ ಅವ್ರ ಬೇಯ್ಕುತ್ತಿದ್ರೆ ಆ ಸುಖದಲ್ಲಿದ್ದು ಏನ್ ಮಾಡ್ಗಾಂಗಾತೋ ?" ಎಂದಳುತ್ತ ಹೃದಯವನ್ನೇ ತೋಡಿ ತೋರಿಸಿದಳು.

"ಅದೆಲ್ಲಾ ಹೌದು ನಾಳಂಗೇ ?" ತಂದೆ ಮುಂದಿನ ಬಗ್ಗೆ ಎಚ್ಚರವನ್ನಿತ್ತರು

"ಏನೇ ಆಗ್ಲಿ! ಎನ್ಗೆ ಕೂಳೀಗಿಲ್ದಿದ್ರೆ ಅಡ್ಡೀ ಇಲ್ಲೆ. ಕೈಲಪ್ಪಲ್ಲೀವರೀಗೆ ದುಡ್ಕಂಡ್ ತಿಂತಿಬಿಡು...."

ತಟ್ಟನೆ ಒಂದಿನಿತು ವೇಳೆ ಮೌನ ಆವರಿಸಿ ಗಂಭೀರ ವಾತಾವರಣವನ್ನು ನಿರ್ಮಿಸಿತ್ತು. ಶಾಂತಿ ಒಮ್ಮೆಲೇ—

“ಅಪ್ಪಾ ! ತಿರ್ಗಿ ಮದುವೆಯುಪ್ಪರಿದ್ರೆ ಆಗ್ಲೇ ಮಾವರಿಗೇ ‘ಹೂಂ’ ಹೇಳ್ತಿದ್ನೋ....!” ದುಃಖ ಮಿಶ್ರಿತ ಅಚಲ ಧ್ವನಿಯಲ್ಲಿ ಹೇಳಿದಳು. ಅಳು ಕಟ್ಟೊಡೆದು ಬಂದಿತು. ಆ ಮಹಾಪೂರದ ಆವೇಗದಲ್ಲಿಯೇ

“ಪುನರ್ವಿವಾಹ ?” ಎಂದು ಹೃದಯದ್ರಾವಕವಾಗಿ ನುಡಿಯುತ್ತ ದೇವರ ಕೋಣೆಯ ಕಡೆಗೆ ಧಾವಿಸಿದಳು.

ಶಾನುಭೋಗರು ಕಡೆಯದಾಗಿ ಕಂಡುದು ಮಗಳ ಸೀರೆಯ ಹರಿದ ಸೆರಗು ನೋಡುತ್ತಲೇ ಅವರು ತಲೆಗೆ ಕೈಕೊಟ್ಟು, ಅಲ್ಲೇ ಕುಕ್ಕರಿಸಿದರು. ಆಗ ಅವರಿಗೆ ಜಗತ್ತಿನ ಯಾವ ಅರಿವೂ ಇದ್ದಿಲ್ಲ ಆದರೆ, ಅವರ ಜೀವ ಪ್ರಪಂಚದ ನಾಡಿನಾಡಿಗಳಲ್ಲಿ—ಮಗಳ ಸೀರೆಯ ಹರಿದ ಸೆರಗು—ದುಃಖ ಪ್ರವಾಹದ ಅಲೆಅಲೆಗಳ ಮೇಲೆ ತೇಲಿ ಬಂದು ಅವರನ್ನು ಮುಸುಕಿತ್ತು !

---

# ಶರಾವತಿ ಪ್ರಕಟನೆ ಮಂದಿರ, ಶಿರಸಿ.



ಮನುಷ್ಯನನ್ನು ಉಚ್ಚ ಸಂಸ್ಕೃತಿಯ ಮಟ್ಟಕ್ಕೇರಿಸುವದಕ್ಕೆ ಪುಸ್ತಕಗಳಿಗಿಂತ ಮಿಗಿಲಾದ ಸಾಧನವಿಲ್ಲ. ಸತ್ವಶಾಲಿಯಾದ ಅನ್ನವು ದೇಹದ ಬೆಳವಣಿಗೆಗೆ ಅವಶ್ಯವಿರುವಂತೆ ಶ್ರೇಷ್ಠ ತರಗತಿಯ ಸಾಹಿತ್ಯವು ಬುದ್ಧಿಯ ಬೆಳವಣಿಗೆಗೆ ಅವಶ್ಯವಿರುತ್ತದೆ. ಮನುಷ್ಯನ ಬಾಳು ತೂಕದಿಂದ ಮುನ್ನಡೆಯ ಬೇಕಿದ್ದರೆ ಎರಡೂ ಬೇಕೇಬೇಕು. ಈ ದೃಷ್ಟಿಯನ್ನಿರಿಸಿಕೊಂಡು ನಾವು ಪುಸ್ತಕದ ಪ್ರಕಟನೆಗೆ ಕೈ ಹಾಕಿದ್ದೇವೆ. ಒಂದೇ ತೆರನಾದ ಅನ್ನ ದೇಹಕ್ಕೆ ಹಿತವೂ ಇಲ್ಲ; ಹಿಡಿಸುವದೂ ಇಲ್ಲ; ಅದರಂತೆ ಒಂದೇ ಬಗೆಯ ಸಾಹಿತ್ಯದಿಂದ ಆಗಬಹುದಾದಷ್ಟು ಹಿತ ಆಗಲಿಕ್ಕಿಲ್ಲ; ಬೇಸರವೂ ಬರಬಹುದು. ಅವನ್ನು ಅರಿತೇ ನಮ್ಮ ಪ್ರಕಟನೆ ಮಂದಿರದಿಂದ ಎಲ್ಲ ವಿಷಯುಗಳ ಬಗೆಗೆ ಪುಸ್ತಕಗಳನ್ನು ಪ್ರಕಟಿಸುವ ಯೋಜನೆಯನ್ನು ರೂಪಿಸಲಾಗಿದೆ ಅವಶ್ಯವೆನಿಸಿದರೆ ಆಗಾಗ ಬಿಡಿ ಮುತ್ತುಗಳ ಮುಖಾಂತರ ಹೆಚ್ಚೆಚ್ಚು ಪುಸ್ತಕಗಳನ್ನು ಪ್ರಸಿದ್ಧಿಸಬಹುದು. ಅದೆಲ್ಲವೂ ಸಹೃದಯಿಗಳೂ, ಉದಾರಿಗಳೂ ಆದ ಕೊಡುಗೈ ಓದುಗರ ನೆರವನ್ನೇ ಅವಲಂಬಿಸಿದೆ.

ಶ್ರೇಷ್ಠ ತರಗತಿಯ ಸಾಹಿತ್ಯವನ್ನು ಒದಗಿಸುವದರೊಂದಿಗೆ, ಪುಸ್ತಕಗಳು ಸರ್ವಾಂಗ ಸುಂದರವಾಗಿ ಪ್ರಕಟವಾಗಬೇಕೆಂಬುದು ನಮ್ಮ ಹಿರಿಗುರಿಯು! ಅಂತೆಯೇ ಪ್ರತಿ ಪ್ರಕಟನೆಗೂ 'ಆರ್ಟ' ಕಾಗದದ ಮೇಲೆ ಮುದ್ರಿತವಾದ ಮೂರು ಬಣ್ಣಗಳ ಮನ ಸೆಳೆಯುವ ಚಿತ್ರದ ರಕ್ಷಾಕವಚವಿರುತ್ತದೆ. ಹಾಲು ಕಾಗಗದ ಮೇಲೆ ಅಂದವಾಗಿ ಮುದ್ರಿಸುವದೇ ನಮ್ಮ ಪ್ರಕಟನೆಗಳ ವೈಶಿಷ್ಟವು.

ಸಪ್ಟಂಬರ, ಡಿಸೆಂಬರ, ಮಾರ್ಚ, ಜೂನ ತಿಂಗಳು ಮೊದಲ ವಾರದಲ್ಲಿ ಪ್ರಕಟನೆಗಳು ಹೊರಬೀಳುತ್ತವೆ.

**ಆಶ್ರಯದಾತರು:**

ಒಂದನೂರಾ ಐವತ್ತು ರೂಪಾಯಿಗಳನ್ನು ಕೊಡುವವರು

ಇವರಿಗೆ ಮಂದಿರದ ಪ್ರಕಟನೆಗಳೆಲ್ಲವೂ ( ಬಿಡಿಮುತ್ತುಗಳು ಸಹಿತ ) ಉಚಿತವಾಗಿ ದೊರೆಯುತ್ತವೆ.

**ಪೋಷಕರು:**

ನೂರು ರೂಪಾಯಿಗಳನ್ನು ಕೊಡುವವರು.

ಇವರಿಗೆ ಮಂದಿರದ ಪ್ರಕಟನೆಗಳೆಲ್ಲ ಉಚಿತವಾಗಿ ದೊರೆಯುತ್ತವೆ.

**ಸಹಾಯಕರು:**

ಐವತ್ತು ರೂಪಾಯಿಗಳನ್ನು ಕೊಡುವವರು

ಇವರಿಗೆ ಮಂದಿರದ ಪ್ರಕಟನೆಗಳು ಅರ್ಧ ಬೆಲೆಗೆ ದೊರೆಯುತ್ತವೆ.

**ಹಿತಚಿಂತಕರು:**

ಇಪ್ಪತ್ತೈದು ರೂಪಾಯಿಗಳನ್ನು ಕೊಡುವವರು.

ಇವರಿಗೆ ಮಂದಿರದ ಪ್ರಕಟನೆಗಳು ಕಾಲು ಬೆಲೆಗೆ ದೊರೆಯುತ್ತವೆ.

**ಚಂದಾದಾರರು:**

ಪ್ರತಿ ವರುಷಕ್ಕೆ ಐದು ರೂಪಾಯಿಗಳನ್ನು ಕೊಡುವವರು

ಇವರಿಗೆ ಮಂದಿರದ ನಾಲ್ಕು ಪ್ರಕಟನೆಗಳು ದೊರೆಯುತ್ತವೆ.

## ೧ ಚೆಂದುಟಿಯ ಮುತ್ತು

( ಐದು ಕತೆಗಳ ಸಂಕಲನ )

**ಶ್ರೀ ವೀ. ಚ. ಹಿತ್ತಲಮನಿ.**

## ೨ ಹರಿದ ಸೆರಗು

( ಕತೆಗಳು )

**ವಿ. ತಿ. ಶೀಗೆಹಳ್ಳಿ**

ಮೂರನೆಯ ಕುಸುಮ ಮೇ ಮೊದಲು ವಾರದಲ್ಲಿ ಅರಳುತ್ತದೆ.

ಕನ್ನಡಿಗರೆಲ್ಲರು ನಮ್ಮ ಈ ಸಾಹಸಕ್ಕೆ ತಮ್ಮ ಕೈಯಿಂದಾದ ನೆರವೀಯುವಿರೆಂದು ಆಶಿಸಲಾಗಿದೆ.